ಶಂಕರಮೊಕಾಶಿ ಪುಣೇಕರರ ಕಾದಂಬರಿಗಳಲ್ಲಿ 'ಸಂಪ್ರದಾಯ' ಮತ್ತು 'ಆಧುನಿಕತೆ' ನಡುವಿನ ಸಂಘರ್ಷ

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ
ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ
ಹೆಚ್.ಕೆ.ಅಶೋಕ

ಮಾರ್ಗದರ್ಶಕರು
ಡಾ.ವೆಂಕಟೇಶ ಇಂದ್ವಾಡಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

100 A

ಶಂಕರಮೊಕಾಶಿ ಪುಣೇಕರರ ಕಾದಂಬರಿಗಳಲ್ಲಿ 'ಸಂಪ್ರದಾಯ' ಮತ್ತು 'ಆಧುನಿಕತೆ' ನಡುವಿನ ಸಂಘರ್ಷ

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ
ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ
ಹೆಚ್.ಕೆ.ಅಶೋಕ

ಮಾರ್ಗದರ್ಶಕರು
ಡಾ.ವೆಂಕಟೇಶ ಇಂದ್ವಾಡಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಏಪ್ರಿಲ್ ೨೦೦೫

ಪ್ರಮಾಣ ಪತ್ರ

ಶಂಕರಮೊಕಾಶಿ ಪುಣೇಕರರ ಕಾದಂಬರಿಗಳಲ್ಲಿ 'ಸಂಪ್ರದಾಯ' ಮತ್ತು 'ಆಧುನಿಕತೆ'ಯ ನಡುವಿನ ಸಂಘರ್ಷ ಎಂಬ ನಿಬಂಧವನ್ನು ಡಾ.ವೆಂಕಟೇಶ್ ಇಂದ್ವಾಡಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಭಾಷಾ ನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಎಚ್.ಕೆ.ಅಶೋಕ)
ಎಂ.ಫಿಲ್.ವಿದ್ಯಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : ೩೦.೦೪.೨೦೦೫

ಮಾರ್ಗದರ್ಶಕರ ಪ್ರಮಾಣಪತ್ರ

ಶಂಕರಮೊಕಾಶಿ ಪುಣೇಕರರ ಕಾದಂಬರಿಗಳಲ್ಲಿ 'ಸಂಪ್ರದಾಯ' ಮತ್ತು 'ಆಧುನಿಕತೆ'ಯ ನಡುವಿನ ಸಂಘರ್ಷ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಹೆಚ್.ಕೆ.ಅಶೋಕ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ವೆಂಕಟೇಶ ಇಂದ್ವಾಡಿ
ಮುಖ್ಯಸ್ಥರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : ೩೦.೦೪.೨೦೦೫

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧

ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ

ಪೀಠಿಕೆ

ಭಾರತೀಯ ಸಾಹಿತ್ಯ ಚರಿತ್ರೆಯಲ್ಲಿ ಕನ್ನಡ ಸಾಹಿತ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಸುದೀರ್ಘವಾದ ಇತಿಹಾಸವಿದ್ದು, ಆಯಾಯ ಕಾಲದ ಚಿಂತನಧಾರೆಯ ಪ್ರಭಾವಗಳಿಗೆ ಒಳಗಾಗಿ, ಕಾಲಕಾಲಕ್ಕೆ ತಕ್ಕಂತೆ ಅನೇಕ ರೂಪಗಳನ್ನು ಧರಿಸುತ್ತ ತನ್ನ ತನವನ್ನು ಸಾಧಿಸಿಕೊಂಡು ಮೂಡಿಬಂದಿದೆ.ಒಂದು ಭಾಷೆಯೊಳಗೆ ಸಂಭವಿಸುವ ಬದಲಾವಣೆ ಎಂದರೆ, ಒಂದು ನಾಡಿನ ಜನರ ಬದುಕಿನಲ್ಲಾದ ಬದಲಾವಣೆಯಾಗಿದೆ. ಹೀಗಾಗಿ ಕನ್ನಡ ಸಾಹಿತ್ಯವೂ ಇತಿಹಾಸದಲ್ಲಿ ಪಡೆದುಕೊಂಡ ಪರಿವರ್ತನೆಗಳಿಗೆ ಹೋಲಿಸಿ ನೋಡಿದರೆ, ೧೮-೧೯ನೇ ಶತಮಾನದಲ್ಲಿ ಸಂಭವಿಸಿದ ತಿರುವುಗಳು ಮಹತ್ವವಾದವು.

೧೮-೧೯ನೇ ಶತಮಾನದ ಪೂರ್ವದ್ದೆಲ್ಲ ಪ್ರಾಚೀನ, ನಂತರದ್ದೆಲ್ಲಾ ಆಧುನಿಕ ಎಂಬ ವಿಂಗಡನೆಯು ಈ ಕಾಲದಲ್ಲಾಯಿತು. ವಸಾಹತುಷಾಹಿ ಉಂಟುಮಾಡಿದ ಒಡಕು ಇದು. ಪ್ರಾಚೀನ ಸಾಹಿತ್ಯದಲ್ಲಿ ಶಿಷ್ಟ-ಪರಿಶಿಷ್ಟ ಎನ್ನುವ ಅಂತರವಿದ್ದರೂ, ಅದು ಒಳಗಿನಿಂದಲೇ ಸೃಷ್ಟಿಯಾದ ಅಂತರ. ಬ್ರಿಟಿಷರು ಭಾರತವನ್ನು ಆಳಿದಷ್ಟೇ ಅಲ್ಲ, ಸಾಮಾಜಿಕ, ಆರ್ಥಿಕ, ರಾಜಕೀಯ, ಶಿಕ್ಷಣ... ಹೀಗೆ ಇನ್ನು ಮುಂತಾದ ರಂಗಗಳಲ್ಲಿ ಅಮೂಲಾಗ್ರವಾದ ಬದಲಾವಣೆಯನ್ನು ಉಂಟುಮಾಡಿದರು. ಆದ್ದರಿಂದ ವಸಾಹತುಷಾಹಿ ಆಳ್ವಿಕೆಗೆ ಒಳಪಟ್ಟ ದೇಶಗಳೆಲ್ಲಾ ಇಂದು ಪ್ರಾಚೀನ ಮತ್ತು ಆಧುನಿಕ ಎಂದು ವಿಭಾಗಿಸಿಕೊಂಡಿವೆ.

ಉದ್ದೇಶ

ಸಾಹಿತ್ಯದಲ್ಲೂ, ಕಾವ್ಯ, ಕತೆ, ಕಾದಂಬರಿ, ಲೇಖನ, ಪ್ರಬಂಧ, ಇನ್ನೂ ಮುಂತಾದ ಹೊಸ ಹೊಸ ಅಭಿವ್ಯಕ್ತಿಯ ರೂಪಗಳು ಹುಟ್ಟಿಕೊಂಡವು. ಈ ಸೃಜನಶೀಲ ಪ್ರಕಾರಗಳು ಪ್ರಾಚೀನ ಆಧುನಿಕ ಎನ್ನುವ ಸಂಘರ್ಷಗಳನ್ನು ನಿರಂತರವಾಗಿ ಎದುರಿಸುತ್ತಾ ಬಂದಿವೆ. ಸಾಹಿತ್ಯ ಕೃತಿಯ ಒಳಗೆ ಸಂಸ್ಕೃತಿಯ ಗ್ರಹಿಕೆಯ ಕೆಲಸವನ್ನು ಮಾಡುವುದರ ಮೂಲಕವಾಗಿ, ಸಮಕಾಲೀನ ಸಾಂಸ್ಕೃತಿಕ ಪ್ರಕ್ರಿಯೆಗಳಲ್ಲಿ ಜೀವಂತವಾಗಿ ಸ್ಪಂದಿಸಬೇಕಾಯಿತ್ತು. ಪರಂಪರೆಯಿಂದ ಮೂಡಿಬಂದ ಸಂಪ್ರದಾಯವನ್ನು ವೈಚಾರಿಕತೆಯ ನೆಲೆಯಲ್ಲಿ ಸಮಕಾಲೀನ ಬದುಕಿನೊಳಗೆ ಜೀವಂತವಾಗಿ ಬೆಸೆಯುವ ಕ್ರಮದಲ್ಲಿ ನಾವು ಸಂಪ್ರದಾಯ ಹಾಗೂ ಆಧುನಿಕತೆಯ ನಡುವೆ ಸಂಘರ್ಷವನ್ನು ಕಾಣಬಹುದು.

[illegible]

[illegible]

[illegible]

ಈ ಆಧುನಿಕತೆಯ ಚಿಂತನೆಯು ಲೋಕಗ್ರಹಿಕೆಯನ್ನು ಬಹುಮುಖಿ ಹಾಗೂ ಸಂಪೂರ್ಣ ವಿಕಸನಶೀಲವೆಂದು, ಈ ವಿಕಸನಶೀಲತೆಯು ವರ್ತಮಾನವನ್ನು ದೊಡ್ಡದೆಂದೂ, ಹಾಗೂ ಶ್ರೇಷ್ಠವೆಂದು ನಂಬಿ, ತನಗಿಂತ ಹಿಂದಿನದ್ದನ್ನು ಈ ಮಾನದಂಡದಿಂದಲೇ ಅಳೆಯಲು ಯತ್ನಿಸಿರುವುದು ಒಂದು ಮಾದರಿಯಾದರೆ, ಅಮೌಲ್ಯಯುಕ್ತ ಸಂಪ್ರದಾಯದಿಂದ ತಮ್ಮ ಸಂಬಂಧವನ್ನು ಬೇರ್ಪಡಿಸಿಕೊಂಡು ದೂರ ಸಿಡಿಯುವುದು ಇಂದಿನ ಶ್ರೇಷ್ಠತೆ ಎನ್ನುವುದು ಇನ್ನೊಂದು ಮಾದರಿಯಾಗಿದೆ. ಹೀಗಾಗಿ ಕೆಲವರು ಆಧುನಿಕ ಬದುಕಿಗೆ ಒಲವು ತೋರಿಸಿದವರು. ಮತ್ತೆ ಕೆಲವರು ಪ್ರಾಚೀನತೆಯ ಉತ್ತಮ ಮೌಲ್ಯಗಳನ್ನು ಪುನರ್ ನೆನಪಿಸಿಕೊಂಡವರು. ಮತ್ತೆ ಕೆಲವರು ಈ ಪ್ರಾಚೀನತೆ ಹಾಗೂ ಆಧುನಿಕತೆಯನ್ನು ಸಂಪ್ರದಾಯ ಹಾಗೂ ಆಧುನಿಕತೆ ಎಂಬ ನೆಲೆಯಲ್ಲಿ ಪರಸ್ಪರ ಸಂಘರ್ಷಿಸಿ ಕೊನೆಗೆ ಇವೆರಡು ಸಂಮಿಳಿತವಾದಾಗ ಸೃಜನಶೀಲ ಬದುಕೊಂದು ನಿರ್ಮಾಣವಾಗಬಲ್ಲದೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಇಂತಹವರ ಸಾಲಿಗೆ ಸೇರುವವರು ಶಂಕರಮೊಕಾಶಿ ಪುಣೇಕರರು.

ಶಂಕರಮೊಕಾಶಿ ಪುಣೇಕರರು ತಮ್ಮ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎನ್ನುವ ಪರಿಕಲ್ಪನೆಯನ್ನು ಗಂಭೀರವಾಗಿ ತೆಗೆದುಕೊಂಡವರು. ಅಂದರೆ ಹಳೆಯದೆಲ್ಲಾ (ಪ್ರಾಚೀನ) ಶ್ರೇಷ್ಠ ಎನ್ನುವ ತರದಲ್ಲೂ ಅಲ್ಲ. ಹೊಸದೆಲ್ಲಾ ರೋಗಗ್ರಸ್ಥವಾದದ್ದು ಎನ್ನುವ ರೀತಿಯಲ್ಲೂ ಅಲ್ಲ. ಇವೆರಡು ಒಂದು ಸಾಮಾಜಿಕ ರಚನೆಯಲ್ಲಿ ಹೇಗೆ ಅನಿವಾರ್ಯವಾಗಿವೆ ಎಂಬ ಸಂಗತಿಯನ್ನು ತಮ್ಮ ಸಾಹಿತ್ಯ ಕೃತಿಗಳಲ್ಲಿ ಸೂಕ್ಷ್ಮವಾಗಿ ತಿಳಿಸಿದವರು. ಈ ಸಂಘರ್ಷಗಳು ಹೇಗೆ ಸಂಮಿಳಿತವಾಗಿ ಸೃಜನಶೀಲ ಕೃತಿಯೊಂದು ಹುಟ್ಟಬಲ್ಲದು ಎಂಬ ವಿಚಾರವನ್ನು ಇವರ ಕಾದಂಬರಿಗಳ ಮೂಲಕ ನೋಡುವ ಉದ್ದೇಶ ಈ ನಿಬಂಧದ್ದು. ಇದು ಈ ಅಧ್ಯಯನದ ಮಹತ್ವವೂ ಆಗಿದೆ.

ಶಂಕರಮೊಕಾಶಿ ಪುಣೇಕರರ ಕಾದಂಬರಿಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷದ ಸ್ವರೂಪವನ್ನು ಗ್ರಹಿಸಿ ವಿಶ್ಲೇಷಿಸುವುದು ಮತ್ತು ಈ ಎರಡು ಸಂಘರ್ಷಗಳ ಬಗೆಗೆ ಪುಣೇಕರರ ನಿಲುವುಗಳೇನೂ ಹಾಗೂ ಪುಣೇಕರರು ಬಯಸಿದ ಆಧುನಿಕತೆಯ ಸ್ವರೂಪವೂ ಯಾವ ರೀತಿಯದ್ದು ಎಂಬುದನ್ನು ಅರಿಯುವುದರ ಜೊತೆಯಲ್ಲಿ, ೧೯೨೮ರಲ್ಲಿ ಜನಿಸಿದ ಇವರು ೨೦೦೪ರವರೆಗಿನ ತಮ್ಮ ಜೀವಿತಾವಧಿಯಲ್ಲಿ ನವೋದಯ, ಪ್ರಗತಿಶೀಲ, ನವ್ಯ ಹಾಗೂ ನವ್ಯೋತ್ತರ ಪಂಥಗಳ ಸಾಹಿತ್ಯಿಕ ಲಕ್ಷಣಗಳನ್ನು ಕಣ್ಣೆದುರಿಗೆ ಕಂಡವರು. ಇವರು ಈ ಯಾವುದೇ ಒಂದು ಪಂಥಕ್ಕೆ ತಮ್ಮ ಸಾಹಿತ್ಯ ಕೃತಿಯನ್ನು ಸಮರ್ಪಿಸಿಕೊಂಡವರಲ್ಲ. ಆದರೆ ಈ ಎಲ್ಲಾ ಪಂಥಗಳ ಲಕ್ಷಣಗಳನ್ನು ಇವರ ಕೃತಿಗಳಲ್ಲಿ ಕಾಣಬಹುದು. ಅಂದರೆ ಜಿ.ಎಸ್.ಶಿವರುದ್ರಪ್ಪ ಹಾಗೂ ಚನ್ನವೀರಕಣವಿಯವರ ರೀತಿ ಸಮನ್ವಯ ಲೇಖಕರು ಅಲ್ಲ. ಒಟ್ಟಾರೆ ಸಂಸ್ಕೃತಿ ಚಿಂತಕರಾಗಿ ತಮ್ಮ ಪ್ರತ್ಯೇಕತೆಯನ್ನು ಉಳಿಸಿಕೊಂಡವರು. ಹೀಗಾಗಿ ಕನ್ನಡ ಸಾಹಿತ್ಯವಲಯದಲ್ಲಿ ಇವರು ಇತರರಿಗಿಂತ ಹೇಗೆ ಭಿನ್ನರಾಗುತ್ತಾರೆ ಮತ್ತು ಇವರ ವಿಶೇಷತೆ ಏನು ಎಂಬುದನ್ನು ಸಂಕ್ಷಿಪ್ತವಾಗಿ ಅಧ್ಯಯನ ಭಾಗಗಳಲ್ಲಿ ನೋಡಬಯಸಿದ್ದೇನೆ.

ಲೇಖಕರ ಸಂಕ್ಷಿಪ್ತ ಜೀವನ ಚರಿತ್ರೆ

ಶಂಕರಮೊಕಾಶಿ ಪುಣೇಕರರು ೧೯೨೮ರಲ್ಲಿ ಧಾರವಾಡದಲ್ಲಿ ಜನಿಸಿ ಅಲ್ಲಿಯೇ ಶಿಕ್ಷಣವನ್ನು ಮುಗಿಸಿದರು. ಬಿಜಾಪುರ, ಕಾರವಾರ, ಧಾರವಾಡ ಮುಂತಾದ ಕಡೆಗಳಲ್ಲಿ ಪ್ರೌಢಶಾಲಾ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದ ಇವರು ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ.ಪದವಿಯನ್ನು ಪಡೆದು, ನಂತರ ಅಲ್ಲಿಯೇ ಪಿಎಚ್.ಡಿ.ಪದವಿಯನ್ನು ಪಡೆದರು. ನಂತರದಲ್ಲಿ ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಪ್ರಾಧ್ಯಾಪಕರಾಗಿ ಕೆಲಸ ಮಾಡಿ ೧೯೮೦ರಲ್ಲಿ ನಿವೃತ್ತರಾದರು. ನಂತರ ಮೂರು ವರ್ಷಗಳ ಕಾಲ ಶ್ರೀ ಸತ್ಯಸಾಯಿ ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು.

ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಸುಮಾರು ನಲವತ್ತಕ್ಕೂ ಅಧಿಕ ಕೃತಿಗಳನ್ನು ರಚಿಸಿದ್ದಾರೆ. ಹರಪ್ಪಾ ಮೊಹೆಂಜಾದಾರೋವಿನ ಕೆಲವು ಮುದ್ರಿಕೆಗಳಲ್ಲಿ ದೊರೆಯುವ ಅಂಶಗಳ ಆಧಾರದ ಮೇಲೆ ಸಂಶೋಧನೆ ನಡೆಸಿ, ಈ ವಸ್ತುವಿನ ಆಧಾರದ ಮೇಲೆ ಅವಧೇಶ್ವರಿಯನ್ನು ರಚಿಸಿದ್ದಾರೆ. ೧೯೮೮ರ ಪ್ರತಿಷ್ಠಿತ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದಿದ್ದಾರೆ. ಇವರ ಗಂಗವ್ವ ಗಂಗಾಮಾಯಿ ಎಲ್ಲಾ ಭಾರತೀಯ ಭಾಷೆಗಳಿಗೆ ಅನುವಾದವಾಗಿದೆ.

ಭಾಷಾಂತರಕಾರರಾಗಿಯೂ ಕೆಲಸ ಮಾಡಿದ ಪುಣೇಕರರು ಇವರ ಪ್ರಥಮ ಕವನಸಂಕಲನ ೧೯೪೭ರಲ್ಲಿ ಪ್ರಕಟವಾಯಿತು. ನಂತರದಲ್ಲಿ ಗಂಗವ್ವ ಗಂಗಾಮಾಯಿ(೧೯೫೫-೫೬) ಅವಧೇಶ್ವರಿ(೧೯೮೭), ನಟನಾರಾಯಣಿ(೧೯೮೮) ಎಂಬ ಮೂರು ಕಾದಂಬರಿಗಳನ್ನು ರಚಿಸಿದ್ದಾರೆ. ಆಂಗ್ಲ ಭಾಷೆಯಲ್ಲಿಯೇ ಬಹಳಷ್ಟು ಕೃತಿಗಳನ್ನು ರಚಿಸಿರುವ ಇವರು 'The later phase in the Development of W.B.Yeats'ಎಂಬ ವಿಷಯದ ಬಗ್ಗೆ ಅಧ್ಯಯನ ಮಾಡಿ ೧೯೬೬ರಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದರು. ಜೊತೆಗೆ ಹಲವಾರು ವಿಮರ್ಶಾ ಲೇಖನಗಳನ್ನು ಬರೆದಿದ್ದಾರೆ. ಅವುಗಳಲ್ಲಿ 'ಬೇಂದ್ರೆಯವರ ಕಾವ್ಯಮೀಮಾಂಸೆ', 'ಸಾಹಿತ್ಯ ಮತ್ತು ಅಭಿರುಚಿ', 'ಪಾಶ್ಚಾತ್ಯ ವಿಮರ್ಶೆಯ ಇತಿಹಾಸ' ಎಂಬುವು ಮಹತ್ವದ ಕೃತಿಗಳು.

ಸಂಶೋಧನೆಯ ಬಗ್ಗೆ ಒಲವಿದ್ದ ಇವರು ಸಿಂಧೂಬಯಲಿನ ನಾಗರೀಕತೆಯ ಬಗ್ಗೆ ಕೈಗೊಂಡ ಸಂಶೋಧನೆಯು ಅನೇಕ ಮಹತ್ವದ ಸುಳಿವುಗಳನ್ನು ನೀಡಿದೆ. ಇದರ ಆಧಾರದಿಂದ 'ಅವಧೇಶ್ವರಿ' ಕೃತಿಯನ್ನು ರಚಿಸಿದ್ದ ಇವರು ೨೦೦೪ ಆಗಸ್ಟ್ ತಿಂಗಳಿನಲ್ಲಿ ಮರಣ ಹೊಂದಿದರು.

ಅಧ್ಯಯನದ ವ್ಯಾಪ್ತಿ

ಇದೊಂದು ಪರಿಕಲ್ಪನೆ ಆಧಾರಿತ ಅಧ್ಯಯನ. ಹೀಗಾಗಿ ಈ ಅಧ್ಯಯನದ ವ್ಯಾಪ್ತಿಯು ಕೂಡ ನಿರ್ದಿಷ್ಟತೆಯಿಂದಲೇ ಕೂಡಿದೆ. ಮೊದಲಿಗೆ ಅಧ್ಯಯನ ಉದ್ದೇಶ ವ್ಯಾಪ್ತಿಯಿಂದ ಪ್ರಾರಂಭಿಸಿ, ಎರಡನೇ ಘಟ್ಟವಾಗಿ ಒಟ್ಟಾರೆ ಪುಣೇಕರ ಸಾಹಿತ್ಯವನ್ನು ಕುರಿತು ಯಾವುದೇ ಅಧ್ಯಯನಗಳು ನಡೆದಿಲ್ಲದಿರುವುದರಿಂದ,

[illegible]

ಈ ಕಾದಂಬರಿಗಳನ್ನು ಕುರಿತು ಬಂದ ವಿಮರ್ಶಾ ಲೇಖನಗಳನ್ನು ಗ್ರಹಿಸಿ, ಈ ವಿಮರ್ಶಾಲೇಖನಗಳ ಒಟ್ಟಾರೆ ತಾತ್ವಿಕ ನಿಲುವುಗಳೇನು? ಎಂಬುದನ್ನು ಹೇಳಲು ಪ್ರಯತ್ನಿಸಿದೆ. ನಂತರ ಸಂಪ್ರದಾಯ ಹಾಗೂ ಆಧುನಿಕತೆ ಎಂಬ ಪರಿಕಲ್ಪನೆಗಳನ್ನು ವಿಶ್ಲೇಷಿಸಿ, ಸಂಪ್ರದಾಯಿ ಮತ್ತು ಆಧುನಿಕತೆ ಎಂದರೇನು? ಎಂಬುದಕ್ಕೆ ಸಾಮಾನ್ಯ ಅರ್ಥವೇನು? ಎಂಬುದನ್ನು ತಿಳಿದುಕೊಂಡು ಸಾಹಿತ್ಯದಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ಸ್ವರೂಪ ಹೇಗಿದೆ? ಎಂಬುದನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಮೂರನೇ ಘಟ್ಟವಾಗಿ ಈ ನಿಬಂಧದ ಮುಖ್ಯಭಾಗವಾಗಿ ಈ ಮೇಲ್ಕಂಡ ಮೂರು ಕಾದಂಬರಿಗಳನ್ನು ಇಟ್ಟುಕೊಂಡು ಸಂಪ್ರದಾಯ ಮತ್ತು ಆಧುನಿಕತೆಗಳ ನಡುವಿನ ಸಂಘರ್ಷದ ಸ್ವರೂಪವನ್ನು ವಿಶ್ಲೇಷಿಸಲಾಗಿದೆ. ಮತ್ತು ಪುಣೆಕರರು ಬಯಸಿದ ಆಧುನಿಕತೆಯೂ ಯಾವ ಸ್ವರೂಪದ್ದು ಎಂದು ತಿಳಿಯಪಡಿಸಲಾಗಿದೆ. ಅಂತಿಮವಾಗಿ ಒಟ್ಟಾರೆ ಈ ಅಧ್ಯಯನದಲ್ಲಿ ಏನನ್ನು ಹೇಳಬಯಸಲಾಗಿದೆ ಹಾಗೂ ಪುಣೇಕರರು ಸಾಹಿತ್ಯ ವಲಯದಲ್ಲಿ ಭಿನ್ನವಾಗಿ ಕಾಣಲು ಕಾರಣಗಳೇನು? ಎಂಬುದನ್ನು ಉಪಸಂಹಾರ ಭಾಗದಲ್ಲಿ ಚರ್ಚಿಸಲಾಗಿದೆ. ಕೊನೆಗೆ ಈ ಅಧ್ಯಯನಕ್ಕೆ ಬಳಸಿಕೊಂಡ ಪರಾಮರ್ಶನ ಕೃತಿಗಳನ್ನು ಸೂಚಿಸಲಾಗಿದೆ.

ಈ ನಿಬಂಧದ ರಚನೆಗಾಗಿ ಪ್ರಾಥಮಿಕ ಆಕರಗಳಾಗಿ ಶಂಕರಮೊಕಾಶಿ ಪುಣೇಕರರ ಕೆಳಗಿನ ಕೃತಿಗಳನ್ನು ಬಳಸಿಕೊಂಡಿದ್ದೇನೆ.

೧. ಗಂಗವ್ವಗಂಗಾಮಾಯಿ

೨. ನಟನಾರಾಯಣಿ

೩. ಅವಧೇಶ್ವರಿ

ಇವುಗಳ ಜೊತೆಗೆ ಈ ಕಾದಂಬರಿಗಳನ್ನು ಕುರಿತು ಬಂದ ವಿಮರ್ಶಾ ಲೇಖನಗಳನ್ನು ಗಮನಿಸಲಾಗಿದೆ.

ಅಧ್ಯಯನ ವಿಧಾನ

ಕಳೆದ ಒಂದು ದಶಕದಿಂದ ನಮ್ಮ ಅಧ್ಯಯನಗಳ ಚಿಂತನಕ್ರಮದಲ್ಲಿ ರ್‍ಯಾಷನಲ್ ಚಿಂತನಕ್ರಮ ಹೆಚ್ಚು ಪ್ರಭಾವಿತವಾಗಿದೆ. ವೈಜ್ಞಾನಿಕ-ವೈಚಾರಿಕ ವಿಶ್ಲೇಷಣೆಗಳಿಂದಲೇ ಎಲ್ಲವನ್ನು ವಿವರಿಸಿ ಬಿಡುವ ಕ್ರಮವಿದು. ಆದರೆ ಇತ್ತೀಚಿಗೆ ಸಂಸ್ಕೃತಿ ಕುರಿತ ಚಿಂತನ ಕ್ರಮಗಳಲ್ಲಿ ಪ್ರಾಚೀನ ಸಾಹಿತ್ಯವನ್ನು ಅಥವಾ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ವೈಚಾರಿಕ ಮಾನದಂಡಗಳಷ್ಟೇ ಮುಖ್ಯವಲ್ಲ. ಆಯಾಯಾ ಸಮಾಜ, ಸಂಸ್ಕೃತಿಗಳ ನಂಬಿಕೆ, ಸಂಪ್ರದಾಯ ಪದ್ಧತಿ ಇತ್ಯಾದಿಗಳ ಹಿಂದೆ ಇರುವ ತಾತ್ವಿಕತೆ ಏನು? ಎಂದು ಹುಡುಕಾಡುವ ಪ್ರಯತ್ನಗಳು ನಡೆಯುತ್ತಿದೆ. ಇದು ಕೆಲವು ಇತ್ತಿಚ್ಚಿನ ವರ್ಷಗಳಲ್ಲಿ ಎಂಬುದು ಸ್ಪಷ್ಟವಾಗಿದೆ. ನಾನು ಈ ಅಧ್ಯಯನದಲ್ಲಿ ಕನ್ನಡ ಸಂಸ್ಕೃತಿ ಚಿಂತನೆಯ ಮಾದರಿಯನ್ನು ಅನುಸರಿಸುವ ಪ್ರಯತ್ನ ಮಾಡಿದ್ದೇನೆ.

ಅಧ್ಯಾಯ ೨

ಇದುವರೆಗೆ ಬಂದಿರುವ ವಿಮರ್ಶಾ ಲೇಖನಗಳ ಸಮೀಕ್ಷೆ

ಇದುವರೆಗೆ ಬಂದಿರುವ ವಿಮರ್ಶಾ ಲೇಖನಗಳ ಸಮೀಕ್ಷೆ

ಶಂಕರ ಮೊಕಾಶಿ ಪುಣೇಕರರು ೧೯೪೭ರಲ್ಲಿ 'ಗಾನಕೇಳಿ' ಎಂಬ ಕವನ ಸಂಕಲದಿಂದ ತಮ್ಮ ಸಾಹಿತ್ಯ ಕೃಷಿಯನ್ನು ಆರಂಭಿಸಿ, ಸುಮಾರು ನಲವತ್ತಕ್ಕೂ ಅಧಿಕ ಕೃತಿಗಳನ್ನು ಕವಿಯಾಗಿ, ವಿಮರ್ಶಕರಾಗಿ, ಸಂಶೋಧಕ ಬರಹಗಾರರಾಗಿ ಕನ್ನಡ ಹಾಗು ಆಂಗ್ಲಭಾಷೆಗಳೆರಡರಲ್ಲೂ ಕೃತಿಗಳನ್ನು ರಚಿಸಿದ್ದಾರೆ. ಅದರಲ್ಲೂ 'ಸಿಂಧೂ ಬಯಲಿನ ನಾಗರೀಕತೆಯ' ಬಗೆಗಿನ ಇವರ ಅಧ್ಯಯನ ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವಪೂರ್ಣವಾಗಿದೆ.

ಪುಣೇಕರರ ಒಟ್ಟು ಸಾಹಿತ್ಯವನ್ನೇ ಆಗಲಿ, ಅಥವಾ ಇವರ ಕಥೆ, ಕಾದಂಬರಿಗಳನ್ನೇ ಆಗಲಿ ಕುರಿತು ಯಾವುದೇ ಅಧ್ಯಯನಗಳು ಇದುವರೆಗೂ ನಡೆದಿಲ್ಲ. ಆದರೆ ಪುಣೇಕರರ ಕೃತಿಗಳ ಬಗ್ಗೆ ಕುರಿತು ಬಂದ ವಿಮರ್ಶಾ ಲೇಖನಗಳು ಹಲವಾರು. ಆ ವಿಮರ್ಶಾ ಲೇಖನಗಳಲ್ಲಿ ೧೯೫೫-೫೭ರಲ್ಲಿ ಪ್ರಕಟವಾದ ಪ್ರಥಮ ಕಾದಂಬರಿ 'ಗಂಗವ್ವಗಂಗಾಮಾಯಿ'ಯನ್ನು ಕುರಿತು ಬಂದ ಲೇಖನಗಳೇ ಅಧಿಕವಾಗಿವೆ. ಆದರೆ ಇವರ ಉಳಿದ ಕೃತಿಗಳನ್ನು ಕುರಿತು ಅಷ್ಟೊಂದು ವಿಮರ್ಶೆಯು ಮೂಡಿಬಂದಿಲ್ಲದೆ ಇರುವುದು ಒಂದು ಕೊರತೆಯೇ. ಪುಣೇಕರರ ಸಾಹಿತ್ಯಕ್ಕೆ ಹಲವಾರು ಪ್ರಶಸ್ತಿಗಳು ಬಂದಿರುವುದನ್ನು ಗಮನಿಸಬಹುದು. ಆ ವೇಳೆಯಲ್ಲಿ ಪತ್ರಿಕೆಗಳಲ್ಲಿ ಕೆಲವಾರು ಲೇಖನಗಳು ಪ್ರಕಟವಾಗಿರುವುದನ್ನು ನಾವು ಗುರುತಿಸಬಹುದು.

ಶಂಕರಮೊಕಾಶಿ ಪುಣೇಕರರಿಗೆ '೭೦' ವರ್ಷ ತುಂಬಿದ ನೆನಪಿಗಾಗಿ ಇವರ ಅಭಿಮಾನಿಗಳು, "ಗಂಧಕೊರಡು" ಎಂಬ ಶೀರ್ಷಿಕೆಯ ಗೌರವಾರ್ಥ ಸಂಪಾದನಾ ಕೃತಿಯನ್ನು ಅರ್ಪಿಸಿದ್ದಾರೆ.

ಪುಣೇಕರರ 'ಗಂಗವ್ವ ಗಂಗಾಮಾಯಿ' ಕೃತಿಯನ್ನು ರಚಿಸಿದ ನಂತರ ಕುರಿತು ವಿಮರ್ಶಕರ ವಲಯದಲ್ಲಿ ಮೂಡಿದ ಅಭಿಪ್ರಾಯವೆಂದರೆ, "ಸಂಪ್ರದಾಯದ ಗಟ್ಟಿತನವನ್ನು ಉಳಿಸಿಕೊಂಡ ಲೇಖಕ" ಎಂದು. ಈ ರೀತಿಯ ಅಭಿಪ್ರಾಯವೂ ಸಾಮಾನ್ಯವಾಗಿ ಹೋಗಿದೆ. ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ವಾಸ್ತವವಾದ ತೀವ್ರವಾಗಿದ್ದ ಕಾಲಘಟ್ಟದಲ್ಲೇ ಗಂಗವ್ವಗಂಗಾಮಾಯಿ ಪ್ರಕಟವಾಯಿತ್ತು. ಹೀಗಾಗಿ ಬಹುಬೇಗ ಚರ್ಚೆಗೆ ಒಳಗಾಯಿತ್ತು.

"ಶಂಕರ ಮೊಕಾಶಿ ಪುಣೇಕರರು ಹಠದಿಂದ ಸಂಪ್ರದಾಯವನ್ನು ಅನುಸರಿಸಿದ್ದಾರೆಂದು"[೧] ತಮ್ಮ ಅಭಿಪ್ರಾಯವನ್ನು ಸೂಚಿಸುತ್ತಾರೆ. ಆದರೆ ಇದಕ್ಕೆ ಅಷ್ಟೇ ವಿರುದ್ಧ ಎಂಬಂತೆ, "ಶಂಕರಮೊಕಾಶಿ ಪುಣೇಕರರ

ಕನ್ನಡ ಕೃತಿಗಳ ಸ್ವಭಾವ ಬಣ್ಣ, ಆಕಾರಗಳು ಏಕಕಾಲಕ್ಕೆ ಆಧುನಿಕವೂ ಆಗಿವೆ; ಸಾಂಪ್ರದಾಯಕವೂ ಆಗಿವೆ.''[೨] ಎಂಬ ಅಭಿಪ್ರಾಯವೂ ವ್ಯಕ್ತವಾಗಿರುವುದು ಗೋಚರಿಸುತ್ತದೆ.

''೨೦ನೇ ಶತಮಾನದ ಕನ್ನಡದ ಹತ್ತು ಶ್ರೇಷ್ಠ ಕಾದಂಬರಿಗಳನ್ನು ಪಟ್ಟಿ ಮಾಡುವಾಗ, 'ಗಂಗವ್ವಗಂಗಾಮಾಯಿ'ಯೂ ಕೂಡ ಒಂದೆಂದು ಗುರುತಿಸುತ್ತಾರೆ.[೩] ಇದು ಇವರ ವೈಯಕ್ತಿಕ ನಿಲುವಾದರೂ, ಇವರು ನೀಡುವ ಸಮರ್ಥನೆ ಎಂದರೆ, 'ಸಂಪ್ರದಾಯ ಮತ್ತು ಆಧುನಿಕತೆಯನ್ನು ಒಟ್ಟಿಗೆ ಹಿಡಿದಿರುವುದರಿಂದ' ೨೦ನೇ ಶತಮಾನದ ಕನ್ನಡದ ಹತ್ತು ಶ್ರೇಷ್ಠ ಕಾದಂಬರಿಗಳಲ್ಲಿ ಒಂದಾಗಿ ಸ್ಥಾನಪಡೆಯುತ್ತದೆ ಎಂಬುದಾಗಿ ಭಾವಿಸುತ್ತಾರೆ.

ಪುಣೇಕರರನ್ನು ಕುರಿತು ''ನವ್ಯರಲ್ಲೊಂದು ಭಿನ್ನ ಧ್ವನಿ''[೪] ಎಂದು ಗುರುತಿಸುತ್ತಾರೆ. ಏಕೆಂದರೆ ಪುಣೇಕರರ ಕೃತಿಗಳನ್ನು ನೋಡಿದಾಗ ಇವರು ಯಾವುದೇ ಒಂದು ಸಾಹಿತ್ಯ ಪಂಥಕ್ಕೆ ಸೀಮಿತವಾಗಿಲ್ಲದಿರುವುದು ಗೋಚರಿಸುತ್ತದೆ. ತಮ್ಮದೆ ಆದ ಚಿಂತನೆ, ಗಂಭೀರ ಆಲೋಚನೆ, ಆಶಯವನ್ನು ಹೊಂದಿದ್ದವರು. ಹೀಗಾಗಿ ಗಂಗವ್ವಗಂಗಾಮಾಯಿಯಂತಹ ಕೃತಿಯಲ್ಲಿ ನವೋದಯದ ಪೂರ್ಣ ಹಾಗೂ ನವ್ಯದ ಕೆಲವೊಂದು ಲಕ್ಷಣಗಳು ಕಂಡುಬರುತ್ತವೆ. ಆದರೆ ಅಷ್ಟೇ ವಿರೋಧಭಾಸ ಎಂಬಂತೆ ಇವರ ಕವನಗಳಲ್ಲಿ, ಕಥೆಗಳಲ್ಲಿ ಹಾಗೂ ನಟನಾರಾಯಣಿ ಮುಂತಾದ ಕೃತಿಗಳಲ್ಲಿ ನವ್ಯದ ಲಕ್ಷಣಗಳನ್ನು ಕಾಣಬಹುದು. ಒಟ್ಟಾರೆಯಾಗಿ, ನೋಡಿದಾಗ ಪುಣೇಕರರು ನವ್ಯವನ್ನು ಹೋಲುತ್ತಿ ದ್ದರೂ, ನವ್ಯರಲ್ಲೊಂದು ಭಿನ್ನ ಧ್ವನಿಯಾಗಿದ್ದಾರೆ. ಇದಕ್ಕೆ ಸ್ಪಷ್ಟ ನಿದರ್ಶನವನ್ನು ಇದಕ್ಕೆ ನೀಡುವುದಾದರೆ, ಇವರು 'ನಟನಾರಾಯಣಿ' ಕಾದಂಬರಿಯನ್ನು 'ನವ್ಯೋತ್ತರ ಎಕ್ಸಿಸ್ಟೆಂಶಿಯಲಿಸ್ಟ್ ಪತ್ತೆದಾರಿ ಕಾದಂಬರಿ'' ಎಂದೇ ಕರೆದಿದ್ದಾರೆ.

'ಗಂಧಕೊರಡು' ಎಂಬ ಅಭಿನಂದನ ಗ್ರಂಥದಲ್ಲಿ ಹಲವಾರು ವಿಮರ್ಶಕರು ಪುಣೇಕರರ ಹಲವು ಕೃತಿಗಳನ್ನು ವಿಮರ್ಶಿಸಿದ್ದಾರೆ. ಈ ಎಲ್ಲ ಲೇಖನಗಳ ಮುಖ್ಯಾಂಶವೆಂದರೆ, ''ಸಂಪ್ರದಾಯ ಹಾಗೂ ಮೊಕಾಶಿ'' ಪುಣೇಕರರು ಗ್ರಹಿಸಿದಂತಹ ಸಂಪ್ರದಾಯದ ಅರ್ಥ, ಸ್ವರೂಪ ಮತ್ತು ಸಂಸ್ಕೃತಿಯ ಬಗ್ಗೆ ಇವರು ತಮ್ಮದೇ ಆದಂತಹ ಚಿಂತನೆಗಳನ್ನು ಹೊಂದಿದ್ದವರು. ಈ ದೃಷ್ಟಿಯಲ್ಲಿ, ''ವ್ಯಕ್ತಿಗಳನ್ನೇ ಕುರಿತು ಬರೆಯಲಿ ಅಥವಾ ಪರಿಸ್ಥಿತಿಯನ್ನೆ ಕುರಿತು ಬರೆಯಲಿ, ಕಾದಂಬರಿಯ ಬರವಣಿಗೆ ವಸ್ತು ನಿಷ್ಠವಾಗಿದೆ. ಬಹುಶಃ ಪುಣೇಕರರ ದೃಷ್ಟಿಯಲ್ಲಿ ಸಂಪ್ರದಾಯವೆಂದರೆ ಇದೇ ಆಗಿದೆ. ಸಾಂಪ್ರದಾಯಿಕತೆಯ ಅರ್ಥವಂತಿಕೆಯನ್ನು ಅರಿತುಕೊಂಡ ಲೇಖನಿಗೆ ಇರುವ ಮಾನಸಿಕ ಸ್ವಾತಂತ್ರ್ಯವೂ ಸಂಪ್ರದಾಯದ ವಿರುದ್ಧ ಬಂಡೇಳುವ ಲೇಖಕನಿಗೆ ಇರುವುದಿಲ್ಲ''[೫] ಎಂದು ಹೇಳುತ್ತಾರೆ. ಇದು ಸಮಂಜಸವಾಗಿ ಕಾಣುತ್ತದೆ. ಏಕೆಂದರೆ ಪುಣೇಕರರು ಸಂಸ್ಕೃತಿ ಎಂದರೇನು ಎಂಬುದಕ್ಕೆ ಅವರು ಗ್ರಹಿಸಿದ ನಿಲುವುಗಳೇ ಭಿನ್ನವಾಗಿವೆ.

ಶಂಕರಮೊಕಾಶಿಪುಣೇಕರರು 'ಪಾಶ್ಚಾತ್ಯರಿಂದ ಕಲಿಯವುದು ಬಹಳಷ್ಟಿಲ್ಲ' ಎಂದು ಹೇಳಲು ಕಾರಣವೇನು? ಹಾಗೂ ಇವರು ನವ್ಯ ಸಾಹಿತ್ಯವನ್ನು ಟೀಕಿಸಲು ಕಾರಣವೇನು? ಎಂಬ ಬಗ್ಗೆಯು ಚಿಂತನೆಯನ್ನು ವಿಮರ್ಶಾ ಲೇಖನಗಳಲ್ಲಿ ಕಾಣಬಹುದು. ಏಕೆಂದರೆ, ಪುಣೇಕರರು ಇಂಗ್ಲಿಷ್ ಭಾಷಾ

ಪ್ರಾಧ್ಯಾಪಕರಾಗಿ, ಆಂಗ್ಲ ಭಾಷೆಯಲ್ಲಿ ಹಲವಾರು ಕೃತಿಗಳನ್ನು ರಚಿಸಿರುವುದಲ್ಲದೆ, ಆಂಗ್ಲ ಸಾಹಿತಿಯಾದ W.B.Yeatsನ ಕೃತಿಗಳ ಬಗ್ಗೆ ಅಧ್ಯಯನ ಕೈಗೊಂಡವರು.

ಹೀಗಾಗಿ ಅನುಭವ ನಮ್ಮದಾಗಿದ್ದರೆ, ಅನುಭವವನ್ನು ಹೇಳುವ ರೀತಿಯು ನಮ್ಮದಾಗಿರಬೇಕು. ಈ ದೃಷ್ಟಿಯಲ್ಲಿ ನವ್ಯಸಾಹಿತ್ಯ ಭಾರತೀಯ ಸಾಮಾಜಿಕ ಪರಿಸ್ಥಿತಿಗೆ ಅನುಗುಣವಾಗಿಲ್ಲದಿರುವುದು. ಅಷ್ಟೇ ಅಲ್ಲದೆ ನವ್ಯ ಸಾಹಿತ್ಯದಲ್ಲಿ ಕಂಡುಬರುವ ವಿಪರೀತ ಎನ್ನಬಹುದಾದ ವ್ಯಕ್ತಿವಿಶಿಷ್ಟತೆ, ಅಸ್ತಿತ್ವವಾದ, ಭ್ರಮಾತ್ಮಕತೆ ಹಾಗೂ ಕಾಮ. ನಮ್ಮ ಸಾಮಾಜಿಕ ಪರಿಸರದಲ್ಲಿ ಅಸ್ತಿತ್ವದ ಪ್ರಶ್ನೆಯು, ಪಾಶ್ಚಾತ್ಯದೇಶಗಳ ಸಮಾಜದಂತೆ ಅಷ್ಟೊಂದು ಮಟ್ಟಿಗೆ ಉದ್ಭವಿಸುವುದಿಲ್ಲ. ಹಾಗೂ ವಿಜ್ಞಾನ, ವೈಚಾರಿಕತೆ, ವೈಜ್ಞಾನಿಕತೆಯೇ ಅಂತಿಮವಲ್ಲ. ಈ ವಿಜ್ಞಾನದ ಅಂಶಗಳಂತೆಯೇ ಸಾಮಾಜಿಕ ಪರಿಸರವೂ ಕೂಡ ಬಹಳ ಮುಖ್ಯ. ವ್ಯಕ್ತಿಯ ವ್ಯಕ್ತಿತ್ವವನ್ನು ಹಾಗೂ ಪ್ರಜ್ಞೆಯನ್ನು ರೂಪಿಸುವುದನು, ಅನುವಂಶಿಯತೆಯ ಗುಣಾಣುಗಳ ಜೊತೆಯಲ್ಲಿಯೇ ಸಾಮಾಜಿಕ ಪರಿಸರವೂ ಅಷ್ಟೇ ಮುಖ್ಯವಾಗಿರುತ್ತದೆ. ಹೀಗಾಗಿ ಪ್ರಜ್ಞೆಯೂ ಪರಿಸರವನ್ನು ರೂಪಿಸುವುದರ ಜೊತೆಯಲ್ಲಿಯೇ, ಪರಿಸರವೇ ಪ್ರಜ್ಞೆಯನ್ನು ರೂಪಿಸಲು ಸಹಾಯಕಾರಿಯಾಗಿದೆ ಎಂಬ ನಿಲುವುಗಳನ್ನು ಇವರು ಹೊಂದಿರುವಂತೆ ಕಂಡುಬರುತ್ತದೆ.

ಪುಣೇಕರರ ಸಾಹಿತ್ಯವನ್ನು ಕುರಿತು ಬಂದ ವಿಮರ್ಶೆಯಲ್ಲಿ ಭಿನ್ನಾಭಿಪ್ರಾಯವನ್ನು ಗುರುತಿಸುವುದು ಕಷ್ಟವಾದರೂ, ಗಂಗವ್ವ ಗಂಗಾಮಾಯಿ ಎಂಬ ಕಾದಂಬರಿಯ ಬಗ್ಗೆ ಬರೆದ ವಿಮರ್ಶಾ ಲೇಖನದಲ್ಲಿ "ಜೀವನದಲ್ಲಿ ಯಾವುದೂ ಕೂಡ ಸಣ್ಣ ಸಂಗತಿಯಲ್ಲ ಎಂದು ಹೇಳುತ್ತಾ ಸಣ್ಣ ಸಂಗತಿಗಳ ಮಹಾಕಾವ್ಯ"[೬] ಎಂದು ಕರೆಯುತ್ತಾರೆ. ಇವರು ಮಹತ್ವ ನೀಡುವುದು, ಕೃತಿಯಲ್ಲಿನ ಶಿಷ್ಟಭಾಷೆ, ಸಂಭಾಷಣೆ ಹಾಗೂ ಕಥನಕ್ರಮಕ್ಕೆ. ಇದು ಸಮಂಜಸವೂ ಹೌದು. ಏಕೆಂದರೆ, ಗಂಗವ್ವಗಂಗಾಮಾಯಿಯಲ್ಲಿ ಕುಟುಂಬ ಸಮಸ್ಯೆ ಸವಾಲುಗಳ ಪ್ರಶ್ನೆಯನ್ನು ಎತ್ತಿಕೊಂಡು ಕುಟುಂಬದಲ್ಲಿ ಸಂಭವಿಸುವ ಪ್ರತಿಯೊಂದು ಘಟನೆಗಳನ್ನು, ಅದು ಸಣ್ಣಸಂಗತಿಯಾಗಿರಲಿ, ಅಥವಾ ದೊಡ್ಡದಾಗಿರಲಿ, ಇಂತಹ ಘಟನೆಗಳನ್ನು ಬೆಸೆದು, ಕೃತಿಯನ್ನು ರಚಿಸಿದ್ದಾರೆ.

ಒಟ್ಟಿನಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ಏನೇ ಭಿನ್ನತೆ ಇದ್ದರೂ ಭಾರತೀಯ ಸಂಸ್ಕೃತಿಯ ಬಗ್ಗೆ ತಮ್ಮದೇ ಆದ ನಿಲುವುಗಳನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ. ಪುಣೇಕರರ ದೃಷ್ಟಿಯಲ್ಲಿ ಸಂಪ್ರದಾಯ ಸಂಸ್ಕೃತಿ ಎಂಬುದು ವಿಶಿಷ್ಟ ಅರ್ಥವನ್ನು ಹೊಂದಿದೆ. ಅದಕ್ಕೆ "ವಾಸ್ತವ ಮಾರ್ಗದ ಬೆನ್ನೆತ್ತಿ ಪುರಾಣಗಳ ಗ್ರಹಿಕೆಯನ್ನು ಸಾಹಿತ್ಯ ಕೃತಿಗಳಿಂದ ದೂರವಿರಿಸಿದ್ದೇವೆ. ಸಾಹಿತ್ಯ ಕೃತಿಗಳ ಹಿಂದ ಕೃತಿಕಾರನ ವಾಸ್ತವ ಅನುಭವಗಳು ಒತ್ತಾಸೆಯಾಗಿ ನಿಲ್ಲಬೇಕೆಂಬ ವಾದವನ್ನು ಎಲ್ಲಿಯವರೆಗೆ ಎಳೆದು ತಂದಿದ್ದೇವೆಂದರೆ, ಬರವಣಿಗೆಗೆ ಪೂರ್ವಭಾವಿಯಾಗಿ ಬರಹಗಾರರಲ್ಲಿ ಅನುಭವಗಳು ಸನ್ನದ್ಧಗೊಳ್ಳದಿದ್ದರೆ, ಆ ವ್ಯಕ್ತಿಯ ಕೃತಿಯು ಅಪ್ರಮಾಣಿಕವೆಂದು ಕರೆಯಲು ಹಿಂಜರಿಯುತ್ತಿಲ್ಲ" ಎಂದು[೭] ಹೇಳುತ್ತಾರೆ. ಏಕೆಂದರೆ ನಾವು ವೈಚಾರಿಕತೆ, ವೈಜ್ಞಾನಿಕತೆ, ಆಧುನಿಕತೆ ಎಂಬ ಹೆಸರಿನಲ್ಲಿ ಪರಂಪರಾಗತವಾಗಿ ಬಂದ ಪುರಾಣ ಜಾನಪದ

ಮುಂತಾದ ದೇಶಿಯ ಚಿಂತನೆಗಳನ್ನು ಹಿನ್ನೆಲೆಗೆ ಸರಿಸಿ ಶಿಷ್ಟ-ಪರಿಶಿಷ್ಟ ಎಂದು ವರ್ಗೀಕರಿಸಿಕೊಂಡಿರುವುದನ್ನು ಕಾಣಬಹುದಾಗಿದೆ.

ಒಟ್ಟಾರೆಯಾಗಿ ಪುಣೇಕರರ ವಿಚಾರ ಧಾರೆಗಳು ಸಂಪ್ರದಾಯ ಮತ್ತು ಆಧುನಿಕತೆಯ ಒಳಗಿನ ಸಂಘರ್ಷಕ್ಕೆ ಒಳಗಾಗಿವೆ. ಈ ರೀತಿಯ ಸಂಘರ್ಷಕ್ಕೆ ಇವರ ನಿಲುವುಗಳೇ ಕಾರಣವಾಗಿದೆ ಎನ್ನುವ ಅಭಿಪ್ರಾಯ ಮೂಡಿದೆ.

ನಟನಾರಾಯಣಿ ಕಾದಂಬರಿಯನ್ನು ನವ್ಯರನ್ನು ಲೇವಡಿ ಮಾಡಲು ಹಾಗೂ ವಿಮರ್ಶಕರನ್ನೇ ಗುರಿಯಾಗಿಸಿಕೊಂಡು ಬರೆದಿದ್ದಾರೆ. ಎಂಬಂತಹ ಅಭಿಪ್ರಾಯವನ್ನು ಕಾಣಬಹುದು. ಪುಣೇಕರರು ಸಂದರ್ಭ ದೊರೆತಾಗ ನಾಣಿಯ ವ್ಯಕ್ತಿತ್ವವನ್ನು ವಿವರಿಸುವಾಗ ನವ್ಯಸಾಹಿತ್ಯದ ಭ್ರಮಾತ್ಮಕತೆ ವ್ಯಕ್ತಿ ವಿಶಿಷ್ಟತೆ. ಅಸ್ತಿತ್ವವಾದ, ಕಾಮ, ಅಸಂಗತತೆ, ಈ ರೀತಿಯ ಚಿಂತನೆಗಳು ಭಾರತೀಯ ಸಮಾಜಕ್ಕೆ ಸಂಪೂರ್ಣ ಅನ್ವಯವಾಗಲಾರವು ಎಂಬುದನ್ನು ನಿದರ್ಶನದ ಮೂಲಕ ಸ್ಪಷ್ಟಪಡಿಸಿದ್ದಾರೆ. ಹಾಗೂ ಕೃತಿಯ ಬಗ್ಗೆ ವಿಮರ್ಶಕರ ವಲಯದಿಂದ ವ್ಯಕ್ತವಾಗಬಹುದಾದ ಕೆಲವು ಅಂಶಗಳನ್ನು ಇವರು ಪೂರ್ವದಲ್ಲಿಯೇ ಗ್ರಹಿಸಿ ಉತ್ತರ ರೂಪದಲ್ಲಿಯೇ ನಿರೂಪಿಸುತ್ತಾರೆ.

'ಅವಧೇಶ್ವರಿ'ಯು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದ ಬಹುಮುಖ್ಯ ಕೃತಿಯಾಗಿದೆ. ಪುಣೇಕರರು ಸಿಂಧೂ ಬಯಲಿನ ನಾಗರೀಕತೆಯ ಬಗ್ಗೆ ಸಂಶೋಧನೆ ಮಾಡಲು ಹೋದಾಗ ದೊರೆತ ಕೆಲವು ಅಂಶಗಳಿಂದ ಈ ಕೃತಿಯನ್ನು ರಚಿಸಿದ್ದಾರೆ. ಆದರೂ ಇದನ್ನು 'ಸಂಶೋಧನಾ ಕೃತಿ ಎಂದು ಓದದೆ ಸಾಹಿತ್ಯಕೃತಿಯಾಗಿಯೇ ಓದಬೇಕೆಂದು' ಅವಧೇಶ್ವರಿಯ ಮುನ್ನುಡಿಯ ಕೊನೆಯಲ್ಲಿ ಹೇಳುತ್ತಾರೆ. ಪ್ರಾಚೀನ ಭಾರತೀಯ ಸಮಾಜದ ಒಂದು ವಸ್ತುನಿಷ್ಠಮಾದರಿಯಾದ ಅವಧೇಶ್ವರಿಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದಲೂ ಕಮಲಾಹೆಮ್ಮಿಗೆ, ಶಾಲಿನಿ ರಘುನಾಥಭಟ್ಟ ವಿಮರ್ಶಿಸಿದ್ದಾರೆ. ಏನೇ ಆದರೂ ಪುಣೇಕರರ ಕಾದಂಬರಿಗಳಲ್ಲಿ ಪುರುಷ ಪಾತ್ರಗಳಿಗಿಂತ ಸ್ತ್ರೀಪಾತ್ರಗಳೇ ಮಹತ್ವ ಮೌಲ್ಯಯುಕ್ತವಾದ ಸ್ಥಾನವನ್ನು ಪಡೆಯುತ್ತವೆ.

ಒಟ್ಟಾರೆ ಪುಣೇಕರರನ್ನು ಸಂಪ್ರದಾಯ ಲೇಖಕರಾಗಿ ಇದುವರೆಗೂ ನಡೆದಿರುವ ವಿಮರ್ಶೆಯಲ್ಲಿ ಗುರುತಿಸಲಾಗಿದೆ. ಪುಣೇಕರರ ಸಂಪ್ರದಾಯದ ಬಗೆಗಿನ ನಿಲುವುಗಳೇನು? ಎಂಬುದನ್ನು ಮುಂದಿನ ಭಾಗದಲ್ಲಿ ಚರ್ಚಿಸ ಬಯಸಿದ್ದೇನೆ. ಒಟ್ಟಿನಲ್ಲಿ ಪುಣೇಕರರೂ ಎಂದೂ ಆಧುನಿಕತೆಯನ್ನು ವಿರೋಧಿಸಿದವರಲ್ಲಿ. ಆದರೆ ಎಲ್ಲದಕ್ಕೂ ಅನ್ಯರತ್ತಲೇ ನೋಡುವುದನ್ನು ಮಾತ್ರ ಟೀಕಿಸುತ್ತಾರೆ.

ಟಿಪ್ಪಣಿಗಳು

೧. ಶೇಷಗಿರಿರಾವ್ ಎಲ್.ಎಸ್, **ಹೊಸಗನ್ನಡ ಸಾಹಿತ್ಯ ಚರಿತ್ರೆ**, ಪು.೧೫೬

೨. ಸಂಪಾದಕ ಸಮಿತಿ, **ಗಂಧಕೊರಡು**, ಮುನ್ನುಡಿ

೩. ಅಮೂರ ಜಿ.ಎಸ್., ಅರ್ಥಲೋಕ, ಪು.೨೩

೪. ಮುರಾರಿ ಬಲ್ಲಾಳ, ಸಮನಿತ್ವ, ಪು.೧೦೭

೫. ಕೀರ್ತಿನಾಥ ಕುರ್ತಕೋಟಿ, ನೂರುಮರ ನೂರುಸ್ವರ, ಪು.೩೪೧

೬. ರಹಮತ್ ತರೀಕೆರೆ, ಮಯೂರ, ಪು.೫

೭. ನಾರಾಯಣ ಕೆ.ವಿ., ಬೇರು ಕಾಂಡ ಚಿಗುರು, ಪು.೪

ಅಧ್ಯಾಯ ೩

'ಸಂಪ್ರದಾಯ' ಮತ್ತು 'ಆಧುನಿಕತೆ'-ಪರಿಕಲ್ಪನೆಗಳ ವಿಶ್ಲೇಷಣೆ

೩

'ಸಂಪ್ರದಾಯ' ಮತ್ತು 'ಆಧುನಿಕತೆ' - ಪರಿಕಲ್ಪನೆಗಳ ವಿಶ್ಲೇಷಣೆ

'ಸಂಸ್ಕೃತಿ' ಎಂಬ ಪರಿಕಲ್ಪನೆಯು ಒಂದು ಅಮೂರ್ತವಾದ ಪದವಾಗಿದ್ದು ಸೂತ್ರರೂಪದಲ್ಲಿ ಸ್ಪಷ್ಟವಾಗಿ ಹೇಳುವುದು ತೊಡಕಿನ ಸಂಗತಿ. ಮನುಷ್ಯನ ವರ್ತನೆಗಳಿಂದಲೇ ಸಂಸ್ಕೃತಿಯನ್ನು ಅವಲೋಕಿಸಿ ಅರ್ಥೈಸಬೇಕಾಗುತ್ತದೆ. ಹೀಗಾಗಿ ಸಂಸ್ಕೃತಿಯು ಮಾನವ ಜೀವಿಗೆ ವಿಶಿಷ್ಟವಾದದ್ದು. ಸಮಾಜ ಮತ್ತು ಮನುಷ್ಯನಿಗೆ ಯಾವ ಮಟ್ಟಿಗೆ ಸಂಬಂಧವಿದೆಯೋ, ಹಾಗೆಯೇ ಸಂಸ್ಕೃತಿ ಮತ್ತು ಸಮಾಜಕ್ಕೆ ಸಂಬಂಧವಿದೆ. ಮನುಷ್ಯ ಜೀವಿಯು ಇರದೆ ಸಮಾಜ ನಿರ್ಮಾಣವಾಗಲು ಸಾಧ್ಯವಿಲ್ಲ. ಅಂತೆಯೇ ಸಮಾಜ ಮತ್ತು ಮನುಷ್ಯನಿರದೇ ಸಂಸ್ಕೃತಿಯು ನಿರ್ಮಾಣವಾಗಿ ಜೀವಿಸಲು ಸಾಧ್ಯವಿಲ್ಲ. ಮಾನವ ಜೀವಿಯು ಅಸ್ತಿತ್ವಕ್ಕೆ ಬಂದ ನಂತರ ನಿಸರ್ಗವನ್ನು ತನ್ನ ಅನುಕೂಲ ಹಾಗೂ ಅಗತ್ಯತೆಗಳಿಗೆ ತಕ್ಕಂತೆ ಬಳಸಿಕೊಳ್ಳುತ್ತಲೇ ಬಂದಿರುವುದನ್ನು ಗುರುತಿಸಬಹುದಾಗಿದೆ. ಹೀಗಾಗಿ ಅಸ್ವಾಭಾವಿಕವಾಗಿರುವ, ಆದರೆ ಪಡೆದುಕೊಂಡ, ಗಳಿಸಿದ, ಅಥವಾ ಸಾಧಿಸಿದ ಸಂಗತಿಗಳಿಗೆ ಸೇರಿದ ಮಾನವೀಯ ಅಂಶಗಳಿಗೆ ಸಂಬಂಧಿಸಿದ ಜ್ಞಾನವಾಗಿದೆ.

ನೈತಿಕ ನಿಯಮ, ಸಂಪ್ರದಾಯ, ಜ್ಞಾನ, ನಂಬಿಕೆ, ಕಲೆ, ಕಾನೂನು, ಧರ್ಮ ಲೋಕಾರೂಢಿಗಳು, ಸಂಸ್ಕಾರ, ಸಮಾರಂಭಗಳು, ಆಚಾರ-ವಿಚಾರಗಳ ಒಟ್ಟು ಮೊತ್ತವೇ ಸಂಸ್ಕೃತಿ ಎಂದು ಸಮಾಜಶಾಸ್ತ್ರದಲ್ಲಿ ಅರ್ಥೈಸಲ್ಪಡುತ್ತದೆ. ಮನುಷ್ಯ ಬದುಕಿನ ನಿಹಿತಾರ್ಥಗಳನ್ನು ರೂಪಿಸಿಕೊಳ್ಳಲು ನಿರ್ಮಿಸಿಕೊಂಡ ಒಂದು ಸಾಧನವಾಗಿದೆ. ಜ್ಞಾನ, ಸಂಕೇತಗಳು, ನಿಯಮಗಳು ನಂಬಿಕೆಗಳು, ಮೌಲ್ಯಗಳು, ಮೌಖಿಕ ಪರಂಪರೆ, ಕಾನೂನು, ಧರ್ಮ, ಸಂಸ್ಥೆ ಮುಂತಾದವುಗಳೇ ಸಂಸ್ಕೃತಿಯ ವಿವಿಧ ಪ್ರಕಾರಗಳಾಗಿವೆ. ಹೀಗಾಗಿ ಸಂಸ್ಕೃತಿಯು ಒಂದು ಸಮೂಹದ ಸದಸ್ಯರಿಂದ ವ್ಯವಸ್ಥಿತವಾಗಿ ಕಲಿಯಲ್ಪಟ್ಟು ಇತರರೊಂದಿಗೆ ಹಂಚಿಕೊಳ್ಳಲ್ಪಟ್ಟ ಮತ್ತು ವರ್ಗಾವಣೆಗೆ ಒಳಪಟ್ಟಂತಹ ಅಂಶವಾಗಿದೆ.

'ಸಂಸ್ಕೃತಿ' ಸಾಮಾಜಿಕ, ಹಾಗೂ ಚಲನಶೀಲವಾದದ್ದು. ಅಷ್ಟೇ ಅಲ್ಲ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ನಿರಂತರವಾಗಿ ವರ್ಗಾಯಿಸಲ್ಪಟ್ಟ ಹೊಂದಾಣಿಕೆಯಿಂದ ಕೂಡಿದ ಸಂಗತಿಯಾಗಿದೆ. ಇದು 'ಸಂಸ್ಕೃತಿ'ಯು ಎಷ್ಟು ಚಲನಶೀಲತೆಯಿಂದ ಕೂಡಿದೆಯೋ, ಅಷ್ಟೇ ವ್ಯಾಪಕವಾದ ಪರಕಲ್ಪನೆಯಾಗಿದೆ. ಹೀಗಾಗಿ ಸಂಸ್ಕೃತಿಯು 'ಸಂಕುಚಿತ' ಹಾಗೂ, 'ವಿಶಾಲ' ಅರ್ಥದಲ್ಲಿ ಬಳಕೆಯಾಗುತ್ತದೆ.

ಒಂದು ಗುರುತು, ಒಂದು ಧರ್ಮ, ಒಂದು ಜನಾಂಗ, ಒಂದು ನಡತೆ ಎಂದು ಸಂಕುಚಿತಾರ್ಥದಲ್ಲಿ ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ ಹಿಂದೂ ಸಂಸ್ಕೃತಿ, ಮುಸ್ಲಿಂ ಸಂಸ್ಕೃತಿ. ಜೈನ ಸಂಸ್ಕೃತಿ ಇತ್ಯಾದಿ.

ವಿಶಾಲವಾದ ಚಿಂತನೆಯ ಕ್ರಮದಲ್ಲಿ ಮಾನವ ಸಮಾಜಜೀವಿ. ಹಾಗೂ ಸಾಂಸ್ಕೃತಿಕ ಜೀವಿ. ಸಂಸ್ಕೃತಿಯು ಮಾನವ ಜನಾಂಗದ ಉಸಿರು ಹಾಗೂ ಸಂಸ್ಕೃತಿಯು ಸಮೂಹ ಜೀವನದ ಅಭಿವ್ಯಕ್ತಿ ಎಂಬ ಅರ್ಥವನ್ನು ಪಡೆಯುತ್ತದೆ. ಸಮಾಜಶಾಸ್ತ್ರದಲ್ಲಿ ಸಂಸ್ಕೃತಿಯನ್ನು ಎರಡು ಭಾಗಗಳಾಗಿ ವಿಂಗಡಿಸಿಕೊಳ್ಳುತ್ತಾರೆ. ಅವುಗಳೆಂದರೆ,

೧. ಭೌತ ಸಂಸ್ಕೃತಿ

೨. ಅಭೌತ ಸಂಸ್ಕೃತಿ

'ಭೌತ ಸಂಸ್ಕತಿ'ಯ ಕಲ್ಪನೆಯು ಸರಳ ಹಾಗೂ ಸ್ಪಷ್ಟವಾಗಿದೆ. ಮತ್ತು ಕಣ್ಣಿಗೆ ಕಾಣುವುದಾಗಿದೆ. ಅಷ್ಟೇ ಅಲ್ಲ ಮಾನವನು ತಯಾರಿಸಿದ ವಸ್ತುಗಳ ರೂಪದಲ್ಲಿರುತ್ತದೆ. ಹೀಗಾಗಿ ಮಾನವನ ಬಾಹ್ಯ ವಿಚಾರಗಳಿಗೆ ಸಂಬಂಧಿಸಿದೆ. ಆದರೆ ಅಭೌತ ಸಂಸ್ಕೃತಿಯ ಕಲ್ಪನೆಯು ಅಸ್ಪಷ್ಟವಾಗಿದೆ. ಏಕೆಂದರೆ ಇದು ಮಾನವನ ಆಂತರೀಕ ವಿಚಾರಗಳಿಗೆ ಸಂಬಂಧಿಸಿದೆ. ಹೀಗಾಗಿ ಅದರ ಸಾಮರ್ಥ್ಯ ಹಾಗೂ ಗುಣಮಟ್ಟವನ್ನು ಹೆಚ್ಚಿಸಲು ಅವಕಾಶಗಳು ಬಹಳ ಕಡಿಮೆ. ಭೌತಸಂಸ್ಕೃತಿಯು ಸಮಯಕ್ಕನುಗುಣವಾಗಿ ಅಭಿವೃದ್ಧಿಗೊಳ್ಳುತ್ತದೆ. ಆದರೆ ಅಭೌತ ಸಂಸ್ಕೃತಿಯನ್ನು ಇತರರೊಂದಿಗೆ ಹಂಚಿಕೊಂಡಾಗ ಅದನ್ನು ಕಳೆದುಕೊಳ್ಳಲಾರರು.

'ಸಂಸ್ಕೃತಿ'ಯು ವಿಶಾಲಾವಾದ ಪರಿಕಲ್ಪನೆಯಾದರೆ, "ಸಂಪ್ರದಾಯ" ಎಂಬುದು ಸಂಸ್ಕೃತಿಯ ಒಂದು ಭಾಗವಾಗಿದೆ. ರೂಢಿ ಪದ್ಧತಿಗಳು, ಸಂಸ್ಕೃತಿಯ ನಿಯಮಗಳು ಸಾಂಸ್ಕೃತಿಕ ಅರ್ಥಕ್ಕೆ ಅನುಸಾರವಾಗಿ ಪರಸ್ಪರ ಅಂತಃಕ್ರಿಯೆಗಳಲ್ಲಿ ನಿರತರಾಗುವುದು. ಸಮಾಜ ಸ್ಥಾಪಿತವಾದ ನಿರೀಕ್ಷಿತ ವರ್ತನೆಯ ನಿಯಮ. ಮಾನವನ ನಡತೆಯ ಮೇಲಿನ ನಿಯಂತ್ರಣ ಒಂದು ಕಾಲದಲ್ಲಿ ಸಾರ್ವಜನಿಕವಾಗಿ ಅಂಗೀಕರಿಸಲ್ಪಟ್ಟ ಆಚರಣೆಯ ಮಾರ್ಗಗಳೇ ಸಂಪ್ರದಾಯ. ಹಿಂದಿನವರು ಅನುಸರಿಸುತ್ತಿದ್ದರು ಎಂಬ ಕಾರಣಕ್ಕಾಗಿ ಅನುಸರಿಸಲ್ಪಡುವ ಹಾಗೂ ಹಲವಾರು ಪೀಳಿಗೆಯಿಂದ ಪೀಳಿಗೆಗೆ ಹರಿದು ಬರುವ ಆಚರಣೆಗಳನ್ನು ಪ್ರಾಥಮಿಕವಾಗಿ ನಾವು ಸಂಪ್ರದಾಯ ಎಂದು ಹೇಳಬಹುದು.

ಸಮೂಹದಿಂದ ಅಂಗೀಕೃತವಾದ ನಿಯಂತ್ರಣ ಕೌಶಲ್ಯಗಳು ಸಂಪ್ರದಾಯವಾಗುತ್ತವೆ. ಸಮೂಹದಿಂದ ಸಮೂಹಕ್ಕೆ ತಲೆಮಾರುಗಳಿಂದ ತಲೆಮಾರುಗಳಿಗೆ ಹರಿದುಬರುವಾಗ ಹಲವಾರು ಮಾರ್ಪಡುಗಳಿಗೆ ಒಳಪಡುತ್ತದೆ. ಜನ ಸಮುದಾಯದ ಜೀವನವನ್ನು ರೂಪಿಸುವಲ್ಲಿ ಸಂಸ್ಕೃತಿಯನ್ನು ಕಟ್ಟುವಲ್ಲಿ ಸಂಪ್ರದಾಯಗಳು ಮಹತ್ವದವುಗಳಾಗುತ್ತವೆ. ಸಂಪ್ರದಾಯದ ಹಿಂದೆ 'ನಂಬಿಕೆ' ಎಂಬುದು ಬಲವಾಗಿರುತ್ತದೆ. ಅಂದರೆ ನಂಬಿಕೆಯು ಸಂಪ್ರದಾಯವನ್ನು ಚಾಲನೆಗೆ ತಂದರೆ, ಸಂಪ್ರದಾಯವೂ ನಂಬಿಕೆಯನ್ನು ಜೀವಂತವಾಗಿರಿಸುತ್ತದೆ. ವ್ಯಕ್ತಿ ಅಥವಾ ಒಂದು ಕುಟುಂಬದ ಚೌಕಟ್ಟನ್ನು ದಾಟಿ ಒಂದು ಸಮುದಾಯ ಅಥವಾ ಪ್ರದೇಶದಲ್ಲಿ ಸ್ವೀಕಾರಗೊಂಡು, ಸಾಮೂಹಿಕತೆಯನ್ನು ಪಡೆದುಕೊಂಡಾಗಲೇ ಸಂಪ್ರದಾಯ ನಿರ್ಮಾಣವಾಗುತ್ತಾ ಹೋಗುತ್ತದೆ.

'ಪರಂಪರೆ' ಎಂಬ ಪದವೂ ಬಳಕೆಯಲ್ಲಿದೆ. ಪರಂಪರೆಯು ಸಹ ವ್ಯಾಪಕವಾದ ಪರಿಕಲ್ಪನೆ. ಎಲ್ಲ ಕ್ಷೇತ್ರಗಳಲ್ಲಿಯೂ ಪರಂಪರೆಯ ಕಲ್ಪನೆ ಬಹಳವಾಗಿದೆ. ಇದು ಒಂದೆರಡು ದಿನಗಳಲ್ಲಿ , ಒಂದೆರಡು

[illegible]

[illegible]

[illegible]

[illegible]

[illegible]

ವರ್ಷಗಳಲ್ಲಿ ರೂಪುಗೊಳ್ಳುವಂತಹದ್ದಲ್ಲ. ಸಹಸ್ರ ವರ್ಷಗಳ ಕಾಲಾವಧಿಯಲ್ಲಿ ರೂಪುಗೊಳ್ಳುವಂಥಹದ್ದು. ಒಂದು ಸಾಂಸ್ಕೃತಿಕವರ್ಗ ತನ್ನ ಸಂಸ್ಕೃತಿಯಲ್ಲಿ ಆಂತರೀಕ ಹಾಗೂ ಬಾಹ್ಯ ಕಾರಣಗಳಿಂದಾಗಿ ಕೆಲವನ್ನು ಕೈಬಿಟ್ಟು, ಮತ್ತೇ ಮತ್ತೆ ಕೆಲವನ್ನು ತನ್ನ ಜೊತೆಗೆ ಸೇರಿಸಿಕೊಂಡು, ಪರಿಷ್ಕರಿಸಿಕೊಂಡು ಪರಂಪರೆಯನ್ನು ಸೃಷ್ಟಿಸುತ್ತದೆ. ಹೀಗಾಗಿ ಪರಂಪರೆಯು ಸಮಾಜದಲ್ಲಿ ಪರೋಕ್ಷವಾಗಿ ಬೆಳೆದು ಬಂದಿರುವ ನೀತಿ-ನಿಯಮ, ನ್ಯಾಯ ಆಜ್ಞೆ ಮುಂತಾದ ಒಪ್ಪಿಗೆಗಳನ್ನು ಪ್ರತಿಬಿಂಬಿಸುತ್ತದೆ.

ಬದಲಾವಣೆ ಸಾಮಾಜಿಕ ನಿಯಮ. ಹೀಗಾಗಿ ಮೌಲ್ಯಗಳು ಬದಲಾದಂತೆಲ್ಲಾ ಸಂಪ್ರದಾಯ. ಆಚರಣೆ, ನಂಬಿಕೆಗಳು ಬದಲಾಗುತ್ತವೆ. ಮಾನವ ಮತ್ತು ಕಾಲದ ನಡುವಿನ ಸಂಬಂಧ ವಿಶಿಷ್ಟವಾದದ್ದು. ಕಾಲದೊಳಗೆ ಮನುಷ್ಯ, ಮನುಷ್ಯನೊಳಗೆ ಕಾಲ ನೆಲೆಯೂರಲು ನಡೆಸುವ ಪ್ರಯತ್ನವೂ ಮುಖ್ಯವಾದ ಪರಿಣಾಮವಾಗಿಯೇ, ಮನುಷ್ಯ ಕಾಲವನ್ನು ಕಟ್ಟುತ್ತಾ ಹೋದಂತೆ, ಕಾಲವೇ ಮನುಷ್ಯನನ್ನು ಕಟ್ಟಿ ಹಾಕುತ್ತಾ ಹೋಗುತ್ತದೆ. ಹೀಗಾಗಿಯೇ ನಾವೂ ಭವಿಷ್ಯವನ್ನು ವರ್ತಮಾನದಲ್ಲಿ ನಿಂತುಕಟ್ಟುವ ಕ್ರಿಯೆಯ ಕಾರ್ಯಗಳಲ್ಲಿ ತೊಡಗುತ್ತೇವೆ. ಏಕೆಂದರೆ ವೈರುದ್ಯಗಳ ಅಂತರಂಗವನ್ನು ಕರಗಿಸುವುದು, ಕಾಲಗಳ ನಡುವಿನ ಕೊಂಡಿ ಕಳಚದಂತೆ ನೋಡಿಕೊಳ್ಳುವುದು ಮುಖ್ಯವಾಗುತ್ತದೆ. ಇದು ಮಾನವನ ಹೊಣೆಯೂ ಹೌದು ಮತ್ತು ಸಮಸ್ಯೆಯೂ ಹೌದು.

ಸಮಾಜವೂ ನಿತ್ಯ ನಿರಂತರ ಪರಿವರ್ತನೆಯನ್ನು ಹೊಂದುತ್ತಲೇ ಇರುತ್ತದೆ. ಸಾಮಾಜಿಕ ವ್ಯವಸ್ಥೆ ಮತ್ತು ಸಾಮಾಜಿಕ ಸಂಘಟನಗಳಲ್ಲಿ, ಸಾಮಾಜಿಕ ರಚನೆ ಮತ್ತು ಕಾರ್ಯಗಳಲ್ಲಿ ಸಾಮಾಜಿಕ ಅಂತರಕ್ರಿಯೆ ಹಾಗೂ ಪ್ರಕ್ರಿಯೆಗಳಲ್ಲಿ ಚಲನಶೀಲತೆಯನ್ನು ನಾವು ಸದಾ ಕಾಣುತ್ತೇವೆ. ಈ ಸಾಮಾಜಿಕ ಬದಲಾವಣೆಗೆ ಭೌಗೋಳಿಕ, ಜೈವಿಕ ಹಾಗೂ ತಾಂತ್ರಿಕ ಅಂಶಗಳು ಬಹುಮುಖ್ಯ ಕಾರಣಗಳಾಗುತ್ತವೆ.

'ಆಧುನಿಕತೆ' ಎಂಬುದು ಬಹುಮಟ್ಟಿಗೆ 'ಸಂಪ್ರದಾಯ'ಕ್ಕೆ ವಿರುದ್ಧವಾದ ಸ್ಥಿತಿಯಾಗಿದೆ. ಈ ಆಧುನಿಕತೆ ಎಂಬ ಪರಿಕಲ್ಪನೆ ಒಂದೆರಡು ಶತಮಾನಗಳಿಂದ ವ್ಯವಸ್ಥಿತವಾಗಿ ಮೂಡಿಬಂದಿದೆ. ಅಂದರೆ ಆಧುನಿಕತೆ ಎಂಬುದು ಇರಲೇ ಇಲ್ಲ ಎಂದು ಅರ್ಥವಲ್ಲ. ಕಾಲದಿಂದ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ ಹಾಗೂ ಸಮಾಜದಿಂದ ಸಮಾಜಕ್ಕೆ ತಕ್ಕಂತೆ ವೈಚಾರಿಕತೆಗೆ ಒಳಗಾಗಿರುವುದನ್ನು ಕಾಣಬಹುದು.

ಭಾರತೀಯ ಸಮಾಜಗಳಲ್ಲಿ 'ಆಧುನಿಕತೆ' ಎಂಬ ಕಲ್ಪನೆ ಹೆಚ್ಚು ಬಳಕೆಗೆ ಬಂದಿದ್ದು, ಅನ್ಯರ ಪ್ರವೇಶ ಹಾಗೂ ಅನ್ಯ ಸಂಸ್ಕೃತಿಯ ಮೂಲಕವೇ. ಧರ್ಮ ಹಾಗೂ ಆಧ್ಯಾತ್ಮಗಳಿಗೆ ಪರ್ಯಾಯವಾದ ಜ್ಞಾನವಾಗಿ ವಿಜ್ಞಾನ ಸ್ಥಾಪಿತಗೊಳ್ಳತೊಡಗಿದ್ದು ಹಾಗೂ ಈ ವಿಜ್ಞಾನವೇ ಕೇಂದ್ರರಂಗಕ್ಕೆ ಬಂದ ನಂತರ ಸ್ಥಾಪಿತಗೊಂಡ ನೋಟ ಕ್ರಮವೇ ಈ ಆಧುನಿಕತೆ. ಅಂದರೆ ಭೂತಕಾಲದೊಂದಿಗೆ ತಮ್ಮನ್ನು ತಾವು ಕಡಿದು ಕೊಂಡಾಗ ಅಥವಾ ಭೂತಕಾಲದೊಂದಿಗೆ ಕಡಿದುಹೋದ ತಮ್ಮ ಸಂಬಂಧವನ್ನು ಪುನರ್ ವ್ಯಾಖ್ಯಾನಿಸಿ ಸ್ಥಾಪಿಸಿಕೊಳ್ಳಲು ಯತ್ನಿಸಿದಾಗ, ವ್ಯವಸ್ಥೆ, ಧೋರಣೆ, ನಿರ್ದೇಶಿಸುವ ಹಾಗೂ ನಿಯಂತ್ರಿಸುವ ಸಾಧನವಾಗಿ

ಮಾನವನ ಪ್ರಜ್ಞೆ, ಸಂವೇದನೆಗಳನ್ನು ನಿರ್ಣಾಯಕವಾಗಿ ಬದಲಿಸುವ ನೋಟ ಕ್ರಮವಾಗಿ ಬೆಳೆದು ಬಂದ ಈ ಆಧುನಿಕತೆಯು ಇಪ್ಪತ್ತನೆಯ ಶತಮಾನದ ಮುಖದ ಮುಖ್ಯ ದಿಕ್ಕನ್ನೇ ಬದಲಿಸಿತ್ತು.

ದೈವ ಕೇಂದ್ರಿತ ಚಿಂತನೆ, ರಾಜಕೀಯ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಬದುಕನ್ನು ಪಲ್ಲಟಗೊಳಿಸಲು ಯತ್ನಿಸಿದ್ದು, ವಸಾಹತುಶಾಹಿ ಆಡಳಿತ. ವಸಾಹತುವಾದದ ಕೊಡುಗೆಯಾದ ಪ್ರಜಾಪ್ರಭುತ್ವ, ವ್ಯಕ್ತಿವಿಶಿಷ್ಟವಾದ ಹಾಗೂ ಧರ್ಮಾತೀತ ನಿಲುವುಗಳು ಹೊಸ ಆರ್ಥಿಕ ವ್ಯವಸ್ಥೆ, ಹೊಸ ನೈತಿಕತೆ ಆಧುನಿಕತೆಯ ಜೊತೆಗಿನ ಮುಖಾಮುಖಿಯಲ್ಲಿ ಪರಂಪರೆಯ ಚೌಕಟ್ಟಿನೊಳಗೆ ಕಾಲಕಾಲಕ್ಕೆ ಹುಟ್ಟುವ ಭಿನ್ನಮತಗಳಿಗಿಂತ ತೀರಾ ಭಿನ್ನವಾದ ಭಿನ್ನಮತೀಯ ಪರಂಪರೆಯನ್ನು ಆಧುನಿಕತೆ ಹುಟ್ಟು ಹಾಕಲು ಯತ್ನಿಸಿದ್ದು. ಹಾಗೂ ಪರಂಪರೆಯ ಆಧಾರಸ್ತಂಭಗಳನ್ನು ಹಲವು ಬಗೆಯಲ್ಲಿ ಪಲ್ಲಟಗೊಳಿಸಲು ಪ್ರಯತ್ನಿಸಿತ್ತು.

ಅಷ್ಟೇ ಅಲ್ಲದೆ ವಸಾಹತುವಾದದ ಕೊಡುಗೆಯಾದ ಪ್ರಜಾಪ್ರಭುತ್ವ. ಈ ಪ್ರಜಾಪ್ರಭುತ್ವಕ್ಕಾಗಿ ನಡೆದ ಹಲವಾರು ಪಾಶ್ಚಿಮಾತ್ಯ ದೇಶಗಳ ಹೋರಾಟ ಹಾಗೂ ಕೈಗಾರೀಕರಣದ ಫಲವಾಗಿ ಉಂಟಾದ ಹೊಸ ಉತ್ಪಾದನಾ ಕ್ರಮಗಳು, ಅದರಲ್ಲಿ ಬಂಡವಾಳ, ಶ್ರಮಕ್ಕೆ ಉಂಟಾದ ಪ್ರಾಮುಖ್ಯತೆಯೂ ಸಹ ಕಾರಣವಾಗಿದೆ. ಬ್ರಿಟಿಷರಿಂದ ಭಾರತದೇಶದಲ್ಲಿ, ಭಾರತೀಯ ಸಾಂಪ್ರದಾಯಿಕ ಶಿಕ್ಷಣ ಹಾಗೂ ಜೀವನ ಪದ್ಧತಿಗೆ ಬದಲಾಗಿ, ಆಂಗ್ಲ ಮಾದರಿಯ ಶಿಕ್ಷಣ ನೀಡಿಕೆ ಹಾಗೂ ಇತಿಹಾಸವನ್ನು ಭಾರತೀಯರು ಒಂದು ವೃತ್ತಾಕಾರದ ಕಲ್ಪನೆಯಾಗಿ ಭಾವಿಸುತ್ತಿದ್ದ ಕಾಲದಲ್ಲಿ, ಕಾಲದ ಆಧಾರದ ಮೇಲೆ ಗ್ರಹಿಸುವ ಪಾಶ್ಚಿಮಾತ್ಯರ ಪರಿಪಾಠದ ಅನುಭವದ ಜೊತೆ ಜೊತೆಯಲ್ಲಿಯೇ ಸಾಮಾಜಿಕ ಸಮಸ್ಯೆಗಳ ವಿರುದ್ಧ ಹೋರಾಟಗಳು, ಇಡಿಯಾಗಿ ಭಾರತೀಯ ಸಮಾಜ ಬದಲಾಗಲು ಕಾರಣವಾಯಿತು.

'ರಾಷ್ಟ್ರೀಯತೆ'ಯು ಕಲ್ಪನೆಯು ಅಮೇರಿಕಾ, ಫ್ರಾನ್ಸ್ ಮುಂತಾದ ದೇಶಗಳಂತೆ ಬಹುಬೇಗ ಪ್ರವೇಶ ಮಾಡಲಿಲ್ಲ. ಭಾರತದ ಪರಿಸ್ಥಿತಿಯೇ ಬೇರೆಯಾಗಿದ್ದರಿಂದ ತಡವಾಗಿ ಪ್ರವೇಶಿಸಿತ್ತು. ಆದರೂ ಉಗ್ರರೂಪದಲ್ಲಿ ಪ್ರಾರಂಭವಾಯಿತ್ತು. ಬ್ರಿಟಿಷರನ್ನು ಭಾರತದಿಂದ ತೊಲಗಿಸಲು ಸ್ವಾತಂತ್ರ್ಯ ಹೋರಾಟಗಳು ಅನೇಕ ಬಗೆಯಲ್ಲಿ ನಡೆದವು. ಅವು ಮಂದಗಾಮಿ ಮತ್ತು ತೀವ್ರಗಾಮಿ ಸಮೂಹದಲ್ಲಿರಬಹುದು ಅಥವಾ ಬೇರೆ ರೀತಿಯಾಗಿರಬಹುದು. ಆದರೆ ಒಟ್ಟಾರೆ ಸ್ವಾತಂತ್ರ್ಯ ಹೋರಾಟಕ್ಕಾಗಿ ಇಡೀ ಭಾರತೀಯರನ್ನೇ ಒಟ್ಟು ಗೂಡಿಸಬೇಕಾದ ಅನಿವಾರ್ಯತೆಯ ಮಧ್ಯೆ ಆಧುನಿಕತೆಯು ಆ ವೇಳೆಗಾಗಲೇ ಕೂಸಾಗಿ ಬೆಳೆಯುತ್ತಿತ್ತು. ಬ್ರಿಟಿಷರ ಒಡೆದು ಆಳುವ ನೀತಿಯಿಂದ ಭಾರತೀಯರು ಮೊದಮೊದಲು ಕಂಗೆಟ್ಟರಾದರೂ, ನಂತರದಲ್ಲಿ ಜಾತಿ, ಮತ, ಧರ್ಮ, ಸಂಸ್ಕೃತಿಯ ಭಿನ್ನತೆಯನ್ನು ಹೋಗಲಾಡಿಸಿ ಅಲ್ಪಸಂಖ್ಯಾತರು-ಬಹುಸಂಖ್ಯಾತರು ಎಂಬ ಭೇದ-ಭಾವವಿಲ್ಲದೆ, ಮೇಲು-ಕೀಳು ಎಂಬ ತಾರತಮ್ಯವಿಲ್ಲದೆ ನಾವು-ನಮ್ಮವರು, ಏಕತೆ-ಐಕ್ಯತೆ ಎಂಬ ಮನೋಭಾವನೆಯನ್ನು ಬೆಳೆಸಿಕೊಳ್ಳಲೇ ಬೇಕಾಯಿತ್ತು. ಹೀಗಾಗಿ ಆಧುನಿಕತೆಯು ಹೊಸ ಅರ್ಥ, ಹೊಸ ರೂಪವನ್ನು ಪಡೆಯಿತ್ತು. ಆ ವೇಳೆಯಲ್ಲಿ ಭಾರತೀಯರಿಗೆ ಸಂಪೂರ್ಣ ಸ್ವಾತಂತ್ರ್ಯ ಪಡೆಯುವುದು ಬೇಕಾಗಿತ್ತೇ ಹೊರತು ಮತಧರ್ಮಗಳನ್ನು ಕಾಪಾಡಿಕೊಳ್ಳುಬೇಕಾದ ಅನಿವಾರ್ಯತೆಯಲ್ಲ.

ಇದೇ ವೇಳೆಯಲ್ಲಿ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ರೀತಿಯಾದ ಹೋರಾಟಗಳು ನಡೆಯುತ್ತಿದ್ದವು. ಅಮೇರಿಕಾ ಆ ವೇಳೆಗಾಗಲೇ ಸ್ವಾತಂತ್ರ್ಯ ಪಡೆದು ಅಭಿವೃದ್ಧಿ ಸಾಧಿಸಿತ್ತು. ಫ್ರಾನ್ಸ್ ಕ್ರಾಂತಿಯು ಸಂಪೂರ್ಣ ಯಶಸ್ಸು ಸಾಧಿಸಿತ್ತು. ರಷ್ಯಾದೇಶದಲ್ಲಿ ಹೋರಾಟವೂ ಯಶಸ್ಸಿನತ್ತ ಹೊರಟ್ಟಿತ್ತು. ಹೀಗಾಗಿ ಭಾರತೀಯರು ತಮ್ಮ ಹಕ್ಕುಗಳಿಗಾಗಿ ಎಲ್ಲಾ ಭಿನ್ನ ಭೇದ ಮರೆತು ಹೋರಾಡಲು ಮುಂದಾದರು.

ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಸಾಹಿತ್ಯದ ಮೂಲಕವೂ ಸಹ ಬೆಂಬಲ ನೀಡಲಾಯಿತ್ತು. ಸಾಹಿತ್ಯ ಕೃತಿಗಳಿಂದ ಏಕತೆ-ಐಕ್ಯತೆಯನ್ನು ಸಾರಲಾಯಿತ್ತು. ಹೀಗಾಗಿ ಸಾಹಿತ್ಯವೂ ಆಧುನಿಕತೆಯತ್ತ ನಡೆಯಿತ್ತು.

ಸಾಹಿತ್ಯದಲ್ಲಿ ಸಂಪ್ರದಾಯ ಮತ್ತು ಆಧುನಿಕತೆ

ಸಾಹಿತ್ಯ ಸಮಾಜದ ಕೈಗನ್ನಡಿ ಸಾಹಿತ್ಯ ಮತ್ತು ಸಮಾಜ ಪರಸ್ಪರ ಒಂದನ್ನು ಬಿಟ್ಟು ಮತ್ತೊಂದಿಲ್ಲ. ಹೀಗಿರುವಾಗ ಸಂಪ್ರದಾಯ ಮತ್ತು ಆಧುನಿಕತೆಯ ಬಗೆಗಿನ ಚಿಂತೆನ ಬಹಳ ಹಿಂದಿನದೆಂದೇ ಹೇಳಬಹುದು. ಸಂಪ್ರದಾಯದ ಬಗೆಗಿನ ಚಿಂತನೆಗಳು ಸಾಹಿತ್ಯ ಕೃತಿಯಲ್ಲಿ ಎಷ್ಟರ ಮಟ್ಟಿಗೆ ಮೂಢಿಬಂದಿದೆಯೋ, ಅಷ್ಟೇ ಆಧುನಿಕತೆಯ ಬಗೆಗಿನ ಚಿಂತನೆಯೂ ಕೂಡ ಚಿತ್ರಿತವಾಗಿದೆ.

ವೈಚಾರಿಕತೆಯ ಬಗೆಗಿನ ದೃಷ್ಟಿಕೋನವನ್ನು ನಾವು ಪಂಪನಿಂದಲೇ ನೋಡಬಹುದು. "ಮಾನವ ಜಾತಿ ತಾನೊಂದೆ ವಲಂ" ಹಾಗೂ "ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರಕುಲಂಗೆ ನಂಬಲೇ ಮಾತೊ..." ಎಂದು ಆದಿಪುರಾಣದ ಪ್ರಾರಂಭದಲ್ಲೆ ಹೇಳುತ್ತಾನೆ. ಅದೇ ರೀತಿಯಾಗಿ "ವಿಕ್ರಮಾರ್ಜುನ ವಿಜಯಂ" ಎಂಬ ಕಾವ್ಯದಲ್ಲಿ

"ಕುಲಂ ಕುಲಮಲ್ತು, ಗುಣಂಕುಲಂ

ಚಲಂ ಕುಲಮಭಿನಮಾನವೊಂದೆ ಕುಲಂ"

ಎಂದು ಹೇಳುವಾಗ ಜಾತಿ-ಜಾತಿಯ, ಮತಧರ್ಮದ ನಡುವಿನ ಸಂಘರ್ಷ ಮೇಲು-ಕೀಳುಗಳೆಂಬ ತಾರತಮ್ಯ, ಜಾತಿಯ ಬಗೆಗಿನ ಕಠಿಣತೆ, ಕ್ರೂರತೆ, ಅಸಮಾನತೆಯನ್ನು ತಿಳಿಯಪಡಿಸಿದರೂ, ಕರ್ಣನ ಪಾತ್ರದ ಮೂಲಕ ಸರ್ವಸಮಾನತೆಯ ನಿಲುವು ತಾಳಬೇಕೆಂಬ ಅಭಿಪ್ರಾಯವನ್ನು, ರಾಜನ ಆಸ್ಥಾನದಲ್ಲಿ ಪುರೋಹಿತ ಷಾಹಿಯ ಎದುರು ನಿಂತು ಆಗಿನ ಕಾಲಮಾನದ ಸ್ಥಿತಿಯಲ್ಲಿ ಹೇಳುವಾಗ, ಅಂದಿನ ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಪಂಪನಿಗೆ ವಿರುದ್ಧಧ್ವನಿ ಎತ್ತಬೇಕು ಎಂದು ಅನ್ನಿಸಿರಬೇಕು.

ಪಂಪನ ನಂತರದಲ್ಲಿಯೇ ರನ್ನ ಹಾಗೂ ನಾಗಚಂದ್ರರ ದೃಷ್ಟಿಕೋನದಲ್ಲಿಯೂ ನಾವು ವೈಚಾರಿಕತೆಯನ್ನು ಗುರುತಿಸಿಕೊಳ್ಳಬಹುದು. ಪರಂಪರಾಗತವಾಗಿ ಬಂದಿದ್ದ ಚಿಂತನೆಯ ಕ್ರಮವನ್ನು ವೈಚಾರಿಕತೆಯ ಹಿನ್ನೆಲೆಯಲ್ಲಿಯೇ ಬದಲಾಯಿಸಿದ್ದಾರೆ. ರನ್ನ ದುರ್ಯೋಧನನ ಪಾತ್ರವನ್ನು ಅಭಿಮಾನಧನನನ್ನಾಗಿ ಮಾಡಲು

ಯತ್ನಿಸಿದರೆ, ರಾವಣನು ಸೀತೆಯನ್ನು ಅಪೇಕ್ಷಿಸಲು ವಿಧಿಯೇ ಕಾರಣವೆಂದು, ಚಿಂತಿಸುವುದು ಕೂಡ ಒಂದು ರೀತಿಯಲ್ಲಿ ವೈಚಾರಿಕತೆಯೇ ಆಗಿದೆ.

ಇನ್ನೂ ೧೨ನೇ ಶತಮಾನವನ್ನು ಇಡೀ ಭಾರತವೇ ನೆನಪಿಸಿಕೊಳ್ಳಬೇಕಾದ ಹಂತವಾಗಿದೆ. ಕರ್ನಾಟಕದ ಸಾಮಾಜಿಕ ವ್ಯವಸ್ಥೆಯಲ್ಲಿ ಅಲ್ಲೋಲ-ಕಲ್ಲೋಲ ಪರಿಸ್ಥಿತಿಯು ಸಂಭವಿಸಿತ್ತು. ಬಸವಣ್ಣ ಬಿಜ್ಜಳನ ರಾಜಾಸ್ಥಾನದಲ್ಲಿ ನೆಲೆ ನಿಂತ ಸಂದರ್ಭದಲ್ಲಿ ಸರ್ವಧರ್ಮಸಮಾನತಾ ಸಮಾಜಮುಖಿ ನಿಲುವು ಹೊಂದಿದ್ದು, ಸ್ತ್ರೀಯರಿಗೆ, ಕೆಳವರ್ಗ, ಬಡವರಿಗೆ, ಶೋಷಿತರಿಗೆ ಸಮಾಜದಲ್ಲಿ ಮೇಲ್ಮುಖವಾದ ಸ್ಥಾನಮಾನವನ್ನು ದೊರಕಿಸಿಕೊಡಲು ಯತ್ನಿಸಿದರು. ಅಷ್ಟೇ ಅಲ್ಲದೆ ಕೆಳವರ್ಗದವರಿಗೂ ಹಾಗೂ ಮೇಲ್ವರ್ಗದವರಿಗೂ 'ರಕ್ತಸಂಬಂಧ' ಎಂಬುದು ಮರೀಚಿಕೆ ಎಂಬಂತಿದ್ದ ಸಂದರ್ಭದಲ್ಲಿ, ಅಂತರ ಜಾತಿಯ ವಿವಾಹ ಸಂದರ್ಭವನ್ನು ಏರ್ಪಡಿಸಿದ್ದು ಈಗ ಇತಿಹಾಸವಾಗಿದೆ. ಇದರ ಪರಿಣಾಮ ಸಮಾಜವೂ ಸ್ವಲ್ಪ ಸ್ವಲ್ಪವಾಗಿ ಬದಲಾಗಲು ಕಾರಣವಾಯಿತ್ತು.

ಬಸವಣ್ಣನವರ ಕಾಲದಿಂದ ಮುಂದೆ ಸಮಾಜದಲ್ಲಿ ಅಲ್ಪ-ಸ್ವಲ್ಪ ಬದಲಾವಣೆಗಳು ಸಂಭವಿಸುತ್ತಲೇ ಇದ್ದವು. ಮುಂದೆ ಮುದ್ದಣ ಕೆಲವು ವಿಷಯಗಳಲ್ಲಿ ಆಧುನಿಕತೆಯನ್ನು ತೋರಿದರೂ, ಆಧುನಿಕತೆಯ ಕೋಲಾಹಲದಲ್ಲಿ ಕೂಡ ತಾನೊಂದು ಮೌನದೀಪವಾಗಿ ಉಳಿದುಬಿಟ್ಟ. ಆದರೆ ಕನ್ನಡ ನಾಡು ಆಧುನಿಕತೆಯ ವೈಚಾರಿಕತೆಯಿಂದ ದೂರ ಉಳಿಯಲಿಲ್ಲ ಎಂಬುದಕ್ಕೆ ೧೯ನೇ ಶತಮಾನದಲ್ಲಿ ನಡೆದ ಘಟನೆಗಳೇ ಸಾಕ್ಷಿ

ಪಾಶ್ಚಾತ್ಯ ಜೀವನದ ಪದ್ಧತಿ ಹಾಗೂ ಶಿಕ್ಷಣ ಮತ್ತು ಆಂಗ್ಲ ಸಾಹಿತ್ಯದೊಂದಿಗಿನ ನಿಕಟ ಸಂಪರ್ಕದ ಪರಿಣಾಮವಾಗಿ ನಮ್ಮ ಮನೋಧರ್ಮವನ್ನು ಸಂಪ್ರದಾಯದ ಕಪಿಮುಷ್ಠಿಯಿಂದ ಬಿಡಿಸಲು ಅಣಿಯಾದವು. ಅದರಲ್ಲೂ ರಾಷ್ಟ್ರೀಯತೆಯ ಬಗೆಗಿನ ಚಿಂತನೆಯು ಬಹಳ ಪ್ರಮುಖವಾಯಿತ್ತು. ಲೇಖನ, ಪ್ರಬಂಧ, ಕಾವ್ಯ, ಕಾದಂಬರಿ ಮುಂತಾದವುಗಳಲ್ಲಿ ಸಮಸ್ಯೆಗಳು ನಮ್ಮವೇ ಆಗಿದ್ದರೂ, ಆ ಸಮಸ್ಯೆಗಳನ್ನು ಚರ್ಚಿಸುವಾಗ ಮಾತ್ರ ನಮ್ಮ-ನಮ್ಮ ಲೇಖಕರ ದೃಷ್ಟಿಕೋನ ಮಾತ್ರ ಬದಲಾಯಿತ್ತು. ಅದೇ ರೀತಿಯಾಗಿ ಅಭಿವ್ಯಕ್ತಿಯ ರೂಪಗಳು ಸಹ ಬದಲಾದವು.

ಪ್ರಜಾಪ್ರಭುತ್ವದ ಚಿಂತನೆಗಳು ಆಧುನಿಕ ಜೀವನದಲ್ಲಿ ಹೊಸ ಮೌಲ್ಯವಾಗಿ ಪರಿಣಮಿಸಿವೆ. ಈ ಮಾತು ಸಾಹಿತ್ಯಕ್ಕೆ ಅಷ್ಟೇ ಸೀಮಿತವಾಗದೆ, ಬೇರೆ ಬೇರೆ ಕ್ಷೇತ್ರಗಳಿಗೂ ಅನ್ವಯಿಸಿದೆ. ಅದರಲ್ಲೂ ಸಮೂಹ ಮಾಧ್ಯಮಗಳಿಗೆ ಹೆಚ್ಚಾಗಿ ಅನ್ವಯಿಸಿದೆ.

ಸೃಜನಶೀಲತೆ ಹಾಗೂ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಗ್ರಹಿಕೆಗಳಿಂದ ಉಂಟಾದ ಬೌದ್ಧಿಕತೆಯು ಅನ್ವೇಷಣೆಯ ನೆಲೆಯನ್ನಾಗಿ ಮಾಡಿದೆ. ಸೃಜನಶೀಲತೆಯ ಶೋಧ ಸಂಸ್ಕೃತಿಯ ಬಹುಮುಖತ್ವವನ್ನು ಪರಿಚಯಿಸಿದೆ. ನಮ್ಮ ಸಂಸ್ಕೃತಿಗೆ ಈಗಾಗಲೇ ಇರುವ ಚಹರೆಯ ಸ್ವರೂಪವನ್ನು ಈಗ ಇಲ್ಲವಾಗಿಸಿ ಸಾರ್ವತ್ರಿಕ ಸಾಂಸ್ಕೃತಿಕ ಚಹರೆಯ ಗಳಿಕೆಯ ಕಡೆಗೆ ಸಾಗುವುದಾಗಿದೆ.

ಆಧುನಿಕತೆಯ ಚಿಂತನೆಯು ಲೋಕಗ್ರಹಿಕೆಯನ್ನು ಬಹುಮುಖಿ ಹಾಗೂ ಸಂಪೂರ್ಣ ವಿಕಸನಶೀಲವೆಂದು, ಈ ವಿಕಸನ ಶೀಲತೆಯು ವರ್ತಮಾನವನ್ನು ದೊಡ್ಡದೆಂದೂ, ಶ್ರೇಷ್ಟವೆಂದು ನಂಬಿ ತನಗಿಂತ ಹಿಂದಿನದ್ದನ್ನು- ಈ ಮಾನದಂಡದಿಂದಲೇ ಅಳೆಯಲು ಪ್ರಾರಂಭಿಸಿದೆ. ಬ್ರಾಹ್ಮಣ-ಶೂದ್ರ, ನಗರ-ಗ್ರಾಮೀಣ, ಬಡವ-ಶ್ರೀಮಂತ, ಸಂಪ್ರದಾಯ-ಆಧುನಿಕತೆಯ ಬಗೆಗಿನ ಚಿಂತನೆಗಳು ಸಾಮಾಜಿಕ ಪ್ರಜ್ಞೆಯ ಆವಿಷ್ಕಾರಕ್ಕೆ ಕಾರಣವಾಗಿವೆ.

ವೈಚಾರಿಕತೆ ಎಂಬುದು ಕೇವಲ "ಭೌತ ಪ್ರಪಂಚಕ್ಕೆ" ಮಾತ್ರ ಸೀಮಿತವಾಗಿಲ್ಲ. ಒಟ್ಟಾರೆ ಸಂಸ್ಕೃತಿಯ ಹಲವು ವಲಯಗಳನ್ನು ಆವರಿಸಿದೆ. ಶೋಷಣೆ, ಬಡವ, ಬಡತನ, ಮಾನವತಾವಾದ, ಧರ್ಮ ನಿರಪೇಕ್ಷತೆ, ಸಾಮಾಜಿಕ ನಿಲುವುಗಳ ಪ್ರಶ್ನೆ ಹಾಗೂ ಆದರ್ಶ ಮುಂತಾದವುಗಳು ಬದುಕಿನ ಸ್ಥಿತಿಗತಿಗಳ ಗ್ರಹಿಕೆಯನ್ನು ಸೃಜನಾತ್ಮಕತೆಯ ಮೂಲಕ ಕ್ರಿಯಾತ್ಮಕವಾಗಿಸಿದೆ. ಹಿಂದಿನ ಕಾಲದಲ್ಲಿ ಸಾಹಿತ್ಯ ಸಂಗೀತ, ನೃತ್ಯ ಹಾಗೂ ಕಲೆಗಳಲ್ಲಿ ಪರಂಪರೆಯನ್ನು ನಿರ್ಮಿಸುವುದೇ ಶ್ರೇಷ್ಟತೆಯ ಲಕ್ಷಣವಾಗಿತ್ತು. ಹೀಗಾಗಿ ವ್ಯಕ್ತಿಯು ತನ್ನ ವ್ಯಕ್ತಿತ್ವವನ್ನೆಲ್ಲಾ ಪಣವಾಗಿಟ್ಟು, ಸಂಪ್ರದಾಯದ ಅವಿಚ್ಛಿನ್ನತೆಯನ್ನು ಕಾಪಾಡಲು ಯತ್ನಿಸುತ್ತಿದ್ದ. ಆದರೆ ಸಾಹಿತ್ಯಸೃಷ್ಟಿಯ ಇಂದಿನ ಸಾಮಾಜಿಕ ಪ್ರೇರಣೆಗಳನ್ನು ಕುರಿತ ಚಿಂತನೆಗಳು ಕೃತಿಕಾರನನ್ನು ಒಬ್ಬ ವ್ಯಕ್ತಿಯನ್ನಾಗಿ ನೋಡುವ ಬದಲು ವಿಶಿಷ್ಟ ಆಶಯವನ್ನುಳ್ಳ ಸಮೂಹದ ಭಾಗವನ್ನಾಗಿ ನೋಡಲಾಗುತ್ತದೆ.

ಸಂಪ್ರದಾಯದಿಂದ ಹಾಗೂ ಅಮೌಲ್ಯ ಪರಂಪರೆಯಿಂದ ದೂರ-ಬಹುದೂರ ಸಿಡಿಯುವುದೇ ಈಗಿನ ಶ್ರೇಷ್ಠತೆಯ ಲಕ್ಷಣವಾದ್ದರಿಂದ, ವ್ಯಕ್ತಿನಿಷ್ಠತೆಯು ಬಂದುಬಿಟ್ಟಿದೆ. ಹೀಗಾಗಿ ಸಂಪ್ರದಾಯ ಶರಣತೆ ಎಂಬುದು ನಮಗೀಗ ಬೇಡದ ಚಿಂತನೆಯಾಗಿ ಮಾರ್ಪಟ್ಟಿದೆ. ಹೀಗಾಗಿ ಆಧುನಿಕತೆಯನ್ನು ಪ್ರತಿಪಾದಿಸದ ಲೇಖಕ ಇಂದು ಇಲ್ಲವಾಗಿದ್ದಾನೆ. ಕೃತಿಯ ಒಳಗೆ ಸಂಸ್ಕೃತಿಯ ಗ್ರಹಿಕೆಯ ಕೆಲಸವನ್ನು ಮಾಡುವುದರ ಮೂಲಕವಾಗಿ ಸಮಕಾಲೀನ ಸಾಂಸ್ಕೃತಿಕ ಪ್ರಕ್ರಿಯೆಗಳಲ್ಲಿ ಜೀವಂತವಾಗಿ ಸ್ಪಂದಿಸಬೇಕು.

೨೦ ಹಾಗೂ ೨೧ನೇ ಶತಮಾನದ ಕನ್ನಡ ಸಾಹಿತ್ಯವನ್ನು 'ಆಧುನಿಕ ಕನ್ನಡ ಸಾಹಿತ್ಯ' ಎಂದೂ ಸಹ ಹೇಳುವ ಪರಿಪಾಠವಿದೆ. ನವೋದಯ ಪ್ರಗತಿಶೀಲ, ನವ್ಯ, ದಲಿತಬಂಡಾಯ ಎಂಬ ಹೆಸರುಗಳು ಆಧುನಿಕತೆಯನ್ನೇ ಪ್ರತಿಪಾದಿಸಿವೆ. ಇಂತಹ ಆಧುನಿಕ ಸಾಹಿತ್ಯಕ್ಕೆ ಪ್ರಮುಖ ಪ್ರೇರಣೆ ಎಂದರೆ, ಇಂಗ್ಲಿಷ್ ಸಾಹಿತ್ಯ ಮತ್ತು ಇಂಗ್ಲಿಷ್ ವಿದ್ಯಾಭ್ಯಾಸ. ಇದರ ಪರಿಣಾಮವಾಗಿ

> "ಇಪ್ಪತ್ತನೇ ಶತಮಾನದ ತಿರುವಿನಲ್ಲಿ ನಿಂತು ನಾವು ನಮ್ಮ ಸಂಸ್ಕೃತಿಯ ಮೂಲಕ ಲೋಕವನ್ನು ಗ್ರಹಿಸುವ ವಿಧಾನದಲ್ಲಿ ಒಂದು ಮುಖ್ಯ ಪಲ್ಲಟವನ್ನು ತಂದುಕೊಂಡಂತೆ ತೋರುತ್ತದೆ."[೧]

ಎಂದು ಹೇಳುತ್ತಾರೆ. ಅಮೌಲ್ಯಯುತವಾದ ಸಂಪ್ರದಾಯದ ವಿರುದ್ಧ ಈಗ ಪ್ರತಿಯೊಬ್ಬರು ಸಹ ಬಂಡಾಯಗಾರನಂತಾಗಿದ್ದಾರೆ. ಈ ಅರ್ಥದಲ್ಲಿ ಆಧುನಿಕತೆಯನ್ನು ಪ್ರತಿಪಾದಿಸುವುದೇ ಮಹತ್ವವಾಗಿದೆ. ಹಾಗೂ ಶ್ರೇಷ್ಠತೆಯಿಂದ ಕೂಡಿದೆ.

ಆದರೂ ಸಹ ನವಜೀವನ, ಹೊಸತನದ ಆಸೆ ಹಂಬಲ ಆಧುನಿಕತೆಯ ಹುಟ್ಟಿನಿಂದಾಗಿ ಬದುಕಿನ ಕೆಲವು ಮಹತ್ವದ ಮೌಲ್ಯಗಳನ್ನು ಕೆಲವು ಬಾರಿ ಕಡೆಗಣಿಸುತ್ತಿದ್ದೇವೆ ಎಂದೆನ್ನಿಸದಿರದು. ವರ್ತಮಾನದ ಬದಲಾವಣೆಗಳು ಸಾಹಿತ್ಯ ಜೀವನದಲ್ಲಿ ಸ್ವಾತಂತ್ರ್ಯದ ವಿಕೃತ ಅಭಿಲಾಷೆ ತುಂಬಿದ್ದರಿಂದ ಈ ರೀತಿಯಾಗಿರಬಹುದು. ಹೀಗಾಗಿ ಆಧುನಿಕತೆಯ ನೆರಳಿನಲ್ಲಿ ಸಂಪ್ರದಾಯ ಎಂಬ ಹೆಸರಿನಲ್ಲಿ ಪುರಾಣ ಅದರಲ್ಲೂ ಮುಖ್ಯವಾಗಿ ಜಾನಪದವನ್ನು ನಾವು ಕಡೆಗಣಿಸುತ್ತಿದ್ದೇವೆ, ಎಂಬುದರಲ್ಲಿ ಅನುಮಾನವೇ ಇಲ್ಲ.

"ವಾಸ್ತವಮಾರ್ಗದ ಬೆನ್ನು ಹತ್ತಿ ಪುರಾಣಗಳ ಗ್ರಹಿಕೆಯನ್ನು ಸಾಹಿತ್ಯಕೃತಿಗಳಿಂದ ದೂರವಿರಿಸಿದ್ದೇವೆ... ಸಾಹಿತ್ಯ ಕೃತಿಗಳ ಹಿಂದೆ ಕೃತಿಕಾರನ ವಾಸ್ತವ ಅನುಭವಗಳು ಒತ್ತಾಸೆಯಾಗಿ ನಿಲ್ಲಬೇಕೆಂಬ ವಾದವನ್ನು ಎಲ್ಲಿಯವರೆಗೆ ಎಳೆದು ತಂದಿದ್ದೇವೆಂದರೆ, ಬರವಣಿಗೆಗೆ ಪೂರ್ವಭಾವಿಯಾಗಿ ಬರಹಗಾರನಲ್ಲಿ ಅನುಭವ ಸನ್ನದ್ಧಗೊಳ್ಳದಿದ್ದರೆ, ಆ ವ್ಯಕ್ತಿಯ ಕೃತಿಯೂ ಅಪ್ರಾಮಾಣಿಕ ಎಂದು ಸಹ ಕರೆಯಲು ಹಿಂಜರಿಯುತ್ತಿಲ್ಲ"[2]

ಎಂದು ಹೇಳಿರುವುದು ಸಮಂಜಸವಾಗಿದೆ. ನವೋದಯ ಹಾಗೂ ನವ್ಯ ಸಂದರ್ಭಗಳಲ್ಲಿ ಸಾಹಿತ್ಯ ಚರ್ಚೆಯು ಮೂಲತಃ ಕಾವ್ಯಕೇಂದ್ರಿತವಾಗಿದ್ದರೆ, ಪ್ರಗತಿಶೀಲ ಹಾಗೂ ದಲಿತ-ಬಂಡಾಯ ಸಾಹಿತ್ಯ ಚಳುವಳಿಗಳ ಸಂದರ್ಭಗಳಲ್ಲಿ ಸಾಹಿತ್ಯವನ್ನು ಕುರಿತು ಚರ್ಚೆಯೂ ಕೇವಲ ಕಾವ್ಯಕೇಂದ್ರಿತವಾಗದೆ ಒಟ್ಟಾರೆ ಸಾಹಿತ್ಯವನ್ನು, ಅದಕ್ಕೆ ಅಗತ್ಯವಾದ ಸಾಮಾಜಿಕ ಧೋರಣೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡದ್ದು ಒಂದು ಮುಖವಾದ ಬದಲಾವಣೆಯಾಗಿದೆ.

"ಭಾರತದ ಗತಕಾಲದ ಸಂಸ್ಕೃತಿಯ ಬಗ್ಗೆ ಉಬ್ಬಿನಿಂದ ವಾದ ಮಂಡಿಸುವ ಹಾಗೂ ಪಶ್ಚಿಮದ ಚಿಂತನೆಯನ್ನು ಉಗ್ರವಾಗಿ ವಿರೋಧಿಸುವ ಎಲ್ಲ ಚಿಂತನೆಗಳಲ್ಲಿ ಪೌರ್ವಾತ್ಯವಾದಿ ಸಂಸ್ಕೃತಿ ಚಿಂತನೆಯ ನೆರಳುಗಳಿವೆ"[3]

ಎಂದು ಅಭಿಪ್ರಾಯ ಪಟ್ಟಿರುವುದು ಸಮಂಜಸವಾದದ್ದೇ. ಏಕೆಂದರೆ, ಇಲ್ಲಿ ನಮ್ಮದ್ದೇ ಶ್ರೇಷ್ಠ, ಉಳಿದಿದ್ದೆಲ್ಲಾ ಕನಿಷ್ಠ ಎಂಬ ಭಾವನೆಯು ಕೆಲವರಲ್ಲಿ ಬೆಳೆದಿರುವುದನ್ನು ಕಾಣುತ್ತೇವೆ. ಆದರೆ ಒಳಗಿನ ಹಾಗೂ ಹೊರಗಿನ ಎರಡು ಸಂಸ್ಕೃತಿಯನ್ನು ವಸ್ತುನಿಷ್ಠವಾಗಿ ನೋಡುವ ದೃಷ್ಟಿಯು ಬಹುಮುಖ್ಯವಾಗಿ ಬೇಕಾಗಿದೆ. ನಮ್ಮ ಸಂಸ್ಕೃತಿಯಲ್ಲಿರುವ ಲೋಪಗಳನ್ನು ಗುರುತಿಸಿ ಸರಿಪಡಿಸಲು ಯತ್ನಿಸುವುದೇ ನಿಜವಾದ ಅರ್ಥದಲ್ಲಿ ಒಂದು ಸಂಸ್ಕೃತಿಯಾಗುತ್ತದೆ.

ಒಟ್ಟಿನಲ್ಲಿ 'ಆಧುನಿಕತೆ' ಎಂಬ ಪರಿಕಲ್ಪನೆಯು ಸಮಗ್ರವಾದ ಚಿಂತನೆಯಾಗಿದೆ. ಅದರಲ್ಲೂ ಇತ್ತೀಚಿನ ದಶಕಗಳಲ್ಲಿ ಕಂಡುಬರುವ ಖಾಸಗೀಕರಣ, ಜಾಗತೀಕರಣದ ಫಲ ಇದೆಂದು ಹೇಳಬಹುದು. ಪ್ರಾದೇಶಿಕತೆ, ಸ್ಥಳೀಯ ಎಂಬ ಕಲ್ಪನೆ ಸಂಕುಚಿತವಾಗಿ ಇಡೀ ವಿಶ್ವಕುಟುಂಬ ಕಲ್ಪನೆ ಒಂದು ಕಡೆ ಬಲವಾಗುತ್ತಾ ಹೋಗುತ್ತಿದೆ.

ಆದರೂ ಸಂಸ್ಕೃತಿ ಸಂಪ್ರದಾಯ ಮತ್ತು ಆಧುನಿಕತೆ ಎಂಬುದಕ್ಕೆ ಸರ್ವಸಮ್ಮತವಾದ ಅಭಿಪ್ರಾಯವಿಲ್ಲ. ಆದರೂ ಅಲ್ಲಲ್ಲಿ ಅನ್ಯರ ಆಕ್ರಮಣ, ಜಾಗತೀಕರಣ, ಉದಾರೀಕರಣದಿಂದ ನಮ್ಮ ಮೂಲ ಸಂಸ್ಕೃತಿಗೆ ಪೆಟ್ಟು ತಗುಲಿದೆ ಎಂಬಂತಹ ಮಾತುಗಳನ್ನು ಕೇಳುತ್ತಿರುತ್ತೇವೆ.

ಒಟ್ಟಿನಲ್ಲಿ ಆಧುನಿಕತೆ ಎಂಬುದು ವಿಶಾಲ ಚಿಂತನೆಯಾದ ಪರಿಣಾಮ, ಈ ಅಧ್ಯಯನದಲ್ಲಿ ಮತಧರ್ಮ, ಜಾತಿಯ ವಿರುದ್ಧ ಧ್ವನಿ, ತಲೆಮಾರುಗಳ ನಡುವಿನ ಸಂಘರ್ಷ, ನಗರ ಜೀವನ, ಸ್ವಾತಂತ್ರ್ಯ ಹೋರಾಟ, ನಾವೂ-ನಮ್ಮವರು, ಏಕತೆ-ಐಕ್ಯತೆ ಎಂಬಂತಹ ಮಾನವ ಸಂಬಂಧಗಳು, ಒಳಿತು-ಕೆಡಕಿನ ಸಂಘರ್ಷ, ಲೈಂಗಿಕ ಪಾವಿತ್ರತೆಯಲ್ಲಿ ಹಿರಿಯರ ನಂಬಿಕೆ. ಜೀವನದ ಅಭದ್ರತೆ ಮುಂತಾದ ಅಂಶಗಳ ಜೊತೆ ಜೊತೆಯಲ್ಲಿಯೇ ಆಧುನಿಕತೆಯ ಬಗೆಗಿನ ಕೃತಿಕಾರರ ನಿಲುವುಗಳೇನು? ಎಂಬ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡಲು ಯತ್ನಿಸಲಾಗಿದೆ.

ಟಿಪ್ಪಣಿಗಳು

೧. ನಾರಾಯಣ ಕೆ.ವಿ., ಬೇರು ಕಾಂಡ ಚಿಗುರು, ಪು.೧

೨. ಅದೇ, ಪು.೪

೩. ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, ಪು.೨೨

ಅಧ್ಯಾಯ ೪

'ಗಂಗವ್ವಗಂಗಾಮಾಯಿ'- ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷ

೪

ಗಂಗವ್ವ ಗಂಗಾಮಾಯಿ - ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷ

'ಗಂಗವ್ವ ಗಂಗಾಮಾಯಿ' - ಕೌಟುಂಬಿಕ ನೈಜ ಚಿತ್ರಣವನ್ನು ಒಳಗೊಂಡ ಕಾದಂಬರಿ. ಭಿನ್ನ-ಭಿನ್ನ ತಲೆಮಾರುಗಳಿಗೆ ಸೇರಿದ ವ್ಯಕ್ತಿಗಳು ಸ್ವಂತಿಕೆ, ಸ್ವಾಭಿಮಾನದ ಹಠಮಾರಿತನ ಧೋರಣೆಯಿಂದ ತಮ್ಮ ಗುರುತನ್ನು ಪ್ರತಿಷ್ಠಾಪಿಸಲು ಮಾಡುವ ಹೋರಾಟವಾಗಿದೆ.

ತಮ್ಮನಾದ ರಾಘಪ್ಪನು ತನ್ನ ಚಾಣಾಕ್ಷ್ಯಮತಿಯಿಂದ ಮಾಡುವ ಮೋಸದಿಂದಾಗಿ ತನ್ನ ಸಕಲ ಸಂಪತ್ತು ಹಾಗೂ ಗಂಡನನ್ನು ಕಳೆದುಕೊಂಡು ವಿಧವೆಯಾದ ಗಂಗವ್ವ ಏಕಮಾತ್ರ ಮಗ ಕಿಟ್ಟಿಯನ್ನು ಸಾಕಿ ಬೆಳೆಸಿ ನೌಕರಿ ಕೊಡಿಸಿ, ಅವನನ್ನು ಸಭ್ಯ ಸಂಸಾರಸ್ಥನನ್ನಾಗಿ ಮಾಡುವ ಛಲ ತೊಡುತ್ತಾಳೆ. ಎಲ್ಲ ಸುಖಮಯ ಎನ್ನುವ ವೇಳೆಯಲ್ಲಿ ಆಕಸ್ಮಿಕವಾಗಿ ಹತ್ತು ವರ್ಷಗಳ ನಂತರ ರಾಘಪ್ಪನ ಪುನಃ ಪ್ರವೇಶವಾಗಿ ಪುನಃ ದ್ವೇಷ ಸಾಧಿಸತೊಡಗಿ, ಹೇಗೆ ಇಡೀ ಕುಟುಂಬವೇ ಛಿದ್ರಣಗೊಂಡು ವಿಫಲ ಧಾರುಣ ಅಂತ್ಯ ಕಂಡಿತ್ತು ಎಂಬ ಸಣ್ಣ ಎಳೆಯನ್ನು ಇಟ್ಟುಕೊಂಡು ಇದರ ಸುತ್ತ ಕಥೆಯನ್ನು ಎಣೆಯಲಾಗಿದೆ.

ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ವಾಸ್ತವವಾದ ತೀವ್ರವಾಗಿದ್ದ ಕಾಲಘಟ್ಟದಲ್ಲಿ ಗಂಗವ್ವಗಂಗಾಮಾಯಿ ರಚಿತವಾಗಿದೆ. ಆ ಕಾಲಘಟ್ಟದಲ್ಲಿ ವಿಮರ್ಶಕರು ಇದನ್ನು ಭಿನ್ನದಾರಿಯನ್ನು ಹಿಡಿದ ಕಾದಂಬರಿ ಎಂದು ಗುರುತಿಸಿದ್ದಾರೆ. ಏಕೆಂದರೆ ಪುಣೇಕರರು ೧೯೫೫-೫೬ರಲ್ಲಿ ಈ ಕೃತಿಯನ್ನು ಪ್ರಕಟಿಸಿದರು. ಈ ವೇಳೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ನವೋದಯ ಸಾಹಿತ್ಯ ಹುಟ್ಟಿ ಸಮೃದ್ಧವಾಗಿತ್ತು. ಮುಂದೆ ನವೋದಯದ ಕೆಲವು ಲಕ್ಷಣಗಳನ್ನು ತಿರಸ್ಕರಿಸಿ ಹುಟ್ಟಿಕೊಂಡ ಪ್ರಗತಿಶೀಲ ಪಂಥದಲ್ಲಿ ಮಾರ್ಕ್ಸ್ ಮುಂತಾದವರ ಪ್ರಭಾವದಿಂದಾಗಿ ಸಾಮಾಜಿಕ ಸಮಸ್ಯೆಯತ್ತ ಗಮನಹರಿಸಿ ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸಲು ಯತ್ನಿಸುತ್ತಿದ್ದರು. ಮುಂದೆ ಪಾಶ್ಚಾತ್ಯ ಸಾಹಿತಿಗಳಾದ ಸಾತ್ರೆ, ಕಾಮೂ ಮುಂತಾದವರ ಪ್ರಭಾವದಿಂದ ನವ್ಯಸಾಹಿತ್ಯ ಆ ವೇಳೆಗಾಗಲೇ ಉದ್ಭವಿಸಿತ್ತು. ಗೋಪಾಲಕೃಷ್ಣ ಅಡಿಗ ಮತ್ತಿತರರು ಆ ವೇಳೆಗಾಗಲೇ ಅನೇಕ ಕವನಸಂಕಲನಗಳನ್ನು ಹೊರತಂದು ವ್ಯಕ್ತಿವಿಶಿಷ್ಟತೆಗೆ ಮಹತ್ವ ನೀಡಿ, ಎಲ್ಲವನ್ನು ಅನುಮಾನದಿಂದಲೇ ನೋಡುತ್ತಿದ್ದರು. ಇಂತಹ ವೇಳೆಯಲ್ಲಿ ಪ್ರಕಟವಾದ ಈ ಕಾದಂಬರಿ ವಾಸ್ತವವಾದಿ ನೆಲೆಯಲ್ಲಿ ಭಿನ್ನ ದಾರಿಯನ್ನೇ ಹಿಡಿಯಿತು. ಆದರೆ ನವೋದಯ ಸಾಹಿತ್ಯದ ಕೆಲವು ಅಂಶಗಳು ಕೃತಿಯಲ್ಲಿ ಮೇಳೈಸಿವೆ. ಜೊತೆಗೆ ಸಂಪ್ರದಾಯ ಮತ್ತು ಆಧುನಿಕತೆಯ ನಡುವೆ ನಡೆಯುವ ಸಂಘರ್ಷವೂ ಒಳಿತು-ಕೆಡಕಿನ ಸಂಘರ್ಷವಾಗಿ ಪರಿಣಮಿಸಿದ್ದರಿಂದ ಕೃತಿಯು ಹೊಸ ಚಿಂತನೆಯ ದಾರಿಯನ್ನು ಹಿಡಿಯಿತು.

[illegible]

ಕಾದಂಬರಿಯ ಪ್ರಾರಂಭವೇ ಗಂಗವ್ವನ ಕಾಶಿಯಾತ್ರೆಯಿಂದ. ಕಾಶಿಯಲ್ಲಿ ದೇವರ ದರ್ಶನ ಪಡೆದು ತನ್ನೂರಿಗೆ ಹಿಂತಿರುಗಿ ಬರುವಾಗ,

> "ಕಾಶಿಯವರೆಗೆ ಬಂದ ಮೇಲೆ ಗಂಗೋದಕ ಮರುಳುವುದುಂಟೆ? ತಾನು ಸಾಯುವ ಸಂದರ್ಭದಲ್ಲಿ ಊರ್ಧ್ವಶ್ವಾಸ ಹತ್ತಿ ಕಿಟ್ಟಿ ತನ್ನ ತಲೆಯ ಬಳಿ ಕುಳಿತು ಬಾಯಿಯಲ್ಲಿ ಗಂಗೋಧಕವನ್ನು ಹಾಕದ ಹೊರತು ಸದ್ಗತಿಯಿಲ್ಲ?"[೧]

ಎಂದು ಗಂಗಾಜಲವನ್ನು ತರುವ ಮಾರ್ಗ ಮಧ್ಯೆಯೇ ಪವಿತ್ರ ಎನ್ನಿಸಿದ್ದ, ಗಂಗಾಜಲವನ್ನು ಮಾನಸಿಕ ತಳಮಳದಿಂದ ಚೆಲ್ಲುವುದರ ಮೂಲಕ ಗಂಗವ್ವನ ಬದುಕಿನ ಸಮರವೂ ಪ್ರಾರಂಭವಾಗುತ್ತದೆ.

ರಾಘುಪ್ಪ ಮಾಡಿದ ಮೋಸದಿಂದಾಗಿ ಗಂಗವ್ವ ತನ್ನ ಮುಂದಿನ ಬದುಕನ್ನೇ ಸವಾಲಾಗಿ ಸ್ವೀಕರಿಸಿ ಕಿಟ್ಟಿಯನ್ನು ಓದಿಸಿ, ಕೊನೆಗೆ ನೌಕರಿಯನ್ನೂ ಸಹ ಕೊಡಿಸುತ್ತಾಳೆ. ಕಷ್ಟದ ದಿನಗಳೆಲ್ಲ ಕಳೆದು ಎಲ್ಲವೂ ಸುಂದರ ಸುಖಮಯ ಎನ್ನುವ ಸಂದರ್ಭದಲ್ಲಿ ಪುನಃ ರಾಘುಪ್ಪನ ಅನಿರೀಕ್ಷಿತ ಪ್ರವೇಶವಾಗುತ್ತದೆ. ಕಿಟ್ಟಿಯು ರಾಘುಪ್ಪನ ಚತುರ ಮಾತುಗಾರಿಕೆಯಿಂದ ಆಕರ್ಷಿತನಾಗುತ್ತಾನೆ. ಕಾರಣ ರಾಘುಪ್ಪನಿಗೆ ತನ್ನ ಕಛೇರಿಯ ಮುಖ್ಯಸ್ಥರಾದ ಮಾಮಲೇದಾರರ ಗೆಳೆತನವಿರುವುದು ಹಾಗೂ ರಾಘುಪ್ಪ ತನ್ನ ಸೋದರಮಾವ ಕೂಡ. ತನ್ನ ಮಾವನ ಮಗಳಾದ ರತ್ನಾಳನ್ನು ನೋಡಿ ಹಿಂದಿನ ಎಲ್ಲ ವಿಚಾರಧಾರೆಗಳನ್ನು ಮರೆತು ಮದುವೆಯಾಗಲು ಬಯಸುತ್ತಾನೆ. ಆದರೆ ಗಂಗವ್ವನಿಗೆ ಇದು ಇಷ್ಟವಾಗುವುದಿಲ್ಲ. ತನಗೆ ಹಿಂದೆ ಮಾಡಿರುವ ಅನ್ಯಾಯವೇ ಸಾಕು. ಆತನ ಸಹವಾಸವೇ ಬೇಡ, ಎಂಬುದು ಈಕೆಯ ವಾದ. ದೇಸಾಯಿಯವರ ಪ್ರವೇಶದಿಂದಾಗಿ ಒಪ್ಪಿಗೆ ದೊರೆಯುತ್ತದೆ. ನೀಡಿದ ವಚನದಂತೆ ರಾಘುಪ್ಪ ನಡೆದುಕೊಳ್ಳದಿದ್ದಾಗ, ಮದುವೆಯ ಸಮಾರಂಭದಲ್ಲಿಯೇ ಕೋಲಾಹಲವಾಗುತ್ತದೆ. ಮೆಹಬೂಬಜಾನಳ ಸಮಯ ಪ್ರಜ್ಞೆಯಿಂದಾಗಿ ವಿವಾಹಕಾರ್ಯ ಸುಖಕರವಾಗಿ ಮುಕ್ತಾಯವಾಗುತ್ತದೆ.

ಲಗ್ನದ ನಂತರವಾದರೂ ಹಳೆಯ ದ್ವೇಷ-ವಿರಸ, ಮರೆತು ಗಂಗವ್ವ-ರಾಘುಪ್ಪ ಪರಸ್ಪರ ಒಂದಾದರೂ ಎನ್ನುತ್ತಿರುವಾಗ, ರಾಘುಪ್ಪನು ಗಂಗವ್ವ ಮತ್ತು ದೇಸಾಯಿಯರ ಮೇಲೆ ಹಳೆಯ ದ್ವೇಷವನ್ನೇ ಮತ್ತೇ ಸಾಧಿಸಲು ಯತ್ನಿಸುತ್ತಾನೆ. ಇದಕ್ಕಾಗಿ ರಾಘುಪ್ಪ ಎರಡು ಮಾರ್ಗಗಳನ್ನು ಕಂಡುಕೊಳ್ಳುತ್ತಾನೆ. ಮಗಳಾದ ರತ್ನಾ ಹಾಗೂ ಕಿಟ್ಟಿಗೆ ಗಂಗವ್ವನ ಮೇಲೆ ಚಾಡಿ ಹೇಳಿಕೊಡುವುದು. ಮತ್ತು ದೇಸಾಯಿಯರ ಮಗನಾದ ವಸಂತರಾಯನನ್ನು ತನ್ನತ್ತ ಸೆಳೆದುಕೊಂಡು, ಆತನಿಗೆ ಕಂಪನಿ ನಾಟಕದ ಆಸೆ ಹುಟ್ಟಿಸಿ, ಹಣಕಾಸಿನ ವ್ಯವಸ್ಥೆಗಾಗಿ ದವಸಧಾನ್ಯವನ್ನೇ ಕದ್ದು ಮಾರುವಂತೆ ಪ್ರೇರೆಪಿಸುತ್ತಾನೆ. ಅಲ್ಲದೆ ತನ್ನ ತಂದೆಯಾದ ದೇಸಾಯಿಯ ಆಸ್ತಿಯಲ್ಲಿ ತನಗೆ ಬರಬೇಕಾದ ಪಾಲು ಪಡೆದುಕೊಳ್ಳಬೇಕೆಂದು ಹುರಿದುಂಬಿಸುತ್ತಾನೆ. ಕೊನೆಗೆ ತನ್ನ ಎರಡನೆ ಮಗಳಾದ ಶಾಂತಾಳನ್ನು ವಸಂತರಾಯನಿಗೆ ವಿವಾಹ ಮಾಡಿಕೊಡಬೇಕೆಂದು ನಿಶ್ಚಯಿಸುತ್ತಾನೆ. ಕಿಟ್ಟಿಯನ್ನು ದತ್ತಕ ತೆಗೆದುಕೊಳ್ಳಬೇಕೆಂಬ ವಿವಾಹ ಪೂರ್ವದಲ್ಲಾದ ವಚನಕ್ಕೆ ಮೋಸಮಾಡಿ, ಹೀಗಾದರೂ ಕೊನೆಯಬಾರಿ ಗಂಗವ್ವನ ಮೇಲೆ ಗೆಲುವು ಸಾಧಿಸಬೇಕೆಂದು ಗಂಡುಮಗುವನ್ನು ಪಡೆಯಲೇಬೇಕೆಂಬ

ಯತ್ನದಿಂದ ತನ್ನ ಪತ್ನಿ ಚಂಪಕ್ಕ ಹಾಗೂ ಮಗು ಸಹಿತವಾಗಿ ಮರಣ ಹೊಂದುತ್ತಾರೆ. ತನ್ನ ಪ್ರಿಯತಮೆ ಮೆಹಬೂಬಳು ಕೂಡ ತನ್ನ ಬದುಕಿನಿಂದ ವಿಶ್ರಾಂತಿ ಪಡೆಯುತ್ತಾಳೆ.

ವೆಂಕಟರಾಯ, ಗಂಗವ್ವ, ಚಂಪಕ್ಕ, ಮೆಹಬೂಬ, ದೇಸಾಯಿ ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಮೋಸ ಮಾಡಿದ ರಾಘುಪ್ಪ ತನ್ನ ಅಗತ್ಯತೆ ಪೂರೈಸಿಕೊಳ್ಳಲು ಹೋಗಿ ಎಲ್ಲದರಲ್ಲೂ ಅಪಮಾನಹೊಂದಿ, ಅವಮಾನ ತಡೆದುಕೊಳ್ಳಲಾರದೆ, ಆತ್ಮಹತ್ಯೆ ಮಾಡಿಕೊಳ್ಳುವುದರ ಮೂಲಕ ದುರಂತದಲ್ಲಿ ಕಾದಂಬರಿ ಮುಕ್ತಾಯವಾಗಿ ಮತ್ತೊಂದು ಹೊಸಹುಟ್ಟು ಪಡೆಯುತ್ತದೆ. ಇದಿಷ್ಟು ಕಾದಂಬರಿಯ ಒಟ್ಟು ಕಥೆ.

'ಗಂಗವ್ವ ಗಂಗಾಮಾಯಿ'ಯಲ್ಲಿ ಮನುಷ್ಯರು ತಮ್ಮ ಬದುಕಿನ ಧಾರುಣ ಹೊಡತೆಗಳಿಗೆ ಸಿಕ್ಕು ಜರ್ಜರಿತವಾಗುವುದನ್ನು ಇಂತಹ ಸ್ಥಿತಿಯಲ್ಲಿಯೇ ಮಾಗುತ್ತಾ ಹೋಗುವುದನ್ನು ಕಾಣಬಹುದು. ಕರುಣ-ಕ್ರೌರ್ಯ, ಮಾನವೀಯತೆ-ದುಷ್ಟತನ. ಒಳ್ಳೆಯದು-ಕೆಟ್ಟದ್ದು ಎಲ್ಲವೂ ಮೇಳೈಸಿದ ಸಂಕೀರ್ಣ ಪಾತ್ರಗಳನ್ನು ನೋಡುತ್ತೇವೆ.

ವಸ್ತುವಿನ ದೃಷ್ಟಿಯಿಂದ ೨೦ನೇ ಶತಮಾನದ ಮೊದಲ ಘಟ್ಟದ ಬ್ರಾಹ್ಮಣ ಕುಟುಂಬಗಳ ಕಥೆಯಾಗಿದೆ. ಈ ಕಾಲಮಾನವೂ ಸ್ವಾತಂತ್ರ್ಯ ಹೋರಾಟದ ಸಂದರ್ಭವಾಗಿದ್ದು, ಕೃತಿಯಲ್ಲಿ ರಾಜಕೀಯ ವಿಚಾರಧಾರೆಗಳು ಕೂಡ ಸ್ಥಾನವನ್ನು ಪಡೆಯುತ್ತವೆ. ಆದರೆ ಸ್ವಾತಂತ್ರ್ಯ ಹೋರಾಟವೂ ಅತಿಥಿ ನಟರಂತೆ ಬಂದು ಪ್ರತಿಫಲನವಾಗದೆ, ನೇಪಥ್ಯಕ್ಕೆ ಸರಿಯುತ್ತದೆ. ಈ ಮೂಲಕ ಕುಟುಂಬದ ಕೋಲಾಹಲಗಳಿಗೆ ಪ್ರಾಮುಖ್ಯತೆಯನ್ನು ಕೃತಿ ನೀಡುತ್ತದೆ.

ಇದೊಂದು ಮನೋಜನ್ಯ ಭಾವನಾವಲಯ ವಿಶ್ಲೇಷಣಾತ್ಮಕ ಕಾದಂಬರಿ. ಪಾತ್ರಗಳ ಮೂಲಕ ಮನುಷ್ಯನ ಮನೋಭಾವನೆಯ ನೈಜತೆಯನ್ನು ವಿಶ್ಲೇಷಿಸಿದೆ. ಹಠಮಾರಿತನ, ಸ್ವಂತಿಕೆ, ಸ್ವಾಭಿಮಾನದ ಹೆಸರಿನಲ್ಲಿ ಪ್ರತಿಯೊಬ್ಬರಲ್ಲಿಯೂ ದುರಾಭಿಮಾ ನ ಮನೆ ಮಾಡಿ, ವೈಯಕ್ತಿಕ ನೆಲೆಯಲ್ಲಿಯೇ ಚಿಂತಿಸುತ್ತಾರೆ. ಹೀಗಾಗಿ ಮಾನವೀಯ ಸಂಬಂಧಗಳಲ್ಲಿ ತೂಕವಿಲ್ಲದಂತಾಗಿ ಮನುಷ್ಯ ಸಂಬಂಧಗಳು ಸತ್ತು ಹುಟ್ಟುತ್ತವೆ.

ದೇಸಾಯಿ, ರಾಘುಪ್ಪ ಪರಸ್ಪರ ಪ್ರತಿಷ್ಠೆಗಾಗಿ ಹಾಗೂ ಸ್ವಾಭಿಮಾನದ ಹೆಸರಿನಲ್ಲಿ ತಾವೇ ಗೆಲ್ಲಬೇಕೆಂಬ ಕಾರಣದಿಂದ ಒಬ್ಬರ ಕ್ರಿಯೆಗ ಮತ್ತೊಬ್ಬರು ಪ್ರತಿಕ್ರಿಯೆ ತೋರಿಸುತ್ತಾ, ಒಬ್ಬರನ್ನು ಮತ್ತೊಬ್ಬರು ಇಕ್ಕಟ್ಟಿನಲ್ಲಿ ಸಿಕ್ಕಿಸಲು ಹೋರಾಟ ಮಾಡುತ್ತಾರೆ. ಹೀಗಾಗಿ ತಾನೇ ಗೆಲ್ಲಬೇಕೆಂಬ ಪ್ರತಿಷ್ಠೆಯ ಹಸಿವು ತೀವ್ರವಾಗುತ್ತಲೇ ಹೋಗುತ್ತದೆ.

ರಾಘುಪ್ಪ ನೆರವಾಗಲೂ ಬಲ್ಲ ಅದೇ ರೀತಿ ಅಡ್ಡಗಾಲು ಸಹ ಹಾಕಬಲ್ಲ. ಆದರೆ ನೆರವಿಗಿಂತ ಇನ್ನೊಬ್ಬರಿಗೆ ಪೇಚು ಹಾಕುವುದರಲ್ಲೇ ತನ್ನ ಬಹುಪಾಲು ಸಮಯ, ಶ್ರಮವನ್ನು ವ್ಯಯಿಸುತ್ತಾನೆ.

ದೇಸಾಯಿಯವರು ಮಾತ್ರ ತಾವೇ ಮೊದಲು ಹಾನಿ ಮಾಡಲು ಹೊರಟವರಲ್ಲ. ರಾಘುಪ್ಪನ ಶೀತಲ ಸಮರಕ್ಕೆ ಸರಿಯಾದ ಪ್ರತಿಕ್ರಿಯೆಯನ್ನು ತೋರಿಸುತ್ತಾ ಹೋಗುವರು. ಗಂಗವ್ವನಿಗೆ ಇವರು ಹಿತಚಿಂತಕರಾಗಿ ಆಧಾರಸ್ತಂಭವಾಗಿ ಹಿರಿಯ ಸ್ಥಾನದಲ್ಲಿ ನಿಂತು ಸಲಹೆ ಸಹಕಾರ ನೀಡಿದವರು. ಹೀಗಾಗಿ ಕೃತಿಯು ದೇಸಾಯಿಯವರ ಬದುಕನ್ನು ಮಾದರಿಯಾಗಿ ನೀಡುತ್ತಿದೆ.

ತರುಣ ಪೀಳಿಗೆಯ ಯುವಕರು ತಮ್ಮ ವೈಯಕ್ತಿಕ ನಿಲುವುಗಳಿಗೆ ಅಂಟಿಕೊಂಡು, ತಮ್ಮ ಇಷ್ಟಾನುಸಾರ ವರ್ತಿಸಲು ಬಹುಪಾಲು ಯತ್ನಿಸುತ್ತಾರೆ. ಹೀಗಾಗಿ ತಂದೆ-ತಾಯಿ ಪಟ್ಟ ಕಷ್ಟ, ಇಟ್ಟ ಹೆಜ್ಜೆಯನ್ನು ನೆನೆದುಕೊಳ್ಳಲಾರರು.

> "ಅವ್ವ ಹಳೆಯ ಪೀಳಿಗೆಯವಳು. ತಾನು ಹೊಸ ಪೀಳಿಗೆಯವ. ಒಂದೊಂದು ಪೀಳಿಗೆಗೂ ಒಂದೊಂದು ಸಮಸ್ಯೆ". ಮತ್ತು "ಅವ್ವ ನಿನ್ನ ಉಪಕಾರ ದೊಡ್ಡದು. ಅದರೆ ನನಗೂ ಒಂದು ವ್ಯಕ್ತಿತ್ವ ಇಲ್ಲ ಏನು? ನನ್ನ ಆಶಾ ಆಕಾಂಕ್ಷಕ್ಕೆ ಒಂದು ಬೆಲೆ ಇರಬಾರದೇನು?"[೨]
>
> "ನಾ ಏನು ಈಗ ನಿನ್ನ ಕೈಗೊಂಬಿಯಲ್ಲ! ಈ ಹಳೆಯ ಹೆಂಗಸರಿಗೆ ಈ ತರುಣ ಪೀಡಿಯ ನಡತಿ ತಿಳಿಯುದಿಲ್ಲ"[೩]

ಎಂಬಂತಹ ನಿಲುವುಗಳನ್ನು ಹೊಂದಿದ್ದವರು. ಹೆಚ್ಚಿನ ಹಣಗಳಿಸುವುದನ್ನು ಹೇಳಿದರೆ, ಇತರರು ಬೇಡಿಯಾರೆಂದೋ, ಕಿಟ್ಟಿಯ ಯೋಚನೆ. ಹೀಗಾಗಿಯೇ ಕಛೇರಿಯಲ್ಲಿ ಭ್ರಷ್ಟಚಾರಕ್ಕಿಳಿದು, ಲಂಚಸ್ವೀಕರಿಸುತ್ತಾರೆ.

ತಮ್ಮನ್ನು ನಂಬಿದ ಜೀವಗಳಿಗಾಗಿ ಹಾಗೂ ತಮ್ಮನ್ನು ಸದಾ ಒಂದಲ್ಲ ಒಂದು ರೀತಿಯಲ್ಲಿ ಧಮನಿಸುವ ಶಕ್ತಿಗಳ ವಿರುದ್ಧ ಹೋರಾಡಿದವರು ಇಲ್ಲಿಯ ಮಹಿಳೆಯರು ತಾವು ಸಾಕಿ ಬೆಳೆಸಿದ ವೃಕ್ಷ ಇಂದು ಫಲನೀಡುವಾಗ ಬೇರೊಬ್ಬರು ಕದ್ದೊಯ್ಯಲು ಇವರು ಖಂಡಿತ ಬಿಡಲಾರವು. ತಮ್ಮ ಹತೋಟಿಯಲ್ಲಿಯೇ ಮಕ್ಕಳಿರಬೇಕು. ತಾವು ಹೇಳಿದಂತೆಯೇ ಕೇಳಬೇಕೆಂಬ ನಿಲುವು. ಇದಕ್ಕಾಗಿ ಗಂಗವ್ವ ಕಿಟ್ಟಿಯನ್ನು ತನ್ನ ಇಷ್ಟದಂತೆ ನಡೆದುಕೊಳ್ಳಲು ಬಿಡಳು. ರತ್ನಾಳ ಬಗ್ಗೆ ಗೌರವವಿದ್ದರೂ, ವಿವಾಹಕ್ಕೆ ಒಪ್ಪಿಗೆ ಕೊಡಲು ಸತಾಯಿಸಿದಳು. ಚತುರ್ಭುಜರಾದ ಮೇಲೆ ಸ್ವತಂತ್ರವಾಗಿ ಇರಲು ಬಿಡಲಿಲ್ಲ. ಏಕಾಂತದಲ್ಲಿ ಪರಸ್ಪರ ಮಾತನಾಡಿಕೊಳ್ಳುವುದು, ಲೈಂಗಿಕ ಬಯಕೆ ಈಡೇರಿಸಿಕೊಳ್ಳುವುದು. ಅನಾವಶ್ಯಕವಾಗಿ ಹಣವನ್ನು ವ್ಯಯಿಸುವುದು ಮುಂತಾದ ಸಂಗತಿಗಳನ್ನು ಮನಃಪೂರ್ವಕವಾಗಿ ಮತ್ತೊಬ್ಬ ಸ್ತ್ರೀ ಸಹಿಸಲಾರಳು ಎಂಬುದಕ್ಕೆ ಗಂಗವ್ವನೇ ನಿದರ್ಶನವಾಗಿದ್ದಾಳೆ. ಚಂಪಕ್ಕ ತನ್ನ ಮಗಳು ಎಲ್ಲಿ ವಸಂತರಾಯನೊಂದಿಗೆ ಲಗ್ನಕ್ಕೆ ಮೊದಲೇ ಲೈಂಗಿಕ ಸ್ವೇಚ್ಛಾಚಾರಕ್ಕಿಳಿಯುವಳೋ ಎಂದು ಅನುಮಾನ ಪಡುವುದನ್ನು ಕಾಣಬಹುದು.

ಮಕ್ಕಳ ಭವಿಷ್ಯಕ್ಕಾಗಿ ಟೊಂಕಕಟ್ಟಿ ನಿಂತ ಇವರು, ರಾಘುಪ್ಪ ಕಿಟ್ಟಿಯನ್ನು ಅಡ್ಡದಾರಿಗೆ ಎಳೆಯುತ್ತಿರುವಾಗ ರಾಘುಪ್ಪನೊಂದಿಗೆ ಗಂಗವ್ವ ಘರ್ಷಣೆಗೆ ಇಳಿದರೆ, ದೇಸಾಯಿಯರ ಒಳ್ಳೆಯ ಗುಣಗಳಿಗೆ ಮೆಚ್ಚಿ ಕಿಟ್ಟಿಯನ್ನು ದೇಸಾಯರ ಬಳಿ ಕಳುಹಿಸಿ ಬುದ್ಧಿವಾದ ಹೇಳಿಸುತ್ತಾಳೆ. ಈ ಹೆಣ್ಣು ಜೀವಗಳು

ಕಿಂಚಿತ್ತಾದರೂ ಅನ್ಯರ ಬದುಕಿಗೆ ಮುಳ್ಳಾದವರಲ್ಲ. ಪರರ ಸಂಪತ್ತಿಗೆ ಆಸೆ ಪಟ್ಟವರಲ್ಲ. ಸೊಸೆಯೊಂದಿಗೆ ವಿರಸವಿದ್ದರೂ,

"ನಿನ್ನದs ಹಲ್ಲು, ನಿನ್ನದs ನಾಲಿಗೆ"[೪]

ಎಂದು ತನ್ನ ಜೀವಕ್ಕೆ ತಾನೇ ಬುದ್ಧಿ ಹೇಳಿಕೊಂಡವರು.

ತನ್ನ ಗಂಡ ಪರಸ್ತ್ರೀಯೊಂದಿಗೆ ಲೈಂಗಿಕ ಸಖ್ಯ ಬೆಳೆಸಿಕೊಂಡಿದ್ದರೂ, ಸಹ ಟೀಕಿಸದ,

"ಬಿರುಕು ಬಿದ್ದ ಮನೆ ನೋಡುವಾಗ ಯಾವ ನೋವು ಆಗುತ್ತದೆಯೋ ಅಂಥದ್ದೇ ನೋವು, ಅದರ ಸಹಸ್ರ ಪಟ್ಟು ಪ್ರಮಾಣದಲ್ಲಿ ಒಬ್ಬ ಗಂಭೀರ ಮನುಷ್ಯ ಹಾಳಾಗತೊಡಗುವುದನ್ನು ನೋಡಿದಾಗ ಉಂಟಾಗುತ್ತದೆ"[೫]

ಇದಕ್ಕಾಗಿ ಅತ್ತಿತ್ತ ಕೀಳು ಕಸಬೆಯಲ್ಲಿ ಅಡ್ಡಾಡಿ ಎಲ್ಲಿ ಆರೋಗ್ಯ ಕೆಡಿಸಿಕೊಳ್ಳುತ್ತಾನೋ ಎಂಬ ಭೀತಿ ಸುರುವಾಯಿತು. ಕೊನೆಗೆ ಒಂದು ದಿನ ಚಂಪಕ್ಕ ತಾನೇ ಮೆಹಬೂಬಜಾನಳ ಮನೆಗೆ ಬಂದು ರಾಘಪ್ಪನ ಪಾಲನೆಯನ್ನು ಅವಳಿಗೆ ಒಪ್ಪಿಸಿದಳು. ಅಂದಿನಿಂದ ಮೆಹಬೂಬ

'ಅಕ್ಕ ಅವರ' ಮನೆಯ ಗೃಹ ದೇವತೆಯಾದಳು."[೬]

ಇಂತಹ ಸನ್ನಿವೇಶಗಳು ನೈಜತೆಗೆ ದೂರವೆನ್ನಿಸಿದರೂ, ಕೃತಕವೆನ್ನಿಸಲಾರವು. ಮೆಹಬೂಬಳು ಕೂಡ ಅಷ್ಟೇ ಪ್ರಾಮಾಣಿಕಳು. ತನ್ನ ಜೀವವನ್ನೇ ಒತ್ತೆಹಿಟ್ಟು ಹಣ ತಂದು ನಿಂತು ಹೋದ ರತ್ನಾಳ ಮದುವೆಯನ್ನು ಮಾಡಿಸುತ್ತಾಳೆ. ಈ ಹಣ ತೀರಿಸಲು ದುಡಿತದ ದಣಿತದಲ್ಲಿಯೇ ಕಾಯಿಲೆ ಬಿದ್ದು ಸಾಯುತ್ತಾಳೆ.

ಮುಕ್ತಾಯದ ಹಂತದಲ್ಲೂ ಒಂದು ಬಗೆಯಲ್ಲಿ ಕಾದಂಬರಿ ಹೊಸ ಆರಂಭವನ್ನು ಪಡೆಯುತ್ತದೆ. ಗಂಗವ್ವ ಹಾಗೂ ಅವಳ ಸೊಸೆಯ ಸಂಘರ್ಷಗಳು ನಿಂತುಹೋಗಿ ಕುಟುಂಬದಲ್ಲಿ ಸಾಮರಸ್ಯ ಮೂಡಿತ್ತು ಎನ್ನುವಷ್ಟರಲ್ಲಿಯೇ ದೇಸಾಯಿಯರ ಮನೆಯಲ್ಲಿ ವೇಣೂಬಾಯಿಯು ಲಗ್ನಕ್ಕೆ ಮೊದಲೇ ಮಗನ ಜತೆ ಲೈಂಗಿಕ ಅನುಭವ ಪಡೆದ ಶಾಂತಾಳನ್ನು ಹೊಸ ಸೊಸಯಾಗಿ ಪಡೆಯಬೇಕಾಗಿರುವುದರಲ್ಲಿ ತೀವ್ರ ಅಸಮಾಧಾನದಿಂದಲೇ ಸ್ವೀಕರಿಸುವುದನ್ನು ಕಾಣಬಹುದಾಗಿದೆ. ಹೀಗಾಗಿ ವೇಣುಬಾಯಿ ಹಾಗೂ ಶಾಂತರ ಮಧ್ಯೆ ಕೌಟುಂಬಿಕ ಸಮರಸ ಮೂಡಿಬರಲು ಸಾಧ್ಯವಿಲ್ಲ ಎಂಬ ಅಂಶವನ್ನು ಕಾದಂಬರಿ ತಣ್ಣನೆಯ ಧ್ವನಿಯಲ್ಲಿ ಹೇಳುವಂತಿದೆ. ಹೀಗಾಗಿ ಗಂಗವ್ವನ ಕುಟುಂಬದಲ್ಲಿ ಅಂತ್ಯವಾದ ಜಗಳ ಇಲ್ಲಿ ಪ್ರಾರಂಭವಾಗುತ್ತದೆ. ಒಂದರ ಅಂತ್ಯ ಮತ್ತೊಂದರ ಪ್ರಾರಂಭವಾಗಿದೆ. ಈ ದೃಷ್ಟಿಯಿಂದ ಮಧ್ಯೆಯ ಘರ್ಷಣೆಯಲ್ಲಿ ದೇಸಾಯಿಯವರ ನಿಲುವು ಏನು ಎಂಬುದು ಕಾದಂಬರಿಯಲ್ಲಿ ಸ್ಪಷ್ಟವಾಗಿಲ್ಲ.

ಕಾದಂಬರಿಯ ಒಟ್ಟಾರೆ ಸಾಧನೆ ಇರುವುದು ಮಾನವ ಸ್ವಭಾವಗಳ ಅದ್ಭುತ ಚಿತ್ರಣ ಕಟ್ಟಿಕೊಡುವುದರಲ್ಲಿ. ರಾಘಪ್ಪನಂತಹ ಪಾತ್ರ ಸೃಷ್ಟಿಸುವಾಗ ದುರಂತ ಪಾತ್ರದ ಹೋಲಿಕೆಯನ್ನು ಕಾಣಬಹುದು.

ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಇರುವ ಕುಹಕ ದುಷ್ಟತನ ಹಠಮಾರಿತನವನ್ನು ಹೇಳುವುದರ ಜೊತೆಗೆ ಮಾನವೀಯ ಗುಣಗಳನ್ನು ಚಿತ್ರಿಸುತ್ತದೆ. ಮೆಹಬೂಬ ದುಡಿತನದ ದಣಿತದಲ್ಲಿ ಕಾಯಿಲೆ ಬಿದ್ದಾಗ, ತನಗಾಗಿ ಆಕೆ ಕಷ್ಟಪಟ್ಟಿದ್ದು ಎಂಬ ನೋವಿನಿಂದ ಬದುಕಿಸಲು ಶತ ಪ್ರಯತ್ನ ಮಾಡುತ್ತಾನೆ. ಆಸ್ಪತ್ರೆಯಲ್ಲಿಯೇ ಒಂದು ತಿಂಗಳು ಇದ್ದು ಔಷಧಿ, ಹಣ್ಣು, ಹಾಲು ಕೊಡಿಸಿ ತನ್ನ ಮನೋಬಲವನ್ನೆಲ್ಲ ಹಾಕಿ ಮೃತ್ಯುವಿನೊಡನೆ ಯುದ್ಧ ಮಾಡುತ್ತಾನೆ. ಆದರೂ ಮೆಹಬೂಬ ಮರಣಹೊಂದಿದಾಗ

> "ಮುಂದೆ ಹದಿನೈದು ದಿನದಲ್ಲಿ ರಾಘುಪ್ಪನು ಹೊಟ್ಟೆಬೇನೆ ಹತ್ತಿ ಹಾಸಿಗೆ ಹಿಡಿದನು. ಅವನು ನೆಟ್ಟಗಾದರೂ ಮೊದಲಿನ ರಾಘುಪ್ಪನಾಗಿ ಉಳಿದಿರಲಿಲ್ಲ. ಒಳಗಿಂದೊಳಗೆ ದೊಡ್ಡ ಮನೋದೌರ್ಬಲ್ಯ ಬಂದುಬಿಟ್ಟಿತ್ತು"[೭]

ಹೀಗಾಗಿ ದಿನ ಕಳೆದಂತೆ ವರ್ಚಸ್ಸು ಕಡಿಮೆಯಾಗಿ ಮೊದಲಿನ ಉತ್ಸಾಹ, ತ್ರಾಣ, ಚಾಪಲ್ಯ ಉಳಿದಿರಲಿಲ್ಲ. ಅಷ್ಟೇ ಅಲ್ಲ ತನ್ನ ಹೆಂಡತಿಯ ಸಾವು ಆತನನ್ನು ಪಾರ್ಶ್ವವಾಯು ಬಡಿದಂತೆ ಮಾಡಿತ್ತು. ರಾಘುಪ್ಪನ ಮಾತಿನಲ್ಲೆ ಕೇಳುವುದಾದರೆ,

> "ನನ್ನ ಹೆಂಡತಿಯನ್ನು ನಾನು ಸಾವಿರ ಬಗೆಯಿಂದ ಪ್ರೀತಿಸಿದ್ದೇನೆ. ಅಷ್ಟು ಅನುಭವ ನಿಮಗೆ ಇರುವುದು ಸಾಧ್ಯವಿಲ್ಲ. ಆದರೆ ಸಾವಿರದ ಒಂದನೆಯ ಬಗೆಯೂ ಇರುತ್ತದೆಂಬುದು ಇದೇ ಬಾರಿ ನನ್ನಂಥವನಿಗೂ ಗೊತ್ತಾದದ್ದು. ಆಕೆಗೆ ನಾನು ಅನ್ಯಾಯ ಮಾಡಿದಾಗ, ಆಕೆ ಬೇನೆ ತಿನ್ನುವಾಗ, ಮೂಕತನದಿಂದ ಸಹಿಸುವಾಗ, ಕೊನೆಗೆ ಸತ್ತು ಹೋದಾಗ, ಕರುಣೆ, ಮಮತೆ, ಮಾಯೆ ನನ್ನಲ್ಲಿ ಪೂರಪೂರವಾಗಿ ಹರಿಯಿತು. ಅಪರವಾದ ಕನಿಕರ, ಸಮುದ್ರದಂಥ ಕನಿಕರ, ಸೆಲೆಸೆಲೆಯಾಗಿ ಹರಿಯುವ ಕನಿಕರ! ಸಾಧು ಸಂತರು ದೇವರನ್ನು ಹೀಗೆಯೇ ಪ್ರೀತಿಸಿದರೋ ಏನೋ ಎಂದು ನನ್ನ ಸಂಶಯ. ಎಷ್ಟು ಕಣ್ಣೀರು ಸುರಿಸಿದರೂ ಮುಗಿಯದ ಕರುಣೆ ದೇಹಕ್ಕೆ ದೇಹ ಒಂದಾದರೂ ಮುಗಿಯದ ಮಮತೆ; ನನ್ನ ಹೆಂಡತೆಯ ಬಗ್ಗೆ, ಇಷ್ಟು ಅಪಾರವಾದ ಉನ್ನತವಾದ ಪ್ರೇಮ ನನ್ನಲ್ಲಿ ಹುಟ್ಟಿತ್ತೆಂದು ನಾನು ಎಂದೂ ಎಣಿಸಿರಲಿಲ್ಲ.[೮]

ಎಂದು ಹೇಳುವಾಗ ಒಬ್ಬ ದುಷ್ಟನಲ್ಲಿಯೂ ಇರಬಹುದಾದ ಮಾನವೀಯತೆಯನ್ನು ಕಾಣಬಹುದು. ಹೀಗಾಗಿಯೇ ಆತ ಆತ್ಮಹತ್ಯೆ ಮಾಡಿಕೊಂಡಿದ್ದು.

ಕನ್ನಡ ಕಾದಂಬರಿ ಪರಂಪರೆಯಲ್ಲಿ ರಾಘುಪ್ಪನಂತಹ ಪಾತ್ರಗಳು ಬಹಳ ವಿರಳವೆಂದೇ ಹೇಳಬೇಕು. ಪಾಶ್ಚಾತ್ಯ ಗಂಭೀರ ನಾಟಕದ ಪಾತ್ರಗಳಿಗೆ ರಾಘುಪ್ಪನ ಪಾತ್ರವನ್ನು ಹೋಲಿಸಿ ನೋಡಿದಾಗ ಕೆಟ್ಟ ಗುಣಗಳಿಂದಾಗಿ ಒಳ್ಳೆಯ ಗುಣಗಳು ಕೊಚ್ಚಿಕೊಂಡು ಹೋಗುತ್ತವೆ. ಹೀಗಾಗಿ ರಾಘುಪ್ಪನು ಒಳ್ಳೆಯ ಗುಣಗಳನ್ನು ಹೊಂದಿ ಅಲ್ಪಸ್ವಲ್ಪ ಮಾನವೀಯತೆಯನ್ನು ಮೆರೆದರೂ, ಆತನ ಕೆಟ್ಟ ಗುಣಗಳೇ ಪ್ರತಿಫಲಿಸಿ, ಕಾದಂಬರಿಯಲ್ಲಿ ಪ್ರತಿನಾಯಕನಂತಾಗಿದ್ದಾನೆ. ಈ ರೀತಿಯ ಚಿತ್ರಣ ಕೃತಿಕಾರರಿಗೆ ಅನಿವಾರ್ಯವಾಗಿತ್ತು.

ಆಧುನಿಕತೆಯು ಸಾಂಪ್ರದಾಯಿಕತೆಯ ಜತೆ ಕೂಡಿ ಮಾಡುವ ಕೊಳುಕೊಡೆಗಳ ಬಗ್ಗೆ ಕಾದಂಬರಿ ಕೊಡುವ ಒಳನೋಟಗಳು ಅಪೂರ್ವವಾಗಿವೆ. ಕನ್ನಡ ಕಾದಂಬರಿಗಳು ಒಂದು ಬಗೆಯಲ್ಲಿ ಮಹಿಳೆಯರ ಕಥನಗಳು. ತಮ್ಮನ್ನು ಧಮನಿಸುವ ಶಕ್ತಿಗಳ ವಿರುದ್ಧ ಸೆಣಸುವರು. ಗಂಗವ್ವ ಕೂಡ ಇದನ್ನೇ ಮಾಡುತ್ತಾಳೆ. ಆಕೆ ಅತೀ ಮಹತ್ವ ಹಾಗೂ ಪವಿತ್ರ ಎನ್ನಿಸಿದ್ದ ಗಂಗಾಜಲವನ್ನೇ ಚೆಲ್ಲುವ ಮೂಲಕ ಬದುಕುವ ಛಲವನ್ನು ತೊಡುತ್ತಾಳೆ. ಗಂಗವ್ವ ಎಂದೂ ಸಂಪ್ರದಾಯವನ್ನು ಮೀರಿ ನಡೆದವಳಲ್ಲ. ಅದಕ್ಕಾಗಿ ಕಾಶಿಯಾತ್ರೆಗೆ ಹೋಗಿ ವಿಶ್ವನಾಥನ ದರ್ಶನವನ್ನು ಪಡೆದು ದೇವರ ಮೇಲೆ ಅತಿಯಾದ ವಿಶ್ವಾಸ ಹಾಗೂ ಪೂರ್ಣ ನಂಬಿಕೆಯನ್ನು ಇಟ್ಟವಳು. ಸರ್ವವನ್ನು ರಕ್ಷಿಸುತ್ತಿರುವವನು ದೇವರೆ ಎಂಬುದು ಆಕೆಯ ಮತ. ಹೀಗಾಗಿ ಕಾಶಿಯ ಯಾತ್ರೆಯೇ ಆಕೆಗೆ ಧನ್ಯತೆ ಎನ್ನಿಸಿದೆ.

> "ಕಿಟ್ಟಣ್ಣಾ ನೀ, ಹೆದರಬ್ಯಾಡಪಾ ಶಾಲಿಗ್ರಾಮ ನಮ್ಮ ಮುಖ್ಯದೇವರು. ಅವರು ಇರೂತನಕಾ ಅದರ ಮ್ಯಾಲ ಬಹಳ ಜೀವ ಇತ್ತು. ನೀ ಸಣ್ಣವ ಇದ್ದಿ ಅವರು ಹೋದಾಗ ಅದರ ಪೂಜಿದಾಗ ಹೆಚ್ಚು ಕಡಿಮೆ ಆಗಲಿ ಬಿಡಲಿ ಅಂತ ನಾನs ಬೇಕಂತ ಒಳಗೆ ಇಡಿಸಿದ್ದೆ. ಯಾ ದೇವರು ಸಿಟ್ಟಿಗೆ ಏಳೂದಿಲ್ಲ; ಭಕ್ತಿ ಒಂದು ಇದ್ದರ ಎಲ್ಲಾ ದೇವರೂ ಶಾಂತ ಇರತಾರ. ನೀ ಏನೂ ಹೆದರಬ್ಯಾಡ; 'ಇನ್ನ ನೀ ದೊಡ್ಡವ ಆದಿ, ನನಗ ದಿವಸಾ ಪೂಜಿ ಕಾಣಿಸು' ಅಂತ ನಮ್ಮಪ್ಪ ಶಾಲಿಗ್ರಾಮ ತಾನಾಗೇ ತಿಳಿಸಿ ಹೋಗ್ಯಾನ. ಅದು ನಿನ್ನ ಹಿರೇರ ಪುಣ್ಯಾ ಅಂತ ತಿಳಿಕೊ. ನೀ ಸಣ್ಣವ ಶಾಲಿಗ್ರಾಮನ ಮರೆತಿದ್ದೀ, ನಾ ಹೆಂಗ ಮರೀಲ್ಯಪ್ಪಾ? .....ನಮಗೆ ಹಿಂದಕ ದೌಲತ್ತು ಕೊಟ್ಟವನೂ ಅವನ ಬಡತನದಾಗ ಕಾಯ್ದವನೂ ಅವನs... ನಿನ್ನ ಪೂಜಿ ಆದಮ್ಯಾಲ ದಿವಸಾ ನಾನು ಶಾಲಿಗ್ರಾಮದ ಹೆಸರಿಲೆ ಒಂದು ತುಪ್ಪದ ದೀವಿಗೆ ಹಚ್ಚಿ ಇಡತಿದ್ದೆನಪಾ. ಅವ ಸಿಟ್ಟಿಗೆದ್ದರೂ ಬಹಳ ಸಿಟ್ಟಿಗೇಳೊದಿಲ್ಲ ಬಿಡು"[೯]

ಈ ರೀತಿಯ ಸಂಭಾಷಣೆಯನ್ನು ಗಮನಿಸಿದಾಗ ಗಂಗವ್ವ ದೇವರೊಂದಿಗೆ ಮಾತನಾಡುತ್ತಿದ್ದಳೊ? ದೇವರೊಂದಿಗೆ ಮನುಷ್ಯ-ಮನುಷ್ಯರಂತೆ ಸಂಬಂಧ ಹೊಂದಿರುವಳೋ ಎನ್ನಿಸುತ್ತದೆ. ಹೀಗಾಗಿ ದೇವರ ಮೇಲೆ ಪೂರ್ಣನಂಬಿಕೆ ಹೊಂದಿದ್ದಾಳೆ ಎಂದು ಕೃತಿಯುಲ್ಲಿ ಕಂಡುಬಂದರೂ ಇದೊಂದು ವಿಡಂಬನೆಯಾಗಿಯೂ ಚಿತ್ರಿಸಿರಬಹುದೆ? ಎನ್ನಿಸುತ್ತದೆ. ಅಷ್ಟೇ ಅಲ್ಲ ಕಿಟ್ಟಿಗೆ ಲಗ್ನವಾಗಿ ಐದು ವರ್ಷ ಕಳೆದರೂ ಮಕ್ಕಳಾಗದಿದ್ದಕ್ಕೆ ದೇವರೇ ಕಾರಣ ಎಂಬ ಅಭಿಪ್ರಾಯವನ್ನು ಪಡುತ್ತಾಳೆ. ಆದರೆ ವೈಜ್ಞಾನಿಕತೆಯೂ ಗಂಡ ಹೆಂಡತಿಯರಲ್ಲಿ ಏನೋ ತೊಂದರೆ ಇದ್ದರೆ, ಮಕ್ಕಳಾಗುವುದಿಲ್ಲ ಎಂಬ ಸತ್ಯ ಇಲ್ಲಿ ಮೂಲೆ ಗುಂಪಾಗಿ ಆಧುನಿಕತೆಯ ಪ್ರಜ್ಞೆಯು ಮೂಡಲಾರದೆ, ಸಂಪ್ರದಾಯದ ನಂಬಿಕೆಯೇ ಉಳಿಯುತ್ತದೆ.

ಆದರೂ ಗಂಗವ್ವನ ಮನಸ್ಸಿನಲ್ಲಿ ಸಂಪ್ರದಾಯದ ವಿರುದ್ಧ ಸಂಘರ್ಷ ನೆಡೆದಿರುವುದು ಗೋಚರಿಸುತ್ತದೆ. ಧಾರ್ಮಿಕತೆಯ ಶ್ರದ್ಧೆಯ ಭಾಗವಾಗಿದ್ದ ಗಂಗಾಜಲವನ್ನು ಚೆಲ್ಲುವುದರ ಮೂಲಕ ಬದುಕುವ ಛಲ ತೋರಿಸುತ್ತಾಳೆ. ಇದರಿಂದ ಎಲ್ಲಾ ಧಾರ್ಮಿಕ ಭಾವನೆಗಳನ್ನು ಮೀರಿದ ಕಡೆಯ

ಆಸರೆವೊಂದು ಮನುಷ್ಯನಿಗೆ ಇದೆ. ಅದೇ ಕರುಳ ಪ್ರೇಮ! ಎಂಬುದನ್ನು ತೋರಿಸುತ್ತಿದೆ. ಕರುಳ ಪ್ರೇಮದಿಂದಲೇ ಗಂಗವ್ವ ಗಂಗಾಜಲವನ್ನು ಚೆಲ್ಲಿದ್ದು, ಕಿಟ್ಟಿಯ ನೆನಪು ಬಂದಾಗಿನಿಂದ ಗಂಗಾಮಾಯಿಯು ಮೃತ್ಯುಮಾಯಿಯಾಗಿ ಗೋಚರಿಸುತ್ತದೆ. ಗಂಗೋಧಕದ ಚಲ್ ಫಲ್ ಸಪ್ಪಳವೂ ಯಮಪಾಶದ ಬೀಸುಕೆಯನ್ನಿಸುತ್ತದೆ. ಅವಳು ಸಾಯಲಾರಳು! ಬದುಕುವವಳು ಬದುಕುವ ಆಸೆ-ಸಾವಿನಕರೆ ಇವುಗಳ ತಿಕ್ಕಾಟದಿಂದ ಗಂಗವ್ವ ಬೆಚ್ಚುತ್ತಾಳೆ. ಹೀಗಾಗಿ ಚಲ್ -ಫಲ್ ಎಂಬ ಗಂಗೋಧಕ ಶಬ್ಧ ಯಮರಾಯನು ಬರುವ ಶಬ್ಧವಾಗುತ್ತದೆ. ಮನಸ್ಸಿನ ಹೊಡೆದಾಟ ತಾಳಲಾರದೆ ಬದುಕುವ ಆಸೆಯೇ ಗೆದ್ದು ಗಂಗಾಜಲವನ್ನು ಚೆಲ್ಲುತ್ತಾಳೆ.

ದೇಸಾಯಿ-ರಾಘುಪ್ಪನಂತವರು ಜಮೀನ್ದಾರರಾಗಿದ್ದು, ದೊಡ್ಡ ಭೂಹಿಡುವಳಿ ಹೊಂದಿದ್ದವರು. ಧಾರವಾಡದಂತಹ ಪಟ್ಟಣಕ್ಕೆ ಬಂದಿದ್ದು, ಆಧುನಿಕ ಬದುಕಿಗಾಗಿಯೇ. ಹೆಣ್ಣು ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣ ಕೊಡಿಸಬೇಕು ಎಂಬ ಚಿಂತನೆ ಹೊಂದಿದ್ದವರು. ಹಣವೂ ಇವರಲ್ಲಿ ಹೊಸ ಮನುಷ್ಯತ್ವವನ್ನು ತುಂಬತೊಡಗಿತ್ತು. ತಾಯಿಯಂತೆ ಕಿಟ್ಟಿಯು ಮಡಿಮೈಲಿಗೆ ಎಂಬ ಸಂಪ್ರದಾಯಸ್ಥ. ಆದರೆ ನೌಕರಿ ಸಿಕ್ಕಿದ ಮೇಲೆ ದುರ್ಮಾಗ ಕ್ಕಿಳಿಯುತ್ತಾನೆ. ಗಂಗವ್ವನಂತವರ ದೃಷ್ಠಿಯಿಂದ ದುರ್ಮಾರ್ಗವಾಗುತ್ತದೆ ಅಷ್ಟೆ. ಏನೋ ನೀ ಕ್ಯಾಂಟೀನಿನಲ್ಲಿ ಚಹಾ ಕುಡಿಯಾದಿಲ್ಲಂತ - ಫರಾಳ ತಿನ್ನೂದಿಲ್ಲಂತ, ಸಿನಿಮಾ ನೋಡೋದಿಲ್ಲಂತೆ, ಭೃಂಗ ಋಷಿ ಇದ್ದ ಹಿಂಗೆ ಇದ್ದೀಯಂತ ನಮ್ಮಪ್ಪ ವರ್ಣನಾ ಮಾಡುತ್ತಿರುತಾನೆ. ಅಂತೂ ಕಳ್ಳ ಬೆಕ್ಕಿನ ಹಂಗ ಒಳಗಿಂದೊಳಗs ಎಲ್ಲಾ ಇಟ್ಟಿ ಅನ್ನು! ಎಂದು ವಸಂತರಾಯ ಹೇಳುವುದನ್ನು ಕಾಣುತ್ತೇವೆ. ಹೀಗಾಗಿ ಈ ರೀತಿಯ ಎಲ್ಲಾ ಚಟುವಟಿಕೆಗಳನ್ನು ಹೊಸ ತಲೆಮಾರು ಬಯಸುವುದು ಸಹಜವಾಗುತ್ತದೆ.

ಆಧುನಿಕ ಚಿಂತನೆಯಂತೆ ಚಹಾ ಫರಾಳ ಸೇವಿಸುವುದು ಅಷ್ಟೊಂದು ಮಹತ್ವದ್ದಲ್ಲ. ಆದರೆ ಗಂಗವ್ವನಂತಹ ಬ್ರಾಹ್ಮಣ ಕುಟುಂಬಗಳಿಗೆ ಆ ಕಾಲದಲ್ಲಿ ಇದು ಸಂಪ್ರದಾಯದ ಮುರಿತವಾಗುತ್ತದೆ. ಕುಟುಂಬದ ನಿಯಮದಂತೆ ಸಾರ್ವಜನಿಕವಾಗಿ, ಬೇರೆಲ್ಲೂ ಕೂಡ ಚಹಾ ಸೇವಿಸುವಂತಿಲ್ಲ. ಸಿನಿಮಾ ನೋಡುವಂತಿಲ್ಲ ಆದರೆ ಸಿನಿಮಾ ನೋಡದ, ಚಹಾ ಫರಾಳ ಸೇವಿಸದ ಲಂಚ ಸ್ವೀಕರಿಸದ ಯುವಕರ ಬದುಕು ಬದುಕೇ ಅಲ್ಲ ಎಂಬ ಭಾವನೆಯು ಹೊಸತಲೆಮಾರಿನ ಯುವಕರದ್ದು. ಸಂಪ್ರದಾಯವನ್ನು ಧಿಕ್ಕರಿಸಿ ಆಧುನಿಕ ಬದುಕಿನಂತೆ ತಾವೇ ಹುಡುಗಿಯನ್ನು ನೋಡಿ ಪ್ರೀತಿಸಿ ವಿವಾಹವಾಗಬೇಕೆಂಬ ಹೆಬ್ಬಯಕೆಯನ್ನು ಹೊಂದಿದ್ದವರು. ತನಗೆ ಹೆಣ್ಣು ಕೊಡಲು ಬಂದ ವ್ಯಕ್ತಿಯನ್ನು ಕಂಡ ಕಿಟ್ಟಿಯು,

> "ಅನುಷ್ಠಾನ ಉಂಗುರದ ಹಣೆಯ ಮೇಲಿನ ತ್ರಿಪುಂಡ್ರ, ಕೊರಳಲ್ಲಿಯ ರುದ್ರಾಕ್ಷಿ, ಹುರಿಕಟ್ಟಾದ ಗಿಡ್ಡದೇಹ, ಇವೆಲ್ಲವನ್ನು ಕಂಡು ಕಿಟ್ಟಿಗೆ ಸಾಕಷ್ಟು ಆದರ ಹುಟ್ಟಿದರೂ ಕೂಡ ಇಂಥವನನ್ನು ಮಾವನೆಂದಾಗ, ಸ್ವೀಕರಿಸುವುದರಲ್ಲಿ ಅನೇಕ ಲೋಪದೋಷಗಳು ಕಂಡವು. ಈ ತ್ರಿಪುಂಡ್ರಧಾರಿಗೆ ಮಾಮಲೇದಾರರ ಗುರುತು ಇರುವುದು ಸಾಧ್ಯವಿಲ್ಲ. ...ಬಹಳವಾದರೆ ಅವರ ಮನೆಯ ದೇವರ ಗುರುತು ಇರಬಹುದು. ಈ ಲಂಡ ಪಂಚಾದಾರಿಯಾದ

[illegible]

[illegible]

[illegible]

[illegible]

[illegible]

> ಕೃಷ್ಣರಾಯನೊಡನೆ, ಬೀದಿಗಳಲ್ಲಿ ಓಡಾಡುವುದು ಕಷ್ಟ. ಇವನೇ ಓಗೆಂದ ಮೇಲೆ ಇವನ ಮಗಳು...! ಇವನೆತ್ತ ಮ್ಯಾಂಚೆಸ್ಟರ ಧೋತರದ ಆರುಪೋಟು ಎತ್ತರದ, ಗೌರವರ್ಣದ ರಾಘುಪ್ಪನೆತ್ತ"[೧೦]

ಎಂದು ಮನಸ್ಸಿನೊಳಗೆ ತಳಮಳಗೊಳ್ಳುವುದನ್ನು ಕಾಣಬಹುದು.

ಇಲ್ಲಿ ಬಿಳಿಬಣ್ಣ, ಮಾಮಲೇದಾರರ ಗೆಳೆತನ, ಮ್ಯಾಂಚೆಸ್ಟರ್ ಪಂಚೆ, ನಗರ ವಾಸನೆಯುಳ್ಳ ಆಧುನಿಕ ಮನುಷ್ಯರು ಮಾದರಿಯಾಗುತ್ತಿರುವುದನ್ನು ಗಮನಿಸಬೇಕು. ನಗರದ ಬೀದಿಗಳಲ್ಲಿ ತಮ್ಮ ಹೆಂಡತಿಯನ್ನು ಕರೆದುಕೊಂಡು ಹೋಗುವಾಗ ಆಗುವ ಅನುಭವಗಳನ್ನು ಮೊದಲೇ ಊಹಿಸಿಕೊಳ್ಳಬಲ್ಲರು. "ಇದೇ ತಾನೇ ಆಧುನಿಕತೆ ಎಂದು ಹೊಸ ತಲೆಮಾರು ಹಾತೊರೆದು ಪಡೆದುಕೊಂಡಿದ್ದು. ಜೊತೆಗೆ ವ್ಯಂಗ್ಯವೆಂದರೆ, ಮ್ಯಾಂಚೆಸ್ಟರ್ ಪಂಚೆಯ ಮಾಮಲೇದಾರನ ಗುರುತಿರುವ ಆಧುನಿಕ ಮನಸ್ಸಿನ ರಾಘುಪ್ಪ, ನಿಜ ಜೀವನದಲ್ಲಿ ಯಾರ ಬಾಳಿಗೂ ಮಾದರಿಯಾಗಿಲ್ಲ. ಮಾದರಿಯಾಗುತ್ತಿರುವುದು ಸಾಂಪ್ರಾದಾಯಿಕ ಬದುಕಿನ ಗಂಗವ್ವ ಹಾಗೂ ದೇಸಾಯಿಯಂಥವರು. ಆತ್ಮಹತ್ಯೆ ಮಾಡಿಕೊಂಡು ಸೋಲೊಪ್ಪಿಕೊಳ್ಳುವುದು ರಾಘುಪ್ಪನೇ ಎಂಬುದು ಹಾಸ್ಯಾಸ್ಪದ".

ಇಲ್ಲಿ ಬರುವ ಕುಲೀನ ಬ್ರಾಹ್ಮಣರ ಜೀವನ ಕ್ರಮ ವಿಶೇಷವಾಗಿದೆ. ಆಧುನಿಕ ಬದುಕಿನ ಸಂಗೀತ ಶೋಕಿಯ ಬ್ರಾಹ್ಮಣರು ಮತ್ತು ಇವರ ಮದುವೆಯ ಸಮಾರಂಭದಲ್ಲಿ ಮಂಟಪವನ್ನು ಒಬ್ಬ ಮುಸ್ಲಿಂ ಪಾತರದವಳು ಬಂದು ಸಿಂಗರಿಸುವ ಪ್ರಸಂಗವನ್ನು ಊಹಿಸಿಕೊಳ್ಳುವುದು ಹಾಗೂ ಬ್ರಾಹ್ಮಣರ ಮಡಿ ಮೈಲಿಗೆಯ ಮುಂದೆ ಮುಸ್ಲಿಂರ ಹಾಜರಾತಿಯನ್ನು ಆ ಕಾಲಘಟ್ಟದಲ್ಲಿ ಊಹಿಸಿಕೊಳ್ಳುವುದು ಕೂಡ ಕಷ್ಟ. ಜೊತೆಗೆ ರೆವಿನ್ಯೂ ಇಲಾಖೆಯಲ್ಲಿ ಬ್ರಾಹ್ಮಣರೇ ಅಧಿಕವಾಗಿದ್ದು, ಇವರ ಕಛೇರಿಯ ವ್ಯವಹಾರಗಳು, ಹಾಗೂ ಕಂದಾಯ ವಸೂಲಾತಿಗಾಗಿ ಹಳ್ಳಿ ಹಳ್ಳಿಯಲ್ಲಿ ಸಂಚರಿಸುವಾಗ ಬದುಕಿನ ವ್ಯವಹಾರಕ್ಕೆ ತಕ್ಕಂತೆ ಬದಲಾದವರು. ಬ್ರಾಹ್ಮಣರಾದರೂ ಅನೈತಿಕ ವ್ಯವಹಾರಕ್ಕೆನೂ ಕಡಿಮೆ ಇಲ್ಲ. ಅನೈತಿಕತೆ ನಿಯಮ ಬಾಹಿರ ಎಂದೆನ್ನಿಸಿದರೂ, ಲಂಚ ಸ್ವೀಕರಿಸುವುದನ್ನು ಕಾಣಬಹುದು. ಕಿಟ್ಟಿಯು ಕೂಡ ಇದಕ್ಕೆ ಹೊರತಲ್ಲ. ಇವನು ಕೂಡ ಅನೈತಿಕ ಲೈಂಗಿಕ ಸಂಪರ್ಕವನ್ನು ತಿಳಿದು ತಿಳಿಯದಂತೆ ಮಾಡುತ್ತಾನೆ. ಇದಕ್ಕೆ ಲೇಖಕರು

> "ಕಾಲುಜಾರದ ಸರಕಾರೀ ಕೆಲಸಗಾರನು ಧರ್ಮರಾಜನೇ ಆಗಿರಬೇಕು"[೧೧]

ಎಂದು ವ್ಯಂಗ್ಯವಾಗಿ ವಿಡಂಬಿಸುತ್ತಾರೆ. ಮುಸ್ಲಿಂ ಜನರಿಂದ ಬ್ರಾಹ್ಮಣರು ತಂಬಾಕು ಸ್ವೀಕರಿಸುವುದು ಆಶ್ಚರ್ಯವೆನ್ನಿಸಬಹುದು. ಮದುವೆಯ ಮಡಿಮೈಲಿಗೆಯಲ್ಲಿ ಇವರ ಪ್ರವೇಶ ಹಾಗೂ ಮದುವೆ ಮಂಟಪವನ್ನು ಸಿಂಗರಿಸುವುದು ಲೇಖಕರ ಆಧುನಿಕ ಚಿಂತನೆಗೆ ಸಒಂದುಕಡೆ ಸಾಕ್ಷಿಯಾಗಿದೆ.

ರಾಘುಪ್ಪ ದೇಸಾಯಿಯರಿಗೆ ಬರೆದಿರುವ ಪತ್ರವೂ ತಪ್ಪೊಪ್ಪಿಗೆಯ ಪತ್ರವಾದರೂ, ಮೆಹಬೂಬಜಾನ ಹಾಗೂ ಚಂಪಕ್ಕ ಇವರ ಬಗ್ಗೆ ತನಗಿದ್ದ ಪ್ರೀತಿಯ ಆಳ ಎಂಥದ್ದು ಎಂಬುದನ್ನು ತಿಳಿಸುವ ಪ್ರೇಮ ಪತ್ರವೂ

ಸಹ ಆಗಿದೆ. ಅದೇ ರೀತಿ ಆಸ್ತಿ ಪತ್ರವೂ ಆಗಿದೆ. ಈ ಪತ್ರದಲ್ಲಿ ಆಧುನಿಕ ಬದುಕಿನ ಲೌಕಿಕ ಉದ್ದೇಶಗಳಿವೆ. ತನ್ನ ನಂತರ ಆಸ್ತಿ ಯಾರಿಗೆ ಸಲ್ಲಬೇಕು, ಮಗಳನ್ನು ಯಾರು ಮದುವೆಯಾಗಬೇಕು ಎಂಬುದನ್ನು ಸಹ ತಿಳಿಸುತ್ತಿದೆ.

ಮುಂಬೈಯಲ್ಲಿ ಅಚ್ಯುತ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವುದು, ಶಾಂತಾ ಕಾಲೇಜಿನಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಮೆರವಣಿಗೆಯಲ್ಲಿ ಮುಂದಾಳುತನ ವಹಿಸುವುದು. "ಈ ಎರಡು ಘಟನೆಗಳನ್ನು ಮತ್ತು ಅವುಗಳ ಪರಿಣಾಮಗಳನ್ನು ಜೊತೆಯಾಗಿ ನೋಡಿದರೆ, ಸಂಪ್ರದಾಯ ಶರಣ ಬದುಕಿನ ಏಕತಾನವನ್ನು ವ್ಯತ್ಯಾಸಗೊಳಿಸುವ ಒಂದು ಶಕ್ತಿಯಾಗಿ" ಕಾದಂಬರಿಕಾರರು ಗಮನಿಸಿದ್ದಾರೆ.

ಜಮೀನ್ದಾರಿಕೆ, ಅವರ ಧಾರ್ಮಿಕತೆ, ಸರಕಾರಿ ನೌಕರಿಯ ಮೂಲಕ ಆಧುನಿಕ ಬದುಕಿಗೆ ತೆರೆದುಕೊಳ್ಳುತ್ತಿರುವ ರೀತಿಯು ಕುತೂಹಲಕಾರಿಯಾಗಿದೆ. ಆದರೂ ಕಾದಂಬರಿ ಹಿಡಿಯುವುದು ಸಂಪ್ರದಾಯಸ್ಥ ದಾರಿಯನ್ನೇ ಎನ್ನಿಸುತ್ತದೆ. ಇಲ್ಲಿಯ ಯುವಕರ ಪಾತ್ರಗಳು ತಮ್ಮದೆ ಆದ ಗಟ್ಟಿತನವನ್ನು ಹೊಂದಿಲ್ಲ. ದುರ್ಬಲವಾಗಿವೆ. ಕಿಟ್ಟಿ, ವಸಂತ ಯಾರಾದರೂ ತಮ್ಮ ಯುಕ್ತಿ ಶಕ್ತಿಯನ್ನು ಪ್ರದರ್ಶಿಸಲಾರರು. ಸ್ವತಃ ನಿರ್ಣಯದ ಮೇಲೆ ವ್ಯವಹರಿಸಲಾರರು. ನೌಕರಿಯನ್ನು ಹೊಂದಿದ್ದರೂ ಹಿರಿಯರನ್ನೆ ಆಶ್ರಯಿಸುತ್ತಾರೆ. ಕೊನೆಯಲ್ಲಿ ಕಿಟ್ಟಿಗೆ ತನ್ನ ತಾಯಿ ದೈವಿ ಸ್ವರೂಪಿಯಾಗಿ ಕಾಣಿಸುತ್ತಾಳೆ. ಆಧುನಿಕತೆಯನ್ನು ಪ್ರದರ್ಶಿಸಿದ ರಾಘಪ್ಪ ಆತ್ಮಹತ್ಯೆಯ ದಾರಿಯನ್ನು ಹಿಡಿಯುತ್ತಾನೆ. ಆದರೆ ಜಾರ್ಜಿ ಇದಕ್ಕಿಂತ ಭಿನ್ನ ವ್ಯಕ್ತಿತ್ವದವನಾಗಿ ಕಂಡುಬರುತ್ತಾನೆ.

ತಲೆಮಾರುಗಳ ಸಂಘರ್ಷ ಪ್ರಮುಖವಾಗಿ ಬಂದರೂ ಕೂಡ ತರುಣ ತಲೆಮಾರುಗಳು ತೀರಾ ದುರ್ಬಲವಾಗಿವೆ. ಇದು ಆಧುನಿಕತೆಯ ಒಂದು ಪರಿಣಾಮ ಎಂಬ ಭಾವನೆ ಕಾದಂಬರಿಯಲ್ಲಿ ವ್ಯಕ್ತವಾಗಿದೆ. ಹೀಗಾಗಿ ಗೃಹಸ್ಥ ಜೀವನಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಒಂದು ಕಡೆ ನೀಡಿ, ಮತ್ತೊಂದು ಕಡೆ ಈ ಗೃಹಸ್ಥಜೀವನದ ರಾಘಪ್ಪನ ನಿದರ್ಶನ ನೀಡುತ್ತಾ ಗಂಗವ್ವನ ನೈತಿಕತೆಯನ್ನು ಎತ್ತಿಹಿಡಿದರೆ ದೇಸಾಯಿಯವರ ಬದುಕನ್ನು ಮಾದರಿಯಾಗಿ ನೀಡುತ್ತಿದೆ. ಹೀಗಾಗಿ ರಾಘಪ್ಪನ ರೀತಿಯ ಆಧುನಿಕ ಎಂಬ ಬದುಕು ಕೃತಿಗೆ ಬೇಡವಾಗಿ ನೈತಿಕ ಮೌಲ್ಯಗಳನ್ನು ಹೊಂದಿದ ವ ಾನವೀಯತೆಯ ಆಧುನಿಕತೆಯನ್ನು ಬಯಸುತ್ತದೆ. ತರುಣ ತಲೆಮಾರಿಗೆ ಹಿರಿಯರಷ್ಟು ಗಟ್ಟಿತನವಿಲ್ಲ. ಆಧುನಿಕ ಶಿಕ್ಷಣ ಪಡೆದು ಸುಶಿಕ್ಷಿತ ವರ್ಗವಾದರೂ ಹೊಸ ತಲೆಮಾರಿನ ಹೊಸ ಬದುಕನ್ನು ಶೋಧಿಸುವ ಸಾಧ್ಯತೆಯೇ ಇಲ್ಲವಾಗಿದೆ. ಈ ದೃಷ್ಟಿಯಿಂದ ನೌಕರಿ ಹೊಂದಿದ ಕಿಟ್ಟಿಗಿಂತ ಗಂಗವ್ವನೇ ಪ್ರಮುಖಳಾಗಿದ್ದಾಳೆ. ಆದರೆ ನೌಕರಿ ಹಿಡಿದ ಜಾರ್ಜಿಯು ತನ್ನ ನೆಲೆಯನ್ನು ಕಂಡುಕೊಂಡು ಕಿಟ್ಟಿ ಹಾಗೂ ವಸಂತರಾಯನಿಗ ಹೋಲಿಸಿದರೆ, ಉತ್ತಮ ಸ್ಥಾನಕ್ಕೇರುತ್ತಾನೆ.

ಆದರ್ಶವಾದಿ, ಸ್ವಾತಂತ್ರ್ಯ ಹೋರಾಟಗಾರ ಅಚ್ಯುತನ ಪಾತ್ರ ಬಂದರೂ ಅಲ್ಲೊಮ್ಮೆ-ಇಲ್ಲೊಮ್ಮೆ ಎಂಬ ಅತಿಥಿ ನಟನ ಪಾತ್ರದಂತಾಗಿದೆ. ಶಾಂತಾ ಬಾವುಟ ಹಿಡಿದು ಚಳುವಳಿಯ ನಾಯಕತ್ವ

ವಹಿಸಿದರೂ, ಇದು ಅರಬರೆ ಪಾತ್ರವಾಗಿದೆ. ಚಳುವಳಿಯ ದೃಷ್ಟಿಯೇ ಗಟ್ಟಿತನವಿಲ್ಲದೆ ಜೊಳ್ಳಿನಿಂದ ಕೂಡಿದೆ. ಕನ್ನಡದ ಕೆಲವು ಮಹತ್ವದ ಕಾದಂಬರಿಗಳೆಲ್ಲವೂ ಕಾಲದ ದೃಷ್ಟಿಯಿಂದ ಬ್ರಿಟಿಷರ ಕಾಲಕ್ಕೆ ಸೇರಿದ ಜೀವನವನ್ನು ಕುರಿತವು. ಹೀಗಾಗಿ ಸ್ವಾತಂತ್ರ್ಯ ಚಳುವಳಿಯ ಪ್ರಸ್ತಾಪವೂ ಕೆಲವು ಕೃತಿಗಳಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. 'ಮಾಡಿಮಡಿದವರು', 'ಸ್ವಾತಂತ್ರ್ಯದೆಡೆಗೆ', 'ಚಿರಸ್ಮರಣೆ', 'ರಕ್ತರಾತ್ರಿ', 'ರಕ್ತತರ್ಪಣ' ಮುಂತಾದವು ನೇರವಾಗಿ ಸ್ವಾತಂತ್ರ್ಯ ಚಳುವಳಿಯನ್ನೇ ಪ್ರಮುಖ ಉದ್ದೇಶವಾಗಿ ಹೊಂದಿವೆ.

ಆದರೆ ಅದೇ ಕಾಲಕ್ಕೆ ಬಂದ 'ಮಲೆಗಳಲ್ಲಿಮದುಮಗಳು', 'ಬೆಟ್ಟದಜೀವ', 'ಮರಳಿ ಮಣ್ಣಿಗೆ', 'ಗ್ರಾಮಾಯಾಣ', 'ಅಳಿದ ಮೇಲೆ', 'ಕಾನೂರು ಹೆಗ್ಗಡತಿ' ಮುಂತಾದ ಕೃತಿಗಳೆಲ್ಲ ಸ್ವಾತಂತ್ರ್ಯ ಚಳುವಳಿಯನ್ನು ಹಿಂಬದಿಗೆ ಸರಿಸಿ ಕುಟುಂಬದತ್ತ ಪ್ರಾಮುಖ್ಯತೆ ಕೊಡುತ್ತವೆ. ಇದೇ ಸಾಲಿಗೆ ಗಂಗವ್ವ ಗಂಗಾಮಾಯಿಯು ಸೇರಿಕೊಂಡಿದೆ.

ಭೂಮಾಲೀಕರ ಚಿತ್ರಣವೂ ಕಾದಂಬರಿಯಲ್ಲಿ ಮುಖ್ಯ ಸ್ಥಾನವನ್ನು ಪಡೆದರೂ ಊಳಿಗಮಾನ್ಯ ಪದ್ಧತಿಯ ಮೇಲೆ ಯಾವುದೇ ರೀತಿಯ ಬೆಳಕು ಬೀರಿಲ್ಲದಿರುವುದು ಒಂದು ಕೊರತೆಯೇ ಸರಿ. ಆದರೆ 'ಚೋಮನದುಡಿ', 'ಭಾರತೀಪುರ' ಮುಂತಾದ ಕನ್ನಡದ ಅನೇಕ ಕಾದಂಬರಿಗಳು ಉಳಿಗಮಾನ್ಯ ವ್ಯವಸ್ಥೆಯ ಸಮಗ್ರ ಚಿತ್ರಣವನ್ನು ನೀಡಲು ಪ್ರಯತ್ನಿಸಿವೆ. ಇದರ ಜೊತೆಯಲ್ಲಿಯೇ ಮತ್ತೊಂದು ಬಗೆಯಲ್ಲಿ ಮಲೆಗಳಲ್ಲಿಮದುಮಗಳು ಕೂಡ ಊಳಿಗಮಾನ್ಯ ವ್ಯವಸ್ಥೆಯ ಚಿತ್ರಣವನ್ನು ನೀಡುತ್ತದೆ. ಆದರೆ ಇಲ್ಲಿ ಈ ರೀತಿಯ ಯಾವುದೇ ಚಿತ್ರಣ ಮೂಡಿಲ್ಲದಿರುವುದನ್ನು ಕಾಣಬಹುದು. ಹೀಗಾಗಿ ದೇಸಾಯಿಯರ ಮುಂದೆ ಹಳ್ಳಿಯ ಕಾರ್ಮಿಕರು ಹಾಗೂ ಬಡವರು ನಿಂತು ಮಾತನಾಡಲು ಸಹ ಹೆದರುತ್ತಾರೆ. ಹೇಳಬೇಕಾದ ವಿಷಯವನ್ನು ಧೈರ್ಯವಿಲ್ಲದೆ, ಅತೀ ಸಂಕ್ಷಿಪ್ತವಾಗಿ ಹೇಳಿ ಮುಗಿಸುವುದನ್ನು ಕಾದಂಬರಿಯಲ್ಲಿ ಕಾಣುತ್ತೇವೆ.

ದೇಸಾಯಿ, ರಾಘಪ್ಪ, ಶೀನಪ್ಪ ಮುಂತಾದವರಿಗೆ ದೇಸಗತಿ ಇರುವುದು ಪ್ರಕೃತಿ ಸಹಜ ಎಂಬ ಗ್ರಹಿಕೆ ಕಾದಂಬರಿಗೆ ಇರುವಂತಿದೆ. ಇಂತಹ ಭೂಮಾಲೀಕರ ಹಿಂದೆ ಇರುವ ವ್ಯವಸ್ಥೆಯ ಬಗ್ಗೆ ಸ್ವಲ್ಪವಾದರೂ ಬೆಳಕು ಬೀರದೆ ಹೋಗಿರುವುದು ಅತ್ಯಾಶ್ಚರ್ಯವೇ ಸರಿ. ಕಾದಂಬರಿಕಾರರಿಗೆ ಇಡೀ ವ್ಯವಸ್ಥೆಯು ಬದಲಾಗಬೇಕು. ಆಧುನಿಕ ಬದುಕಿನತ್ತ ಸಾಗಬೇಕು ಎಂಬ ಸಣ್ಣ ನಿಲುವು ಇದ್ದರೂ, ಕೂಡ ಸೂಚ್ಯವಾಗಿಯಾದರೂ, ಊಳಿಗಮಾನ್ಯ ಪದ್ಧತಿಯ ಬಗ್ಗೆ ಧ್ವನಿಯನ್ನೆತ್ತುತ್ತಿದ್ದರು ಎಂಬ ಸಣ್ಣ ಸಂಶಯ ಬರದಿರಲಾರದು.

ಕುವೆಂಪು, ಕಾರಂತ, ದ.ರಾ.ಬೇಂದ್ರೆ ಚದುರಂಗ, ನಿರಂಜನ ಮುಂತಾದವರ ಸಾಹಿತ್ಯಕ್ಕೆ ಮಹತ್ವ ವಿರುವುದು ಊಳಿಗಮಾನ್ಯ ವ್ಯವಸ್ಥೆಯ ಬದಲಾಗಬೇಕೆಂಬ ಬಂಡಾಯ ಧೋರಣೆಯನ್ನು ವ್ಯಕ್ತಪಡಿಸಿದ್ದ ರಿಂದಲೇ 'ಚೋಮನದುಡಿ', 'ಮಲೆಗಳಲ್ಲಿಮದುಮಗಳು', 'ಕಾನೂರು ಹೆಗ್ಗಡತಿ' ಮುಂತಾದವುಗಳು ಪುನಃ ಪುನಃ ಓದಿಸಿಕೊಳ್ಳಲು ಕಾರಣ ಸಹ ಇದೆ ಆಗಿದೆ. ಅಲ್ಲದೆ 'ಮಲೆಗಳಲ್ಲಿಮದುಮಗಳು' ಎಂದಾಗ ಅಲ್ಲಿ ತಿಮ್ಮಿ-ಚೆನ್ನಮ್ಮ ಸಹ ಭಾಗವಹಿಸುತ್ತಾರೆ.

ಕಿಟ್ಟಿ ಮೊದಲಿಗೆ ಆಧುನಿಕತೆಯನ್ನು ಪ್ರದರ್ಶಿಸಿದರೂ, ಕೊನೆಗೆ, 'ದೈವಿ ಪಾತಳಿಯ ಮೇಲೆ ಶಾಲಿಗ್ರಾಮ. ಮನೆತನದ ಪಾತಳಿಯ ಮೇಲೆ ತಾಯಿ, ಕುಲ, ಧರ್ಮ, ಕುಲಾಚಾರದ ಜೀವಂತ ದೀವಗೆಯಂತೆ ಕಾಣುತ್ತಾಳೆ. ತಿಂಗಳು ಎರಡು ತಿಂಗಳಿಗೊಮ್ಮೆಯಾದರೂ ಮನೆಯಲ್ಲಿ ಸತ್ಯನಾರಾಯಣ ವ್ರತವಾಗಲೇಬೇಕು. ಚಹದಂಗಡಿಗೆ ಹೋಗುವುದನ್ನೇ ಕೊನೆಯಲ್ಲಿ ಬಿಟ್ಟುಬಿಟ್ಟನು. ಕ್ರಿಶ್ಚಿಯನ್ನರ ಮನೆಯಲ್ಲಿ ಖಾದ್ಯ ತಿನ್ನುವ ವಿಷಯದಲ್ಲಿ ಹೆದರಿಕೆ, ಸಂಧ್ಯಾವಂದನೆ. ಹೀಗಾಗಿ ಮುಖವು ವೈದಿಕ ತೇಜಸ್ಸಿನಿಂದ ಕಂಗೊಳಿಸತೊಡಗಿತ್ತು ಎಂಬ ಕೃತಿಯ ಅಂತಿಮ ನಿಲುವು ಸಂಪೂರ್ಣ ಸಂಪ್ರದಾಯದಿಂದ-ಆಧುನಿಕತೆ, ಆಧುನಿಕತೆಯಿಂದ-ಸಂಪ್ರದಾಯವೇ ಅಂತಿಮ ವಿಜಯ ಸಾಧಿಸುವುದನ್ನು ಕಾಣುತ್ತೇವೆ. ಅದೇ ರೀತಿ ಕಿಟ್ಟಿ ಮನುಷ್ಯನಾಗುವ ವಿವಿಧ ಹಂತಗಳನ್ನು ಚಿತ್ರಿಸಿದ್ದು, ಆ ಹಂತ ಶುದ್ಧ ಬ್ರಾಹ್ಮಣ ಸಂಪ್ರದಾಯದ ಮನುಷ್ಯನಾಗುವುದೇ ಆಗಿದೆ. ಆದರೆ ಅನೈತಿಕ ವ್ಯವಹಾರಗಳನ್ನು ಮಾಡಿದ ನಂತರ ದೇವರು ಎಂಬ ನಂಬಿಕೆಯನ್ನು ಆಶ್ರಯಿಸಿ ಈ ನಂಬಿಕೆಯನ್ನು ತಮಗಿಷ್ಟವಾದ ರೀತಿಯಲ್ಲಿ ಮಾರ್ಪಡಿಸಿಕೊಳ್ಳುತ್ತಾರೆ.

ಗಂಗವ್ವ ಪ್ರಾರಂಭದಿಂದಲೂ ಕೊನೆಯುವರೆಗೂ ಸಂಪ್ರದಾಯವನ್ನು ಬಿಡಲಿಲ್ಲ ಕಾಶಿಯಾತ್ರೆ, ಬದರಿಯಾತ್ರೆಗೆ ಹೋಗಬೇಕೆಂಬ ಹಂಬಲವನ್ನೇ ವ್ಯಕ್ತಪಡಿಸುತ್ತಾಳೆ. ಬದುಕುವ ಆಸೆಯಿಂದ ಮಗನ ಮೇಲಿನ ಪ್ರೀತಿಯಿಂದ ಗಂಗಾಜಲವನ್ನು ಚೆಲ್ಲಿದವಳು. ಕಾಶಿಗೆ ಹೋಗಿ ಬಂದವರ ಬಳಿ ಒಂದು ಬಾಟಲಿ ಗಂಗಾಜಲವನ್ನು ಎಂಟು ಆಣೆಗೆ ಕೊಂಡುಕೊಳ್ಳುವುದು, ಅದನ್ನು ನಿತ್ಯವೂ ಪೂಜೆ ಮಾಡುವುದು ಇಂತು ಗಂಗಾಮಾಯಿ ಮನೆ ಸೇರಿದಳು ಎಂಬುದೆ ಗಂಗವ್ವ ಸಾಧನೆಯಾಗುತ್ತದೆ. ಹೀಗೆ 'ಗಂಗವ್ವ-ಗಂಗಾಮಾಯಿ'ಯಲ್ಲಿ ಸಂಪ್ರದಾಯ ಹಾಗೂ ಆಧುನಿಕತೆಯ ಮದ್ಯೆ ದೊಡ್ಡ ಸಂಘರ್ಷ ನಡೆದಿದ್ದರೂ ಅಂತಿಮವಾಗಿ ಸಂಪ್ರದಾಯವೇ ಮೇಲುಗೈ ಸಾಧಿಸಿದೆ.

ಪುಣೇಕರರು ಭಾರತೀಯ ಸಂಸ್ಕೃತಿ-ಸಂಪ್ರದಾಯದ ಬಗ್ಗೆ ಗ್ರಹಿಸಿದ ನಿಲುವುಗಳೇ ಬೇರೆ. ಭಾರತೀಯ ಸಂಸ್ಕೃತಿಯ ಬಗ್ಗೆ ಅಪಾರ ಗೌರವವಿದ್ದು ಮೇಲು-ಕೀಳು ಸ್ಪೃಶ್ಯ-ಅಸ್ಪೃಶ್ಯ ಬಡವ-ಶ್ರೀಮಂತ ಮುಂತಾದ ನಿಲುವುಗಳು ಬದಲಾಗಬೇಕೆಂದು ಬಯಸಿದವರು. ಆದರೆ ಆಧುನಿಕತೆಯನ್ನು ಹಣದ ಮೂಲಕ ಗುರುತಿಸುವ ಪರಿಪಾಠಕ್ಕೆ ಹಾಗೂ ಎಲ್ಲವನ್ನು ಪಾಶ್ಚಾತ್ಯ ರೀತಿಯಲ್ಲಿ ಆಧುನಿಕತೆ ಬರುವುದನ್ನು ತಡೆಯಲು ಬಯಸಿದ್ದಾರೆ. ಇವರಿಗೆ ಮಾನವ ಸಂಬಂಧಗಳು ಮುಖ್ಯವೇ ಹೊರತು ಹಣ, ಅಧಿಕಾರವಲ್ಲ. ರಕ್ತ ಸಂಬಂಧಗಳು ಮುಖ್ಯವೇ ಹೊರತು ವಿಚ್ಛೇದನವಲ್ಲ. ಅನ್ಯರಂತೆ ಏಕತಾನತೆ, ಸಾವಿರಾರು ಜನರ ಮಧ್ಯೆ ಇದ್ದುಕೊಂಡು ಒಂಟಿತನ ಅನುಭವಿಸುವುದು ಮುಂತಾದವುಗಳನ್ನು ಕೃತಿ ಬಯಸಲಾರದು. ಆದರೂ ಇದು ಒಂದು ಬ್ರಾಹ್ಮಣ ಕುಟುಂಬದ ಚಿತ್ರಣವನ್ನು ಕುರಿತ ಕಾದಂಬರಿ. ಇವರಿಗೆ ಎಕ್ಸ್‌ಪೋಸರ್‌ಗಳು ಕಡಿಮೆ. ಹೀಗಾಗಿ ತಮ್ಮ ನಿಲುವುಗಳನ್ನು ವ್ಯಕ್ತಪಡಿಸಲು ಒತ್ತಾಯ ಪೂರ್ವಕವಾಗಿ ಈ ಪಾತ್ರಗಳಿಗೆ ಹೊಸ ಅನುಭವಗಳನ್ನು ತಂದು ಕಟ್ಟುತ್ತಾರೆ ಉದಾ : ನೌಕರಿ, ಹೋಟೆಲ್, ಸೂಳೆಗಾರಿಕೆ, ಇತ್ಯಾದಿ.

ಹೀಗಾಗಿ ರಾಘಪ್ಪನು ತೋರಿದ ಆಧುನಿಕತೆಯ ಬದುಕು ಇವರಿಗೆ ಬೇಡವಾಗಿದೆ. ಇದಕ್ಕಾಗಿಯೇ ರಾಘಪ್ಪ ಹಾಗೂ ಆತನ ಆಧುನಿಕತೆಯು ಆತ್ಮಹತ್ಯೆ ಮಾಡಿಕೊಂಡಿದ್ದು. ಇವರಿಗೆ ಗಂಗವ್ವನ ರೀತಿಯ ಬದಲಾವಣೆಯು ಬೇಕು. ದೇಸಾಯಿಯವರಂತೆ ಆಧುನಿಕ ಚಿಂತನೆಬೇಕು. ದೇಸಾಯಿ ತನ್ನ ತಂದೆಯ ಶ್ರಾದ್ಧವನ್ನೇ ಯಾವುದೇ ಕಾರಣದಿಂದ ಮಾಡದೇ ತಾವು ನಂಬಿದ ವಿಚಾರಗಳಿಗೆ ಅಂಟಿಕೊಂಡವರು. ಈ ವಿಚಾರಗಳಲ್ಲಿ ಬಿರುಕು ಬಂದಾಗ ಯಾವುದೇ ರೀತಿಯ ರಾಜಿಯನ್ನು ಮಾಡಿಕೊಳ್ಳಲಾರವು. ಅಷ್ಟು ಗಟ್ಟಿತನದಿಂದ ಕೂಡಿದ ಚಿಂತನೆಗಳಾಗಿವೆ. ಇವುಗಳನ್ನೇ ಆಧುನಿಕ ಚಿಂತನೆ ಎಂದು ಕಾದಂಬರಿ ಧ್ವನಿಸುತ್ತಿದೆ. ಹೀಗಾಗಿ ಇವರು ಮಾನವ ಸಂಬಂಧಗಳ ನೈತಿಕ ಮೌಲ್ಯಗಳ ಆಧುನಿಕತೆಯನ್ನು ಬಯಸುತ್ತಾರೆ. ಗಂಗವ್ವನ ಪಾತ್ರ ವಿಚಾರಣೀಯ ಯೋಗ್ಯವಾಗಿರುವುದು ಆಧುನಿಕತೆಯ ಹೆಸರಿನಲ್ಲಿ ಜಾನಪದ, ಪುರಾಣ ದೇಸಿಯ ಚಿಂತನೆ ಮುಂತಾದವುಗಳನ್ನು ತಿರಸ್ಕರಿಸಿರುವುದನ್ನು ತಿಳಿಸಬಯಸಲು ಯತ್ನಿಸುತ್ತಾರೆ. 'ಗಂಗವ್ವ ಗಂಗಾಮಾಯಿ'ಯ ಬಗ್ಗೆ ಷರಾ ಬರೆಯುತ್ತಾ

"ಹಠದಿಂದ ಸಂಪ್ರದಾಯವನ್ನು ಸಾಧಿಸಿದ್ದಾರೆ"[೧೨]

ಎಂದು ಒಂದೇ ಸಾಲಿನಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸುತ್ತಾರೆ. ಇದು ಸಮಂಜಸವೂ ಹೌದು. ಆಧುನಿಕತೆಯನ್ನು ಪ್ರದರ್ಶಿಸುವಂತೆ ಮಾಡಿ ಸಂಪ್ರದಾಯವನ್ನೇ ಕೃತಿ ಅಪ್ಪಿಕೊಂಡಿದೆ.

"ಪರಂಪರೆಗೆ ಇರುವ ಸಾಕು ಗುಣ ಧಾರುಣಶಕ್ತಿಯ ಬಗ್ಗೆ ಆಪಾರ ನಂಬಿಕೆ ಇದ್ದ ಕಾರಣ ಕೃತಿಯನ್ನು ತುಸು ಸಂಪ್ರದಾಯವಾದಿಯನ್ನಾಗಿ ಮಾಡಿದೆ"[೧೩]

ಎನ್ನುತ್ತಾರೆ. ಇವರು ಮುಖ್ಯವಾಗಿ ಗಮನಿಸಿರುವುದು ಕಥನಕ್ರಮ-ಶಿಷ್ಟಭಾಷೆ ಹಾಗೂ ಸಣ್ಣಸಣ್ಣ ವಿಷಯಕ್ಕೂ ನೀಡಿರುವ ಪ್ರಾಮುಖ್ಯತೆಯನ್ನು ಹಾಗೂ ಇವರಿಗೆ ಸಣ್ಣ ಸಂಗತಿಗಳ ಮಹಾಕಾವ್ಯವಾಗಿ ಕಾಣುತ್ತದೆ.

"ವ್ಯಕ್ತಿಗಳನ್ನೇ ಕುರಿತು ಬರೆಯಲಿ ಅಥವಾ ಪರಿಸ್ಥಿತಿಯನ್ನೇ ಕುರಿತು ಬರೆಯಲಿ ಕಾದಂಬರಿಯ ಬರವಣಿಗೆ ವಸ್ತುನಿಷ್ಠವಾಗಿದೆ. ಬಹುಶಃ ಪುಣೇಕರರ ದೃಷ್ಟಿಯಲ್ಲಿ ಸಂಪ್ರದಾಯವೆಂದರೆ ಇದೇ ಆಗಿದೆ"[೧೪]

ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇದು ಒಟ್ಟಾರೆ ಪುಣೇಕರರ ದಾರ್ಶನಿಕತೆಯ ಬಗ್ಗೆ ಬೆಳಕುಬೀರುತ್ತದೆ.

ಪುಣೇಕರರೇ 'ಇದೊಂದು ಸಂಪ್ರದಾಯ ಶರಣ ಕಾದಂಬರಿ' ಎಂದು ಕರೆದು ವಿಮರ್ಶಾ ವಲಯದ ದಿಕ್ಕನ್ನೇ ಏಕಮುಖಗೊಳಿಸಲು ಯತ್ನಿಸಿದ್ದಾರೆ. ಶಿಷ್ಟಭಾಷೆ, ಆಡುನುಡಿ, ನುಡಿಗಟ್ಟುಗಳ ವ್ಯವಸ್ಥಿತ ಬಳಕೆಯಿಂದ ಸಹಜ ಸಂಭಾಷಣೆ, ಶಿಷ್ಟವಾದ ಕಥನಕ್ರಮವೂ ಕಾದಂಬರಿಗೆ ವಿಶಿಷ್ಟತೆಯನ್ನು ನೀಡಿದೆ. ನಿರೂಪಣೆಯೂ ಎಂದೂ ನೀರಸವಾಗಿಲ್ಲ. ಕೃತಿ ಬಹುತೇಕ ನೈತಿತೆಗೆ ಮೀಸಲಾಗಿರುವುದರಿಂದ ನೈಜತೆಗೆ ಧಕ್ಕೆ ಬಂತು ಎಂದೆನ್ನಿಸಿದಾಗ ಲೇಖಕರೇ ನೇರವಾಗಿ ಓದುಗರನ್ನು ಉದ್ದೇಶಿಸಿ ಮಾತಿಗಿಳಿಯುತ್ತಾರೆ. ಪತ್ರಗಳ

ಬಳಕೆಯು ಕೃತಿಯಲ್ಲಿ ವಿಶೇಷವಾಗಿ ಮೂಡಿಬಂದಿದೆ. ಹೀಗಾಗಿ 'ಪ್ರಿಯವಾಚಕರೆ' ಎಂಬ ಶಬ್ದವೇ ಓದುಗರನ್ನು ತನ್ನತ್ತ ಸೆಳೆಯುವ ಕ್ರಮವಾಗಿದೆ. ನಾಟಕೀಯ ಲವಲವಿಕೆಯು ಸಂಭಾಷಣೆಗೆ ನೈಜತೆಯನ್ನು ಹೊದಗಿಸಿದೆ.

ಮುಸ್ಸಂಜೆ ಕಥಾ ಪ್ರಸಂಗದ 'ರಂಗವ್ವ', ಒಡಲಾಳದ 'ಸಾಕವ್ವ' ಇಂದಿರಾರ 'ಫಣಿಯಮ್ಮ', ಗಂಗಾಮಾಯಿಯ 'ಗಂಗವ್ವ' ಮುಂತಾದವು ಕನ್ನಡ ಕಾದಂಬರಿ ಲೋಕ ಕಾಣಿಸಿದ ಅಪೂರ್ವ ಪಾತ್ರಗಳು. ಇವರೆಲ್ಲರೂ ಬದುಕಿಗಾಗಿ ಛಲತೊಟ್ಟು ಹೋರಾಡಿದವರು. ತಮ್ಮನ್ನು ನಂಬಿದ ಜೀವಗಳಿಗಾಗಿ ತಮ್ಮನ್ನು ಅರ್ಪಿಸಿಕೊಂಡ ವರು. ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

ದಲಿತರು ಮಾತ್ರ ದಲಿತ ಲೋಕವನ್ನು ಸಮರ್ಥವಾಗಿ ಚಿತ್ರಿಸುತ್ತಾರೆ. ಮುಸ್ಲಿಮರು ಸಾಂಸ್ಕೃತಿಕ ಲೋಕವನ್ನು ಅವರೇ ಕಾಣಿಸಬೇಕು. ಅದೇ ರೀತಿಯಾಗಿ ಸ್ತ್ರೀಯರ ಲೋಕವನ್ನು ಸ್ತ್ರೀಯರೇ ತೋರಬಲ್ಲರು ಎಂಬ ಅರೆಸತ್ಯವಾದವನ್ನು ಕೃತಿ ಭಗ್ನಗೊಳಿಸುತ್ತದೆ. ಏಕೆಂದರೆ, ಪುಣೇಕರರ ಸ್ತ್ರೀ ಪಾತ್ರಗಳು ಒಬ್ಬ ಸ್ತ್ರೀಯು ಚಿತ್ರಿಸುವ ಪಾತ್ರಗಳಿಗಿಂತಲೂ ನೈಜವಾಗಿದೆ. ಮಹಿಳೆಯ ಮನೋಜನ್ಯ ಭಾವನಾವಲಯ ಲೋಕವನ್ನು ವಾಸ್ತವವಾಗಿ ಸೆರೆಹಿಡಿದಿದೆ. ಆದರೂ ಮೆಹಬೂಬಳ ಸಂಪೂರ್ಣ ಬದುಕನ್ನು ಚಿತ್ರಿಸುವಲ್ಲಿ ಗಂಗವ್ವ ಗಂಗಾಮಾಯಿ ಎಡವಿದೆ ಎಂದೇ ಹೇಳಬೇಕು.

ಕೃತಿಗೆ ಗಂಗವ್ವನ ಹೆಸರಿದೆ. ಗಂಗವ್ವನೇ ಮುಖ್ಯವಾಗದೆ. ಪ್ರತಿಯೊಬ್ಬರು ಸಹ ಪ್ರಮುಖರಾಗುತ್ತಾರೆ. ಸ್ತ್ರೀ ಕೇಂದ್ರಿತ ಹೆಸರಿದ್ದರೂ ಒಂದು ಕುಟುಂಬದ ಕಥೆಯಾಗಿದೆ. ತಾಯಿ ಕೊಡುವ ಪ್ರೀತಿ ನಿಸರ್ಗ ಸಹಜವಾದದ್ದು. ಅದೇ ರೀತಿ ಒಬ್ಬ ಮಹಿಳೆ ನಮ್ಮ ಸಮಾಜದಲ್ಲಿ ತನ್ನ ಸೇವೆ ತ್ಯಾಗಗಳ ಬಲಿದಾನದ ಮೂಲಕ ಮತ್ತೊಬ್ಬರನ್ನು ಗೆಲ್ಲಬೇಕಾದ ಅಸಹಾಯಕತೆ, ಅನಿವಾರ್ಯತೆಯು ಇರಬಹುದು. ಒಟ್ಟಾರೆ ಪ್ರತಿಕ್ಷಣದಲ್ಲೂ ಬದುಕನ್ನು ಸಂಬಾಳಿಸಲು ಮಾಡುವ ಹೋರಾಟ ತುಂಬಾ ಮಹತ್ವದ್ದು.

ಮುಖಪುಟವೇ ಕೃತಿಯ ಆಶಯದ ಪರಿಚಯವನ್ನು ಮೂಡಿಸುತ್ತದೆ. ಗಂಗಾಮಾಯಿಯನ್ನು ಚೆಲ್ಲುವುದರ ಮೂಲಕ ಆಧುನಿಕ ಬದುಕಿನ ಕಡೆಗೆ ಹೆಜ್ಜೆ ಇಟ್ಟ ಗಂಗವ್ವ, ಹಾಗೂ ಈ ಗಂಗವ್ವನ ತಲೆಯ ಮೇಲಿನ ಸೆರಗು ಭಾರತೀಯ ಮಹಿಳೆಯೊಬ್ಬಳ ಸಂಸ್ಕೃತಿ ಸಂಪ್ರದಾಯವನ್ನು, ಅದರ ಮುಂದುವರಿಕೆಯನ್ನು ಹೇಳುತ್ತಿದೆ. ಹೀಗಾಗಿ ಗಂಗಾಮಾಯಿಯಂತೆ ಚೆಲ್ಲಿ ಹೋದ ಆಧುನಿಕತೆಯು ಅಳಿಯುತ್ತಾ ಸಂಪ್ರದಾಯ ಉಳಿಯುತ್ತಾ ಸಾಗುತ್ತಿದೆ.

ಸಮಾಜ ಇಂದು ನೈತಿಕತೆಗೆ ಹಣವನ್ನೇ ಮೌಲ್ಯವಾಗಿ ಪರಿಗಣಿಸುತ್ತಿರುವುದರಿಂದ ಸಂಪ್ರದಾಯದ ಮುದ್ರೆಯಲ್ಲಿ ಮನುಷ್ಯನ ಮಿತಿಯನ್ನು ಕಣ್ತೆರದು ತೋರಿಸುತ್ತಿದೆ. ಹೀಗಾಗಿಯೇ ಮಾನವ ಸಂಬಂಧಗಳು ಸತ್ತು ಹುಟ್ಟಿವೆ. ಹುಟ್ಟುತ್ತಿವೆ. ಒಂದರ ಅಂತ್ಯ ಮತ್ತೊಂದರ ಪ್ರಾರಂಭವಾಗುತ್ತಿದೆ. ಈ ಕಾದಂಬರಿಯಲ್ಲಿ ಕೆಡಕಿನ ಸ್ವರೂಪದ ಸಮರ್ಥನೆಗಾಗಿ ರಾಘಪ್ಪನ ಪಾತ್ರ ನಿರ್ಮಿಸುತ್ತಾರೆ. ಕೆಡುಕು ಈ ಪಾತ್ರಕ್ಕೆ ಒಳಗಿಂದಲೇ ಬಂದಿದ್ದಲ್ಲ ಬೇಕೆಂತಲೇ ಎಳೆದು ತಂದು ಸೇರಿಸಿದ್ದು ಎನ್ನಿಸುತ್ತದೆ. ಏಕೆಂದರೆ ರಾಘಪ್ಪನ ಪಾತ್ರವೂ ತನ್ನ

[illegible]

[illegible]

[illegible]

[illegible]

[illegible]

ಆತ್ಮವಿಮರ್ಶೆಯನ್ನು Death Noteನಲ್ಲಿ ಸಮರ್ಥಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತದೆ. ಆ ಒಂದು ಪತ್ರವೇ, ಆ ಪಾತ್ರದ ಹಲವು ಸಾಧ್ಯತೆಗಳನ್ನು ಕಿತ್ತಾಕಿಬಿಡುತ್ತದೆ ಎಂಬುದನ್ನು ಕಾದಂಬರಿಯಲ್ಲಿ ಕಾಣಬಹುದು. ಒಟ್ಟಾರೆ ಇದೊಂದು ಸಂಪ್ರದಾಯವನ್ನೇ ಉಳಿಸಿಕೊಂಡು, ಸಂಪ್ರದಾಯವನ್ನೇ ಸಮರ್ಥಿಸಿಕೊಳ್ಳುವ ಕೃತಿ ಎಂದು ಹೇಳಬಹುದು. ಆದರೆ ಇದಕ್ಕೆ ಕಾದಂಬರಿ ಕೊಡುವ ಕಾರಣಗಳು ಭಿನ್ನವಾಗಿವೆ. ಏಕೆಂದರೆ ದೇಸಾಯಿ ಹಾಗೂ ಅಲ್ಪಸ್ವಲ್ಪ ಜಾರ್ಜಿಯ ಮೂಲಕ ಕೃತಿಕಾರರು ಹೇಳಬೇಕಾದ ನಿಲುವು ವ್ಯಕ್ತವಾಗಿರುವುದು ತೆಳುವಾದ ಧ್ವನಿಯಲ್ಲಿ.

ಟಿಪ್ಪಣಿಗಳು

೧. **ಶಂಕರಮೊಕಾಶಿ ಪುಣೇಕರ, ಗಂಗವ್ವಗಂಗಾಮಾಯಿ,** ಪು.೧೮

೨. ಅದೇ, ಪು.೧೨೦

೩. ಅದೇ, ಪು.೨೬

೪. ಅದೇ, ಪು.೧೪೯

೫. ಅದೇ, ಪು.೨೧೨

೬. ಅದೇ, ಪು.೬೧

೭. ಅದೇ, ಪು.೧೯೩

೮. ಅದೇ, ಪು.೨೭೬

೯. ಅದೇ, ಪು.೧೭೪

೧೦. ಅದೇ, ಪು.೯೬

೧೧. ಅದೇ, ಪು.೧೭೮

೧೨. ಶೇಷಗಿರಿರಾವ್ ಎಲ್.ಎಸ್. **ಹೊಸಗನ್ನಡ ಸಾಹಿತ್ಯ ಚರಿತ್ರೆ,** ಪು.೧೪೫

೧೩. ರಹಮತ್ ತರೀಕೆರೆ, **ಮಯೂರ,** ಪು.೫

೧೪. ಕೀರ್ತನಾಥ ಕುರ್ತಕೋಟಿ, **ಯುಗಧರ್ಮ ಹಾಗೂ ಸಾಹಿತ್ಯದರ್ಶನ,** ಪು.೨೪೧

ಅಧ್ಯಾಯ ೫

'ನಟನಾರಾಯಣಿ'- ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷ

೫

'ನಟನಾರಾಯಣಿ' - ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷ

ಕಲೆ ಮತ್ತು ಕಲಾವಿದನ ಬದುಕಿನ ನೈತಿಕ ಸಂಬಂಧಗಳನ್ನು ಕುರಿತಾದ 'ನಟನಾರಾಯಣಿ'ಯು ತನ್ನ ಪರಿಸರವನ್ನು ಮೀರಿ ಬೆಳೆದ ವ್ಯಕ್ತಿತ್ವವೂ ಹೇಗೆ ತನ್ನ ಬದುಕಿಗೆ ಮಾರಕವಾಗುತ್ತದೆ ಎಂಬುದನ್ನು ತನ್ನದೆ ಆದ ನಿಲುವು ನಿದರ್ಶನಗಳೊಂದಿಗೆ ಚರ್ಚಿಸಿದೆ.

ಸ್ವಾತಂತ್ರ್ಯ ಪೂರ್ವ(ಬ್ರಿಟಿಷ್) ಭಾರತದಲ್ಲಿ ಕಲಾವಿದನೊಬ್ಬನ ಬದುಕಿನ ಚಿತ್ರಣವನ್ನು ಒಳಗೊಂಡ 'ನಟನಾರಾಯಣಿಯು' ನಾಣಿಯ ಅಸ್ಥಿತ್ವದ ಕಥೆ. ಕಾದಂಬರಿಯ ಕೇಂದ್ರ ವ್ಯಕ್ತಿ ನಾರಾಯಣ ತಮ್ಮಣ್ಣ ಭಟ್ಟಜೋಶಿ. ನಾಣಿ ಎಂದೇ ಪರಿಚಿತನಾದವನು. ನಾರಾಯಣಿ ತನ್ನ ತಂದೆ ತಾಯಿಯನ್ನು ಕಳೆದುಕೊಂಡು ಅನಾಥನಾದ ಸಂದರ್ಭದಲ್ಲಿ ಹಳ್ಳಿಯಿಂದ ಧಾರವಾಡಕ್ಕೆ ರಾಮರಾವ್‌ದೇಸಾಯಿ ಹಾಗೂ ರಾಧಕ್ಕ ಎಂಬುವರು ಕರೆದುಕೊಂಡು ಬಂದು ತಮ್ಮ ಮಗನಂತೆ ಸಾಕುತ್ತಾರೆ.

ನಾಣನು ದೇಸಾಯಿಯವರ ಮನೆಯಲ್ಲಿ ಅಡುಗೆಯನ್ನು ಮಾಡುವ ಹುಡುಗನಾಗಿ, ಹುಳಿ ಮಾಡುವುದರಲ್ಲಿ ತನ್ನ ಶ್ರೇಷ್ಠತೆಯ ಮುದ್ರೆಯನ್ನು ಹೊಂದಿದ್ದವನು. ಮಾಲಿಕ-ಸೇವಕ ಎಂಬ ಯಾವುದೇ ರೀತಿಯ ತಾರತಮ್ಯವಿರಲಿಲ್ಲ. ಸ್ಫುರದ್ರೂಪಿ ಯುವಕನಾದ ನಾಣನಿಗೆ ಅಷ್ಟೇ ಸ್ಫುರದ್ರೂಪಿ ಕಂಠವಿತ್ತು. ಒಂದು ದಿನ ಮನೆಯ ಸಮಾರಂಭದಲ್ಲಿ ಸಮಯ ಸ್ಫೂರ್ತಿಯಿಂದ ಹಾಡಿದ ಹಾಡಿನ ಬಗ್ಗೆ ಕೋಪಗೊಂಡ ದೇಸಾಯಿಯವರು ಮನೆಬಿಟ್ಟು ಹೋಗುವಂತೆ ಆದೇಶಿಸುತ್ತಾರೆ. ಹೀಗಾಗಿ ಅನಿವಾರ್ಯವಾಗಿ ಸಾಕು ತಾಯಿ ರಾಧಕ್ಕನ ಮಾತನ್ನು ಮೀರಿ ಹೋಗುತ್ತಾನೆ.

ರಾಧಕ್ಕ ನಾಣನು ಪುನಃ ತನ್ನ ಹಳ್ಳಿಗೆ ಹೋಗುವನೆಂದು ಭಾವಿಸಿದರೆ, ಈತನ ಆಲೋಚನೆಯೇ ಭಿನ್ನವಾಗಿತ್ತು. ಆ ವೇಳೆಯಲ್ಲಿ ಸವಾಯಿ ಗಂಧರ್ವರೆಂದು ಖ್ಯಾತರಾದ 'ರಾಮಭಾವುಕುಂದಗೋಳ್ಕರ' ಎಂಬುವವರ ಬಳಿ ಸಂಗೀತ ಕಲಿಯಬೇಕೆಂದು ಹೊರಟಾಗ ಸ್ಥಳೀಯ 'ನಾಟಕ' ಕಂಪನಿಯವರು ತಮ್ಮ ಕಂಪನಿಯಲ್ಲಿ ಹೆಣ್ಣು ಪಾತ್ರವನ್ನು ಮಾಡಲು ಆಹ್ವಾನಿಸಿ ಗಾಯನವನ್ನು ಅಲ್ಲಿಯೇ ಕಲಿಯಬಹುದೆಂದೂ ಆಶ್ವಾಸನೆಯನ್ನು ನೀಡುತ್ತಾರೆ. ಸಂಗೀತ ಕಲಿಯಬೇಕೆಂಬ ಮನಾದಾಸೆಯೊಂದಿಗೆ ನಟನೆಯ ಅವಕಾಶವೂ ದೊರೆತ ಕಾರಣ, ನಾಣಿ ಮುಂದೆ 'ನಟ ನಾರಾಯಣಿ' ಎಂದು ಪ್ರಸಿದ್ಧನಾಗುತ್ತಾನೆ.

ಎಲ್ಲರೂ ತಮ್ಮ ತಮ್ಮ ಜಗತ್ತಿನಲ್ಲಿ ತಮ್ಮ ಉದ್ದೇಶಗಳ ಪೂರೈಕೆಗಾಗಿಯೇ ಕರ್ಮವನ್ನು ಮಾಡುತ್ತಾರೆ. ಅದೇ ರೀತಿ ನಾಣಿಯು ಕೂಡ ತನ್ನ ಮಧುರ ಕಂಠ, ಗಿಡ್ಡ ಶರೀರ ಸೌಷ್ಠವ ಉಚಿತ ಅಭಿನಯ

ಪ್ರಸಂಗಾವಧಾನದಿಂದ ನಾಟಕ ಕಂಪನಿಯ ಮಾಲೀಕರು ಹಾಗೂ ಸುತ್ತಮುತ್ತಲ ಜನರನ್ನು ಆಕರ್ಷಿಸಿ ಎಲ್ಲರ ಪ್ರಶಂಸೆಗೂ ಪಾತ್ರನಾಗುತ್ತಾನೆ. ಅನಿರೀಕ್ಷಿತವಾಗಿ ದೊರೆತ ಅತಿಯಾದ ಈ ಪ್ರಶಂಸೆಯಿಂದ ನಾಣಿಯ ಬದುಕಿನಲ್ಲಿ ಅಹಂಕಾರ ಎಂಬ ಸಣ್ಣ ಮಾನವ ಸಹಜ ಎಳೆಯೊಂದು ಬೆರತ ಪರಿಣಾಮವಾಗಿ, ಕೊನೆಗೆ ಈ ಅಹಂಕಾರವೇ ನಾಣಿಯ ಅಧಃಪತನಕ್ಕೂ ಕಾರಣವಾಗುತ್ತದೆ.

ನಾಟಕ ಕಂಪನಿಯು ಯಶಸ್ವಿಯಾಗಿ ನಡೆಯುತ್ತಿದ್ದಾಗ ಯಾವುದೇ ತೊಂದರೆಯು ಇರಲಿಲ್ಲ. ಆದರೆ ದಿನಕಳೆದಂತೆ ನಾಟಕ ಕಂಪನಿಯ ಜಾಗದಲ್ಲಿ ಸಿನಿಮಾ ಥಿಯೇಟರ್ ಪ್ರವೇಶಿಸಿದ ಪರಿಣಾಮವಾಗಿ, ಮುಂದೆ ನಾಟಕಕಂಪನಿಯ ಸಿನಿಮಾಯೋಜನೆಯಿಂದ ಕಳೆಗುಂದಬಾರದೆಂದು, ಯೋಚಿಸಿ ನಾಣಿಯನ್ನು 'ಚೌಧರಿ' ಎಂಬುವರ ಬಳಿ ಸಿನಿಮಾ ಮಾದರಿಯ ನೃತ್ಯ ಕಲಿಯಲು ಹೋಗುವಂತೆ ಹೇಳುತ್ತಾರೆ. ದಿನವೂ ಹೋಗಿ ನೃತ್ಯ ಅಭ್ಯಾಸ ಮಾಡುತ್ತಿರುತ್ತಾನೆ. ಆದರೂ ಕೊನೆಗೆ ಸಿನಿಮಾದೊಂದಿಗೆ ಸ್ಪರ್ಧಿಸಲಾರದೆ, ಹಾಗೂ ನಾಟಕಕಂಪನಿ ಬಿಟ್ಟು ಸಿನಿಮಾ ಥಿಯೇಟರ್ ಪ್ರಾರಂಭಿಸುವ ಮಾಲೀಕರ ಯೋಜನೆಯಿಂದಾಗಿ ನಾಟಕ ಕಂಪನಿ ಸಂಪೂರ್ಣವಾಗಿ ಮುಚ್ಚಿಹೋಗುತ್ತದೆ. ನಿರುದ್ಯೋಗಿಯಾಗಿ ದಿನನಿತ್ಯದ ಬದುಕು ಸಾಗಿಸಲು ಈತ ತನ್ನ ನೃತ್ಯ ಗುರುಗಳಾದ ಚೌದರಿ ಸಾಹೇಬರ ಕಾನೂನು ಬಾಹಿರ ಮಾದಕವಸ್ತು ಕಳ್ಳ ಸಾಗಾಣಿಕೆದಾರನಾಗುತ್ತಾನೆ.

ನಾಟಕದಲ್ಲಿ ಮಾತ್ರ ಹೆಣ್ಣು ಪಾತ್ರ ಮಾಡುತ್ತಿದ್ದ ನಾಣಿ ಈ ಮಾದಕವಸ್ತು ಸಾಗಿಸುವ ದೃಷ್ಟಿಯಿಂದ ನಿಜ ಜೀವನದಲ್ಲಿಯೂ ಹೆಣ್ಣು ವೇಷ ಹಾಕಿ ಗಂಡು ಸೂಳೆಯಾಗಿ(ಚಮೇಲಿ) ಅಂದಿನ ಕಾಲದ ಉನ್ನತ ಅಧಿಕಾರ ಹೊಂದಿದ್ದ ಬ್ರಿಟಿಷ್ ವ್ಯಕ್ತಿಗಳೊಂದಿಗೆ ಸ್ನೇಹ ಮಾಡಿ ಅವರ ಸಲಿಂಗ ಕಾಮುಕ ಆಸೆಗೆ ಸಿಕ್ಕಿ ಹಣವನ್ನು ಸಂಪಾದಿಸುವುದರಲ್ಲೇ ತೃಪ್ತಿಪಡುತ್ತಾನೆ.

ಹೀಗೆಯೇ ಒಮ್ಮೆ ಸಲಿಂಗ ಕಾಮದಿಂದ ಹಾಸಿಗೆ ಅಂಟಿಕೊಂಡ ಅಧಿಕಾರಿಯ ಆಕಸ್ಮಿಕ ಸಾವಿನಿಂದ ಪೋಲೀಸರ ಕಣ್ಣು ನಾಣನ ಮೇಲೆ ಬೀಳುತ್ತದೆ. ಪೋಲೀಸರ ಕಣ್ಣಿನಿಂದ ತಪ್ಪಿಸಿಕೊಳ್ಳಲು ಸದಾ ನಾಣನು ತನ್ನ ವೇಷ ಬದಲಾಯಿಸುತ್ತಾ ಊರಿಂದೂರಿಗೆ ಪಲಾಯನ ಮಾಡುತ್ತಿರುತ್ತಾನೆ.

ಕೊನೆಗೆ ತನ್ನ ತಪ್ಪಿನ ಅರಿವಾಗಿ ಪ್ರಾಯಶ್ಚಿತ್ತಕ್ಕಾಗಿ, ಮಾಡಿದ ತಪ್ಪುಗಳನ್ನು ಸರಿಪಡಿಸುವಾಗ ಖಾಸಗಿ ಪತ್ತೇದಾರನ ಕೈಗೆ ಸಿಕ್ಕಿಬಿದ್ದು ನಡೆದ ವಿಷಯವನ್ನೆಲ್ಲ ತಿಳಿದ ಖಾಸಗಿ ಪತ್ತೇದಾರ 'ಡೆರಿಕ್‌ಡಿಸೋಜ' ನಾಣನನ್ನು ಅಪರಾಧದಿಂದ ಮುಕ್ತಗೊಳಿಸುತ್ತಾನೆ. ನಂತರ ತನ್ನ ನಿಜ ಜೀವನದ ನೃತ್ಯ ಹಾಗೂ ಗಾಯನ ಕಲಿಯಬೇಕೆಂಬ ಆಸೆಯನ್ನು ಪೂರೈಸಿಕೊಂಡು, ನಿಜವಾದ ನಟನಾರಾಯಣಿಯಾಗುತ್ತಾನೆ. ಇದು ಒಟ್ಟು ಕಥೆ.

'ನಟನಾರಾಯಣಿ' ಕಾದಂಬರಿಯು ಪ್ರಮುಖವಾಗಿ ಎತ್ತುವ ಪ್ರಶ್ನೆ 'ಅಸ್ಥಿತ್ವವಾದ'ಕ್ಕೆ ಸಂಬಂಧಿಸಿದ್ದು. ನಾಣನಿಗೆ ಒಂಟಿತನದ ಅನುಭವವಾದಾಗ ನಿರೂಪಕರು ಅದನ್ನು ಬೆರಳಿಟ್ಟು ತೋರಿಸುತ್ತಾರೆ. ಕನ್ನಡ ನವ್ಯ ಸಾಹಿತ್ಯದಲ್ಲಿ ಕಂಡುಬಂದ 'ಅಸ್ಥಿತ್ವವಾದವೂ' ಮೂಲತಃ ಪಾಶ್ಚಾತ್ಯದೇಶದಲ್ಲಿನ ಪರಿಕಲ್ಪನೆ. ಮನುಷ್ಯ ತನ್ನ ಮನುಷ್ಯತ್ವವನ್ನು ಬದುಕಿನೊಳಗೇ ಕಂಡುಕೊಳ್ಳಬೇಕು. ತಾನೇ ಸೃಷ್ಟಿಸಿಕೊಳ್ಳಬೇಕು. ತನ್ನ ಬದುಕಿನ

ವಿಚಾರಧಾರೆ, ಚಿಂತನೆ, ವರ್ತನೆ, ಸ್ವಭಾವಕ್ಕೆ ತಾನೇ ಸಂಪೂರ್ಣ ಹೊಣೆಗಾರ. ಹೀಗಾಗಿ ಆ ಮನುಷ್ಯನಿಗೆ ಸ್ವತಂತ್ರವಾದ ಮನಸ್ಸು ಮತ್ತು ಹೀಗೆಯೇ ನಡೆಯಬೇಕೆಂಬ ಇಚ್ಛಾಶಕ್ತಿ ಇದೆ. ಹೀಗಾಗಿ ವೈಯಕ್ತಿಕ ಜವಾಬ್ದಾರಿಗಳು ಉದ್ಭವಿಸುತ್ತವೆ. ಸ್ಥಿತಿ ಮೊದಲು ತತ್ವ ಆ ನಂತರ. ಅಂದರೆ ಮನುಷ್ಯನ ಇರುವಿಕೆ ಮೊದಲು ಆಗುವಿಕೆ ಅನಂತರದ್ದು ಎಂಬ ನಂಬಿಕೆ ಇಲ್ಲಿ ಸಾಮಾನ್ಯವಾದ ಅಂಶ. ಹೀಗಾಗಿಯೇ ತಾನು ಏನು ಮಾಡಬೇಕು, ಅಥವಾ ಏನಾಗಬೇಕೆಂದು ಆತನೇ ನಿರ್ಣಯಿಸಬೇಕು. ತಾನು ಏನಾಗಬೇಕೆಂಬುದನ್ನು ಅತ ಆಯ್ಕೆ ಮಾಡಿಕೊಳ್ಳದಿದ್ದರೆ, ಬೇರೊಬ್ಬರಿಂದ ಆಯ್ಕೆ ಮಾಡಿಸಿಕೊಂಡರೆ, ಅಥವಾ ಬೇರೊಬ್ಬರಿಗೆ ಆಯ್ಕೆ ಮಾಡಲು ಅವಕಾಶವನ್ನು ನೀಡಿದರೆ, ಆ ವ್ಯಕ್ತಿ ವ್ಯಕ್ತಿತ್ವದಿಂದ ತಿರಸ್ಕಾರ ಯೋಗ್ಯನಾಗುತ್ತಾನೆ.

ಅಸ್ಥಿತ್ವವಾದವು 'ಕ್ರಿಯೆಗೆ' ಅತ್ಯಂತ ಹೆಚ್ಚಿನ ಮಹತ್ವವನ್ನು ಕೊಡುತ್ತದೆ. ಕ್ರಿಯೆಯ ಆಯ್ಕೆ ಆ ವ್ಯಕ್ತಿಯ ವೈಯಕ್ತಿಕ ನಿರ್ಧಾರಕ್ಕೆ ಸೇರಿರುವುದರಿಂದ ಆ ವ್ಯಕ್ತಿಯ ಆಂತರಿಕ ಹಾಗೂ ಬಾಹ್ಯ ವರ್ತನೆಗೂ ಯಾವ ಸ್ಪಷ್ಟ ವ್ಯತ್ಯಾಸವೂ ಕಾಣಿಸಲಾರದು. ಏಕೆಂದರೆ ಭೂತ, ಭವಿಷ್ಯತಕಾಲದ ಸಂಬಂಧ ಇವರಿಗೆ ಮುಖ್ಯವಾಗಲಾರದೇ 'ವರ್ತಮಾನಕಾಲ'ವೇ ಅತಿ ಮುಖ್ಯ ಸ್ಥಾನವನ್ನು ಪಡೆದುಕೊಳ್ಳುತ್ತದೆ.

ಪ್ರತಿಯೊಂದು ಜೀವಿಗೂ ಒಂದಲ್ಲ ಒಂದು ಬಾರಿ ಅಸ್ಥಿತ್ವದ ಪ್ರಶ್ನೆಯು ಕಾಡುತ್ತದೆ, ಇದು ಸಹಜ. ವಿಶಾಲ ಪ್ರಪಂಚದಲ್ಲಿ ಅನಾಥ ಎನ್ನುವ ಮನೋಭಾವ ಮಾನವನಲ್ಲಿ ಉಂಟಾಗುತ್ತದೆ. ಮಾನವನ ಚಿಂತಿಸುವ ವಿಧಾನ. ತನ್ನ ಜೀವನವನ್ನು ಎದುರಿಸುವ ಶಕ್ತಿ ಹಾಗೂ ಬದುಕನ್ನು ಗಂಭೀರವಾಗಿ ಪರಿಗಣಿಸಿದವರಿಗೆ ಅಸ್ಥಿತ್ವದ ಅನುಭವವಾಗುವುದು ಸಹಜ. ಹಾಗೆಂದು ಬದುಕನ್ನು ಸ್ವೀಕರಿಸಿದ ಮೇಲೆ ಅಸ್ಥಿತ್ವದ ಪ್ರಶ್ನೆ ಎಲ್ಲ ಕಾಲದಲ್ಲಿಯೂ ಇರುತ್ತದೆ ಎನ್ನುವುದು ಸುಳ್ಳು. ಏಕೆಂದರೆ ಬದುಕು ಬರೀ ಶೂನ್ಯವಲ್ಲ. ಒಲವು-ಚೆಲುವು, ಪ್ರೀತಿ-ಪ್ರೇಮ, ಸ್ನೇಹ-ವಿಶ್ವಾಸ, ಸುಖ-ದುಃಖ, ಸಂತಸ-ಹೃದಯವಂತಿಕೆ, ನೋವು, ಎಲ್ಲವೂ ಮೇಳೈಸಿರುವುದರಿಂದ ಅಸ್ಥಿತ್ವದ ಪ್ರಶ್ನೇಯೇ ಎಲ್ಲಾ ಕಾಲದಲ್ಲಿಯೂ ಮುಖ್ಯವಾಗಲಾರದು.

ಪಾಶ್ಚಾತ್ಯ ದೇಶಗಳಲ್ಲಿ 'ಅಸ್ಥಿತ್ವವಾದದ' ಪ್ರಶ್ನೆಯು ಕೈಗಾರೀಕರಣ ನಗರೀಕರಣ, ಆಧುನೀಕರಣ ಸಂಸ್ಕೃತಿ ಹಾಗೂ ಮಹಾಯುದ್ಧದ ನಂತರ ಹೆಚ್ಚಿನ ರೀತಿಯಲ್ಲಿ ಮೂಡಿ ಬಂದಿದ್ದು. ಹಣಕ್ಕೆ ಹೆಚ್ಚಿನ ಮಹತ್ವ ನೀಡಿದ ಕಾರಣ, ಸಮಯಪ್ರಜ್ಞೆ ಹೆಚ್ಚಾಗಿ, ಮಾನವೀಯ ಸಂಬಂಧಗಳಿಗೆ ಯಾವುದೇ ಬೆಲೆ, ಇಲ್ಲದಂತಾಯಿತ್ತು. ವಿವಾಹಪೂರ್ವ ಹಾಗೂ ವಿವಾಹ ನಂತರದಲ್ಲಿನ ವಿಚ್ಛೇದನದಂತಹ ಸಂಸ್ಕೃತಿಯು ಬೆಳೆದಿರುವುದು ಇದೇ ಕಾರಣದಿಂದ. ಅಲ್ಲಿ ವಿವಾಹದ ನಂತರ ಏರ್ಪಡುವ ಸಂಬಂಧಕ್ಕಿಂತ 'ಲೈಂಗಿಕತೆ'ಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟ ಪರಿಣಾಮವೂ ಹೌದು.

ಭಾರತದಂತಹ ವಿಶಾಲ ಹಾಗೂ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುವ ದೇಶದ ಸಾಮಾಜಿಕ ಪರಿಸ್ಥಿತಿ ಭಿನ್ನವಾಗಿದೆ. ತನ್ನದೇ ಆದ ಪರಂಪರೆಯನ್ನು ಹೊಂದಿರುವುದರಿಂದ ಭಾರತೀಯ ಸಮಾಜದಲ್ಲಿ ಗಂಡ-ಹೆಂಡತಿ, ಮಕ್ಕಳು, ತಂದೆ-ತಾಯಿ, ತಮ್ಮ-ತಂಗಿ, ಅಣ್ಣ-ಅಕ್ಕ ಮುಂತಾದ ಕೌಟುಂಬಿಕ ಸಂಬಂಧಗಳನ್ನು

ಸಾರ್ವಜನಿಕವಾಗಿ ಬೇರ್ಪಡಿಸುವುದು ಸುಲಭ ಸಾಧ್ಯವಲ್ಲ. ಕೆಲವೊಂದು ಕಡೆ, ಬಹಳ ಅಪರೂಪವಾಗಿ ಬೇರ್ಪಡಬಹುದೇನೊ? ಹೀಗಾಗಿ ಪಾಶ್ಚಾತ್ಯ ಸಮಾಜದಂತೆ ಇಲ್ಲಿ ಏಕಾಂಗಿತನ, ಒಂಟಿ ಭ್ರಮಾತ್ಮಕತೆಯಂತಹ ಅಸ್ಥಿತ್ವದ ಪ್ರಶ್ನೆ ಮುಖ್ಯವಾಗಿ ಆ ಮಟ್ಟದಲ್ಲಿ ಗೋಚರಿಸಲಾರದು.

ಪ್ರತಿಯೊಂದು ಜೀವಿಗೂ ಒಂದಲ್ಲ ಒಂದು ವೇಳೆಯಲ್ಲಿ ಅಸ್ಥಿತ್ವದ ಪ್ರಶ್ನೆ ಸ್ವಲ್ಪವಾದರೂ ಕಾಡುತ್ತದೆ ಎಂಬುದು ವಾಸ್ತವ. ಈ ಅಸ್ಥಿತ್ವವೇ ಶಾಶ್ವತ ಸ್ಥಿತಿ ಎಂದು ಭಾವಿಸುವುದರ ಬಗ್ಗೆ ಕಾದಂಬರಿಕಾರರಿಗೆ ಕೋಪವಿದೆ.

> "ಎಕ್ಸಿಸ್ಟೆಂಷಿಯಾಲಿಸಂ' ಎಂದು ಅನ್ನುತ್ತಾರೆ. ಕನ್ನಡದಲ್ಲಿ ಇದನ್ನು 'ಅಸ್ಥಿತ್ವವಾದ'ವೆಂದು ನಮ್ಮ ಜಾಣರು ಭಾಷಾಂತರಿಸಿದ್ದಾರೆ ಕೂಡ. ಎಕ್ಸಿಸ್ಟೆಂಷಿಯಾಲಿಸಂಗೆ ಒಂದೇ ಅರ್ಥವಿದೆ ಎಂದು ಭಾವಿಸಿದ್ದಾರೆ. ಇವರು ಬುದ್ಧಿವಂತರೇ ಸರಿ. ಈ ಶಬ್ದಕ್ಕೆ ಇನ್ನೂ ಅನೇಕ ಅರ್ಥಗಳಿವೆ. ಅನೇಕ ಮನಃಸ್ಥಿತಿಗಳನ್ನು ವರ್ಣಿಸುವಾಗಲೂ ಈ ಶಬ್ದವನ್ನು ಬಳಸಲಾಗುತ್ತದೆ. ಇಷ್ಟು ಬುದ್ಧಿವಂತರಿಗೆ ಆ ಇತರ ಅರ್ಥಗಳು ತಿಳಿಯದಿರಲಾರವು! ತಿಳಿದೇ ಅವೆ! ಆದರೆ ಬೇರೆ ಅರ್ಥಗಳನ್ನು ತಿಳಿದು ಬಳಸಲು ಅವರಿಗೆ ಸಮಯವೂ ಇಲ್ಲ; ಸಹನೆಯೂ ಇಲ್ಲ"[೧]

ಎಂದು ಕಾದಂಬರಿಕಾರರು ಅಭಿಪ್ರಾಯ ಪಡಲು ಕಾರಣ ಹಿಂದಿನ ಸಾಹಿತ್ಯವನ್ನು ಧಿಕ್ಕರಿಸಿ ಬಂದಂತಹ ನವ್ಯ ಸಾಹಿತ್ಯದ ಅವನತಿಗೆ ಹೇಗೆ ತನ್ನ ಗುಣಗಳೇ ಕಾರಣವಾದವು ಎನ್ನುವುದು. ಅತಿಯಾದ ಭ್ರಮಾತ್ಮಕತೆ, ಕಾಮುಕತೆ ಹಾಗೂ ಅಸ್ಥಿತ್ವವಾದದ ಪ್ರಶ್ನೆಗಳು ನಮ್ಮ ಸಮಾಜಕ್ಕೆ ಪರಿಪೂರ್ಣವಾಗಿ ಅನ್ವಯಿಸಲಾರವು ಎಂಬ ನಿಲುವವನ್ನು ಹೊಂದಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ಹೀಗೆಂದು, ಇಡೀ ನವ್ಯ ಸಾಹಿತ್ಯವನ್ನೆಲ್ಲಾ ಧಿಕ್ಕರಿಸಲು ಸಾಧ್ಯವಿಲ್ಲ. ಐರೋಪ್ಯದಿಂದ ಆಮದು ಮಾಡಿಕೊಂಡ ತತ್ವ ಐರೋಪ್ಯದಲ್ಲಿ ಮಾಯವಾದರೂ ಭಾರತದಲ್ಲಿ ಮಾಯವಾಗಿಲ್ಲ ಎಂಬುದು ಸಾಮಾನ್ಯ ಅನುಭವ. ಅದಕ್ಕಾಗಿ ಯುರೋಪಿನಲ್ಲಿ ಮಾಯವಾಗಿ ಹೋಗುತ್ತಿದ್ದರೂ ನಮ್ಮ ನಾಡಿನಲ್ಲಿ ಇನ್ನೂ ಹೆಚ್ಚು ಹಸುರಾಗಿಯೇ ಅಸ್ಥಿತ್ವವಾದ ಆಳುತ್ತಿದೆ ಎಂಬ ಕೊರಗು ಕೃತಿಗಿದೆ. ಆದರೆ ನವ್ಯ ಸಾಹಿತ್ಯ ಪ್ರಾರಂಭದಲ್ಲಿ ಮೂಡಿಬಂದ ಹಾಗೆಯೇ ೧೯೬೦-೭೦ರ ದಶಕದಲ್ಲಿ ಮೂಡಿಬರಲಿಲ್ಲ ಎಂಬುದು ನಮಗೆ ಗೊತ್ತಿರುವ ಸಂಗತಿಯೇ. ಅಂದರೆ ಗೋಪಾಲಕೃಷ್ಣ ಅಡಿಗ, ಬಿ.ಸಿ.ರಾಮಚಂದ್ರ ಶರ್ಮ, ಅನಂತಮೂರ್ತಿ, ತೇಜಸ್ವಿ, ಕುಸುಮಾಕರದೇವರ ಗೆಣ್ಣೂರ, ಚಂದ್ರಶೇಖರ ಕಂಬಾರ, ಗಿರೀಶ್ ಕರ್ನಾಡ್ ಮುಂತಾದವರೆಲ್ಲರೂ ಒಂದೇ ಸಾಹಿತ್ಯ ಪಂಥಕ್ಕೆ ಸೇರಿದವರಾದರು ಎಲ್ಲರ ನಿಲುವು ಮತ್ತು ದಾರ್ಶನಿಕತೆ ಮಾತ್ರ ಬೇರೆ ಬೇರೆಯಾಗಿವೆ. ಅನಂತಮೂರ್ತಿಯವರ 'ಸಂಸ್ಕಾರ'ದ ನಂತರ ಮೂಡಿಬಂದ 'ಭಾರತೀಪುರ'ಕ್ಕೂ, ತೇಜಸ್ವಿಯವರು 'ಸ್ವರೂಪ' ಹಾಗೂ 'ಅಬಚೂರಿನ ಪೋಸ್ಟಪೀಸು' ಮುಂತಾದ ಕೃತಿಗಳಿಗೆ ಬಹಳ ವ್ಯತ್ಯಾಸವಿದೆ. ತೇಜಸ್ವಿ ಅಬಚೂರಿನ ಪೋಸ್ಟಾಪೀಸು ಕೃತಿಗೆ ಬರೆದ 'ಹೊಸದಿಂಗತದೆಡೆ' ಎಂಬ ಮುನ್ನುಡಿಯನ್ನು ಸ್ಪಷ್ಟವಾಗಿ ಇಲ್ಲಿ

[illegible]

[illegible]

[illegible]

[illegible]

ನೆನೆದುಕೊಳ್ಳಬಹುದು. ಅದೇ ರೀತಿ ಕಂಬಾರರು ಜಾನಪದೀಯ ಅಂಶಗಳ ಕಡೆಗೆ ನೋಟವನ್ನರಿಸಿದರೆ, ಕುಸುಮಾಕರರು ವ್ಯಕ್ತಿವಿಶಿಷ್ಟತೆಯ ಮಧ್ಯೆ ನಿಸರ್ಗ ಹಾಗೂ ಪ್ರಾಣಿಜಗತ್ತಿಗೂ ಸಿಗಬೇಕಾದ ಮಹತ್ವದ ಕಡೆಗೆ ತಮ್ಮ ಒಲವು ತೋರಿಸುವುದು ಕಂಡುಬರುತ್ತದೆ.

ಈ ದಿಸೆಯಲ್ಲಿ ಪುಣೇಕರರು ನಟನಾರಾಯಣಿಯನ್ನು ಬರೆದಿದ್ದು ೧೯೭೬-೭೭ರಲ್ಲಿ. ಹೀಗಾಗಿ ಅಸ್ಥಿತ್ವವಾದ ಯುರೋಪಿನಲ್ಲಿ ಮಾಯವಾದರೂ, ನವ್ಯಸಾಹಿತ್ಯದಲ್ಲಿ ಮಾಯವಾಗಿಲ್ಲ ಎಂಬ ನಿಲುವಿಗೆ ಬರುವುದು ಸಮಾಧಾನಕರ ಅಂಶವಲ್ಲ. ಇದು ಇವರ ಮಿತಿಯಾಗಿ ಕಾಣಿಸಿಕೊಳ್ಳುತ್ತದೆ. ಆ ವೇಳೆಗೆ ನವ್ಯಸಾಹಿತ್ಯದಲ್ಲಿನ 'ಅಸ್ಥಿತ್ವವಾದ' ತನ್ನ ಮೊದಲಿನ ಸ್ವರೂಪ ಹಾಗೂ ಮಹತ್ವ ಕಳೆದುಕೊಳ್ಳುತ್ತಾ ಸಾಗುತ್ತಿತ್ತು ಎಂಬುದು ಮೇಲಿನಂತೆ ಸ್ಪಷ್ಟವಾಗುತ್ತದೆ.

ಎಕ್ಸಿಸ್ಟೆಂಶಿಯಲಿಸ್ಟ್ ಅವಸ್ಥೆಗೆ ವೈಚಾರಿಕ ರ್‍ಯಾಶನಲ್ ಉತ್ತರವಿಲ್ಲ ಎಂದು ಯುರೋಪಕ್ಕೆ ಮೊದಲು ಬಾರಿ ತೋರಿದವನು ಕಿರ್ಕೆಗಾರ್ಡ್. ಅವನು ತೋರಿದ ಮಾರ್ಗವೆಂದರೆ, 'ಭಯ ಜನ್ಯ ಶರಣಾಗತಿ'. ಕಿರ್ಕೆಗಾರ್ಡ್‌ನ ಸಮಸ್ಯೆಗೆ ಭಾರತೀಯರು ಕೊಟ್ಟ ಭಕ್ತಿ ಜನ್ಯ ಶರಣಾಗತಿಯೇ ಹೆಚ್ಚು ಸಮರ್ಪಕ. ಲೇಖಕರು ಅಸ್ಥಿತ್ವವಾದ ಸಿದ್ಧಾಂತಕ್ಕೆ ಭಕ್ತಿ ಜನ್ಯ ಶರಣಾಗತಿ ಎಂದು ಹೇಳಿ ಕುಮಾರವ್ಯಾಸ ಭಾರತದ ಮಾತುಗಳನ್ನು ಉಲ್ಲೇಖಿಸುತ್ತಾ, ಕೊನೆಗೆ 'ವಿಷ್ಣುಮಾಯೆ'ಯ ಸಿದ್ಧಾಂತವನ್ನು ಪರಿಹಾರ ಎಂಬಂತೆ ಸೂಚಿಸುತ್ತಾರೆ. ಇದಕ್ಕಾಗಿ ಕೃಷ್ಣನ ಅವತಾರವನ್ನು ಆಹ್ವಾನಿಸಿದ್ದಾರೆ.

ಎಲ್ಲಾ ಪ್ರೇರಣೆ ಪ್ರಭಾವಗಳಿಗೂ ಅನ್ಯರತ್ತ ನೋಡುವುದು ವಿವೇಚನಾ ಯುಕ್ತವಲ್ಲ. ಕರ್ಕೆಗಾರ್ಡ, ಸಾತ್ರೆ, ಕಮೂ ಮುಂತಾದವರನ್ನು ಅಸ್ಥಿತ್ವವಾದದ ಪ್ರಮುಖ ಪ್ರತಿಪಾದಕರಾಗಿ ನವ್ಯರು ನೋಡುತ್ತಾರೆ. ಇವರ ಸಾಹಿತ್ಯದ ಅಂಶಗಳನ್ನು ಸಹ ತಂದು ಸೇರಿಸುತ್ತಾರೆ. ಆದರೆ "ಕನ್ನಡ ಸಾಹಿತ್ಯದಲ್ಲಿ ಇವರಿಗಿಂತ ಶ್ರೇಷ್ಠವಾದ ಕೆಲವೂ ಅಬ್ಸರ್ಡ್ ಎನ್ನಬಹುದಾದ ಕೃತಿಗಳಿವೆ. ಅವು 'ರಂಗನಾಯಕಿ (ಕಸ್ತೂರಿ)', 'ಆಕಸ್ಮಿಕ(ತರಾಸು)', 'ಬೆಂಕಿಯ ಬಲೆ(ತರಾಸು)' ಎಂದು ನಟನಾರಾಯಣಿಗೆ ಬರೆದ ಉಪೋದ್ಘಾತದಲ್ಲಿ ಕೃತಿಕಾರರೇ ಸೂಚಿಸುತ್ತಾರೆ. ಇವರು ಈ ಕನ್ನಡ ಕೃತಿಗಳನ್ನು ನವ್ಯರು ಹಾಗೂ ಇತರರು ಮರೆಯುತ್ತಾರೆ ಎಂಬ ಕೊರಗು ಕೃತಿಯಲ್ಲಿ ಕಾಡಿದೆ.

ಆದರೆ ಲೇಖಕರು ಭಾವಿಸಿರುವಂತೆ ಇಲ್ಲಿ ಬರುವ ನಾಣ ಒಂಟಿತನವನ್ನು 'ಅಸ್ಥಿತ್ವವಾದ' ಎನ್ನಲು ಸಾಧ್ಯವಿಲ್ಲ. ಅದನ್ನು 'ಅವ್ಯವಸ್ಥೆ' ಎನ್ನಬಹುದು. ಏಕೆಂದರೆ ನಾಣನ ಬದುಕಿಗೂ ಇತರರ ಬದುಕಿಗೂ ಸ್ಪಷ್ಟ ವ್ಯತ್ಯಾಸವಿದೆ. ಇದನ್ನು ಒಂದು ಅರ್ಥವತ್ತಾದ ಸನ್ನಿವೇಶ ಸಂಗ್ರಹದ ಮೂಲಕ ನೋಡಬಹುದು. ತನಗೆ ಝುಬೇದಾಳಿಂದ ಮೆಡಲ್ ಸಿಕ್ಕಲಿಲ್ಲ ಎಂದು ನಾಣ ಒಳಗೊಳಗೆ ಕೊತ ಕೊತ ಕುದಿದ್ದು, ಝುಬೇದಾಳನ್ನು 'ಬೋಳಿ' ಎನ್ನುವವರೆಗೂ ಹೋಗಿವೆ, ಅವನ ಕೋಪ ಅಸೂಯೆಗಳು. ಹೀಗೆ ದ್ವೇಷ ಅಸೂಯೆಗಳಿಂದ ಅವನು ಜ್ವಾಲಾಮುಖಿಯಾಗಿ ಮಲಗಿರುವಾಗ ಝುಬೇದಾ ಅವನು ಎಲ್ಲಿ ಎಂದು

ನೋಡಲು ಒಂದು ಹುಡುಗನನ್ನು ಕಳುಹಿಸುತ್ತಾಳೆ. ಅವನು ನಾಣನಿಗೆ ನಿದ್ದೆ ಹತ್ತಿದೆ, ಎಬ್ಬಿಸಿ ಕರೆಯಲೇ ಎಂದು ಕೇಳಿದರೆ ಝುಬೇದಾ ಮಲಗಲಿ ಬಿಡು 'ಕಂದಮ್ಮ' ಎಷ್ಟು ದಣಿವಾತೊ ಏನೋ ಅಂದಳು. ಹೀಗಾಗಿ ಝುಬೇದಾ ಹಾಗೂ ನಾಣ ಈ ಜಗತ್ತುಗಳ ಅಂತರವೆಂದರೆ, 'ಬೋಳಿ' ಹಾಗೂ ಕಂದಮ್ಮಗಳ ಅಂತರವಾಗಿದೆ.

'ಕಂದಮ್ಮ' ಎನ್ನುವಾಗ ಒಂದು ಕೌಟುಂಬಿಕ ಪ್ರಾಥಮಿಕ ಸಂಬಂಧದ ಪರಿಭಾಷೆಯನ್ನು ಕಾಣಬಹುದು. ಇಂತಹ ಸ್ಥಿತಿಯನ್ನು ಪ್ರಾಶ್ಚಾತ್ಯರಲ್ಲಿ ಕಾಣಲು ಸಾಧ್ಯವಿಲ್ಲ. ಹೀಗಾಗಿ ಈ ರೀತಿಯ ಮನಸ್ಥಿತಿಯನ್ನು ಹೊಂದಿದ್ದರೆ, ಅಸ್ಥಿತ್ವದ ಪ್ರಶ್ನೆ ನಾಣನಿಗೆ ಮೂಡುತ್ತಿರಲಿಲ್ಲ. ಪಾಶ್ಚಾತ್ಯ ಸಾಹಿತ್ಯದ ಅಸ್ಥಿತ್ವವಾದದ ಜಗತ್ತು ಬರಡು ತನದಿಂದ ಕೂಡಿದ್ದು, ಪ್ರೀತಿ-ಪ್ರೇಮ-ವಿಶ್ವಾಸ ಮುಂತಾದ ಅಕ್ಕರೆಗಳಿಲ್ಲದ ಜಗತ್ತು. ಹೀಗಾಗಿಯೇ ನಾಣನ ಬದುಕಿಗೆ ಪ್ರೀತಿ-ಪ್ರೇಮ-ವಿಶ್ವಾಸಗಳ ಬೆಳಕು ಬೀಳುವುದಿಲ್ಲ. ಅಂದರೆ, ರಾಧಕ್ಕ ತೋರಿಸುವ ತಾಯಿಯ ಪ್ರೀತಿ, ನಾಟಕ ಕಂಪನಿಯ ಮಾಲೀಕರು, ಝುಬೇದಾಳು ತೋರಿಸುವ ಸಹೋದರ ಪ್ರೀತಿ ಮುಂತಾದವುಗಳಿಂದ ನಾಣ ದೂರ ಸರಿಯುತ್ತಾನೆ. ಯಾರು ತನಗೆ ಪ್ರೀತಿ-ವಿಶ್ವಾಸ ತೋರಿಸುತ್ತಾರೋ ಅವರಿಂದ ದೂರನಾಗಿ, ತನಗೆ ಎಲ್ಲಿಂದ 'ಹಣ' ಹಾಗೂ 'ಸಲಿಂಗ ಕಾಮುಕತೆ' ದೊರೆಯುತ್ತದೆಯೋ ಅಲ್ಲಿಗೆ ನಾಣ ಹೋಗುತ್ತಾನೆ. ಹೀಗಾಗಿಯೇ ನಾಣನ ಒಂಟಿತನಕ್ಕೆ 'ಅವ್ಯವಸ್ಥೆ' ಎನ್ನಬಹುದು.

ಕಾದಂಬರಿ ಸಾಮಾಜಿಕ ಸಮಸ್ಯೆಯತ್ತಲೂ ಗಮನವರಿಸಿದೆ. ತಂದೆ-ತಾಯಿ ಕಳೆದುಕೊಂಡು ಅನಾಥನಾದ ನಾಣ ತನ್ನ ಬದುಕಿನಲ್ಲಿ ಸುಶಿಕ್ಷಿತನಾಗಿದ್ದರೆ, ಎಲ್ಲರಂತೆ ಪೂರ್ವದಲ್ಲಿಯೇ ಒಂದು ನೌಕರಿ ಹಿಡಿದಿದ್ದರೆ, ಅವ್ಯವಸ್ಥೆಯಲ್ಲಿ ತೊಳಲಾಡಬೇಕಾಗಿರಲಿಲ್ಲ. ಆಧುನೀಕರಣ, ಕೈಗಾರೀಕರಣ, ನಗರೀಕರಣ ಸಂಸ್ಕೃತಿಯಿಂದ ನಾಟಕ ಕಂಪನಿಯ ಜಾಗವನ್ನು ಆಕ್ರಮಿಸಿದ ಸಿನಿಮಾ ಸಂಸ್ಕೃತಿಯಿಂದಾಗಿಯೇ ಸಾಂಪ್ರದಾಯಿಕ ಸ್ಥಿರ ಬದುಕು ಅಸ್ತವ್ಯಸ್ತವಾಗಿದ್ದು. ನಾಟಕವೂ ಜೀವಮಾನದ ಜನಪ್ರಿಯತೆಯನ್ನು ಕಳೆದುಕೊಂಡು ನಟರೆಲ್ಲರೂ ನಿರುದ್ಯೋಗಿಗಳಾಗಿ, ಇವರನ್ನೇ ನಂಬಿದ ಜೀವಗಳು ಸಹಬೀದಿ ಪಾಲಾಗಬೇಕಾದ ಸಂದರ್ಭವನ್ನು ಕಾಣುತ್ತೇವೆ. ಇಂತಹ ಮೂಲಭೂತ ಸಮಸ್ಯೆಯಿಂದಲೇ ನಾಣಿ ಕಳ್ಳ ವ್ಯವಹಾರದಲ್ಲಿ ತೊಡಗಿದ್ದು.

ಲೇಖಕರು 'ಸಿನಿಮಾ ಸಂಸ್ಕೃತಿ' ಬಂದಿದ್ದರಿಂದಲೇ ನಾಣನ ಬದುಕು ಹೀಗಾಯಿತ್ತೆಂದು ಹೇಳುವಾಗ, ಒಮ್ಮೆ ಇವರು 'ಆಧುನಿಕ ಬದುಕ'ನ್ನು ತಿರಸ್ಕರಿಸುತ್ತಿದ್ದಾರೆಯೇ ಎನ್ನಿಸುತ್ತದೆ. ಏಕೆಂದರೆ ಬದಲಾವಣೆ ಸಮಾಜದ ನಿಯಮ. ಇದೊಂದು ಭೌತ ಸಂಸ್ಕೃತಿಯ ವರ್ಗಕ್ಕೆ ಸೇರಿದೆ. ಹೀಗಾಗಿ ಕಂಪನಿ ನಾಟಕದ ಜಾಗದಲ್ಲಿ ಸಿನಿಮಾ ಸಂಸ್ಕೃತಿ ಪ್ರವೇಶಿಸಿರಬಹುದು. ಆದರೆ ಮುಂದೊಂದು ದಿನ ಈ ಸಂಸ್ಕೃತಿಯೂ ವೈಜ್ಞಾನಿಕತೆಯ ಪ್ರವಾಹದಲ್ಲಿ ಸಿಲುಕಿ ಬೇರೆ ಸಂಸ್ಕೃತಿ ಬರಬಹುದು. ಹಾಗೆಯೇ ಪೂರ್ವದಲ್ಲಿ ಕಂಪನಿ ನಾಟಕಕ್ಕಿಂತ ಬೇರೊಂದು ರೀತಿಯ ವ್ಯವಸ್ಥೆ ಇದ್ದಿರಬಹುದು. ಎಂಬ ಆಲೋಚನೆ ಕೃತಿಗೆ ಬಂದಿಲ್ಲದಿರುವುದು ಒಂದು ಮಿತಿಯಾಗುತ್ತದೆ.

ಅಷ್ಟೇ ಅಲ್ಲದೆ ಇದರ ಜೊತೆ ಜೊತೆಯಲ್ಲಿಯೇ ನಾಟಕ ಕಂಪನಿಯ ಮಾಲೀಕರ ದುರ್ವ್ಯವಹಾರವನ್ನು ಕೃತಿ ತೆಳುವಾಗಿ ಗ್ರಹಿಸಿದೆ. ಝುಬೇದ ದೊಡ್ಡ ಕಲಾವಿದೆಯಾದರೂ ಬದುಕಿನಲ್ಲಿ ನಿಶ್ಚಿತ ನೆಲೆ ಎಂಬುದು ಇಲ್ಲದೆ ಕಂಪನಿಯಿಂದ ಕಂಪನಿಗೆ ಉದ್ಯೋಗಕ್ಕಾಗಿ ಅಲೆಯುವುದನ್ನು ಕಾಣಬಹುದು. ಅಲ್ಲದೆ ಎಲ್ಲಾ ಕಂಪನಿಯ ಮಾಲೀಕರು ಕಾಮುಕರು. ಝುಬೇದಾಳಂತವರು ಇವರ ಕಾಮುಕತೆಯನ್ನು ಇಡೇರಿಸಲೇ ಬೇಕಿತ್ತು. ತಮಗಿಷ್ಟವಿಲ್ಲದೆ ತಿರಸ್ಕರಿಸಿದರೆ, ಮಾದಕ ವಸ್ತುವನ್ನು ನೀಡಿ ಪ್ರಜ್ಞೆ ತಪ್ಪಿಸಿಯಾದರೂ, ತಮ್ಮ ಆಸೆಯನ್ನು ಇಡೇರಿಸಿಕೊಳ್ಳುತ್ತಿದ್ದರು. ಇದನ್ನು ಝುಬೇದಾಳನ್ನು ಅಫೀಮು ಕೊಟ್ಟು ಅತ್ಯಾಚಾರ ಮಾಡಿದ ಜಂಬೂನಾಥ ನಿಂದಲೇ ಕಾಣಬಹುದು. ಅಲ್ಲದೆ ಎಲ್ಲ ನಟರು ಮಾದಕ ವಸ್ತುಗಳ ಚಟಕ್ಕೆ ಬಲಿಯಾಗಿರುವುದು ಒಂದು ಸಾಮಾಜಿಕ ಸಮಸ್ಯೆಯಾಗಿದ್ದು, ಇದಕ್ಕೆ ಕೃತಿಯಲ್ಲಿ ಯಾವುದೇ ರೀತಿಯ ವಿವರಣೆ ಮೂಡಿಬಂದಿಲ್ಲ.

ಕಾದಂಬರಿಯಲ್ಲಿ ಪ್ರಮುಖವಾಗಿ ಅಸ್ಥಿತ್ವವಾದವನ್ನು ಪ್ರಶ್ನೆ ಮಾಡಿದ್ದರೂ ಆಳದಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ನಡುವೆ ಸಂಘರ್ಷ ನಡೆದಿರುವುದನ್ನು ಕಾಣಬಹುದು. ಸಂಪ್ರದಾಯದ ಕಟ್ಟುನಿಟ್ಟಿನಿಂದಲೇ ನಾಣ ಮನೆ ಬಿಟ್ಟು ನಾಟಕ ಕಂಪನಿ ಸೇರಿದ್ದು. ಮನೆಯ ಸಮಾರಂಭದಲ್ಲಿ

> ಮೊಹರಂ ಪದಾ ಹಾಡ್ಯಾನ. ಸ್ವಾಮೇರಿಗೆ ಕೇಳುವಂತೆ! ನಂ ಮಾರ್ಯದೆ ಕಾದಾನ, ಸ್ವಾಮೇರಿಗೂ ಮಾರ್ಯಾದೆ ಮಾಡ್ಯಾನ! ಅದಕ್ಕವನಿಗೆ ಫಲಾ-ಮಂತ್ರಾಕ್ಷತಿ, ಹೌದಲ್ಲೋ?[3]

ಎಂದು ಮನೆ ಬಿಟ್ಟು ಹೋಗುವಂತೆ ಹೇಳುತ್ತಾರೆ.

ಇಲ್ಲಿ ನಾಣನನ್ನು ಮನೆಬಿಟ್ಟು ಕಳುಹಿಸದಿದ್ದರೆ, ಸ್ವಾಮೇರು ಶಾಪಕೊಡುತ್ತಾರೆ, ಎಂಬ ಭಯ ಕಾಡುವುದದನ್ನು ನೋಡಬಹುದು ಅಷ್ಟೇ ಅಲ್ಲ. ನಾಣನು ಕೂಡ ಶ್ರಾದ್ಧಪಕ್ಷಗಳಲ್ಲಿ ಮಂತ್ರ ಹೇಳುವ ಬ್ರಾಹ್ಮಣನಾಗಿದ್ದವನು. ನಾಟಕ ಕಂಪನಿ ಸೇರಿದ ಮೇಲೆ ತನ್ನ ದಿನನಿತ್ಯದ ಸಂಪ್ರದಾಯದ ಆಚರಣೆಯನ್ನು ಧಿಕ್ಕರಿಸಿ ಸಲಿಂಗ ಕಾಮುಕತೆಯನ್ನು ಪೂರೈಸಿಕೊಳ್ಳುವುದು. ಕಳ್ಳನಾಗುವುದು ಹಣದ ಮೋಹದಿಂದಲೆ.

ಚೌದರಿ ಸಾಹೇಬರೊಂದಿಗೆ ಪ್ರತಿಭಾಳ ವಿವಾಹ ಮುಸ್ಲಿಂ ಸಂಪ್ರದಾಯದಂತೆ ನಡೆಯುತ್ತದೆ. ಇದು ಅಂತರಜಾತಿಯ ವಿವಾಹವಾದರೂ, ಇದು ಕೃತಿಯಲ್ಲಿ ತಾತ್ಕಾಲಿಕವಾಗುತ್ತದೆ. ಬಹುಬೇಗ ವಿಚ್ಛೇಧನಗೊಳ್ಳುತ್ತಾರೆ. ಹೀಗಾಗಿ ಲೇಖಕರಿಗೆ ಈ ರೀತಿಯ ಸಾಮಾಜಿಕ ಬದಲಾವಣೆಯು ಬೇಕಾಗಿಲ್ಲವೋ? ವಿಭಿನ್ನ ಸಂಸ್ಕೃತಿಯು ಒಂದೆಡೆ ಸೇರಿದರೆ, ಬದುಕು ಸಮರಸವಾಗಿರುವುದಿಲ್ಲ ಎಂಬ ಕಾರಣ ನೀಡಿ ಭಾರತದಲ್ಲಿ ಯಥಾಸ್ಥಿತಿಯೇ ಮುಂದುವರಿಯಬೇಕು ಎಂಬ ಬಯಕೆ ಇದೆಯೇ ಎನ್ನಿಸುತ್ತದೆ. ಅಸ್ಥಿತ್ವವಾದದ ಪ್ರಶ್ನೆಗೆ ಕಾದಂಬರಿಕಾರರ ಉತ್ತರ 'ಭಕ್ತಿಜನ್ಯ ಶರಣಾಗತಿ' ಎಂದು ಹೇಳುತ್ತಾ,

> "ನಾನು ವೇದಾಂತಪರ ಎಕ್ಸಿಸ್ಟೆಂಷಿಯುಸ್ಟ್ . ನನ್ನ ಅಸ್ಥಿತ್ವವಾದವೂ ತುಸು ಮಟ್ಟಿಗೆ ಕಿರ್ಕೆಗಾರ್ಡ್‌ನನ್ನು ಹೋಲುತ್ತದಾದರೂ, ಕಿರ್ಕೆಗಾರ್ಡನಂತೆ ನಾನು ದ್ವೈತ ಅಸ್ಥಿತ್ವವಾದಿಯಲ್ಲ.

'ಅಹಂ ಬ್ರಹ್ಮಾಸಿ' ಎಂದು ನಂಬುವ ಪ್ರತಿಯೊಬ್ಬ 'ಮಾನವ ದೈವಾಂಶ ಸಂಭೂತ'ನೆಂದು ನಂಬಿದ ಅಸ್ತಿತ್ವವಾದಿ (ಅಲ್ಸೇಶಿಯನ್) ನಾಯಿ ಬೆನ್ನಟ್ಟಿದಾಗ ಕಾಲಿಗೆ ಬುದ್ಧಿ ಹೇಳುತ್ತೇನೆ. ಆದರೆ ಆತ್ಮರಕ್ಷಣೆಯ ಪವಿತ್ರ ಉದ್ದೇಶಕ್ಕಾಗಿ ಗೌರವದಿಂದ ಓಡುತ್ತೇನೆ ನನ್ನ ಅನ್ಯತೆಗೆ ಅವಮಾನವೆಂದು ಭಾವಿಸುವುದಿಲ್ಲ."[೩]

ಎನ್ನುತ್ತಾರೆ. ಇದರಿಂದ ಧರ್ಮದ ದೇವರ ಮೇಲೆ ಲೇಖಕರಿಗೆ ಪೂರ್ಣ ನಂಬಿಕೆ ಇರುವಂತೆ ಓದುಗರಿಗೆ ಬಾಸವಾಗುತ್ತದೆ. ಆದರೆ ಎಲ್ಲದಕ್ಕೂ ದೇವರೇ ಪರಿಹಾರ ಎಂಬ ಪ್ರಜ್ಞೆಯು ಕಾಡಿ ದೇವರು ಎಂಬುವನೊಬ್ಬ ಇದ್ದಾನೆಯೇ ಅಥವಾ ವಿಡಂಬನೆಯೇ ಎಂಬ ಬಗ್ಗೆ ಚರ್ಚೆಯು ಮುಖ್ಯವಾಗುತ್ತದೆ. ಇದರ ಬಗ್ಗೆ ಸಮಾಜದಲ್ಲಿ ಒಮ್ಮತದ ಅಭಿಪ್ರಾಯವಿಲ್ಲ ಜೊತೆಗೆ ಆಧುನಿಕ ಕಾಲದಲ್ಲಿ ಯಾರು ದೇವರನ್ನು ಪ್ರತ್ಯಕ್ಷವಾಗಿ ಕಂಡ ನಿದರ್ಶನವಿಲ್ಲ. ಇವರು ಈ ರೀತಿಯ ನಂಬಿಕೆ ವ್ಯಕ್ತಪಡಿಸುವುದು ಸಂಪ್ರದಾಯದ ಮುಂದುವರಿಕೆಯಾಗಿ ಸಮಾಜವನ್ನು ಮತ್ತಷ್ಟು ನಂಬಿಕೆಗೆ ತಳ್ಳುವ ಪ್ರಯತ್ನವಾಗಿ ಮೇಲು ನೋಟಕ್ಕೆ ಕಾಣಿಸಿದರೂ ಈ ರೀತಿಯ ಮಾತುಗಳು ಕೃತಿಯಲ್ಲಿ ಮೂಡಿದ ವಿಡಂಬನೆಯಾಗಿದೆ. ಹೀಗಾಗಿ ದೇವರನ್ನೇ ನಂಬದ ಶಿವರಾಮಕಾರಂತ, ಎ.ಎನ್.ಮೂರ್ತಿರಾಯರು, ಬಿ.ಸಿ. ರಾಮಚಂದ್ರಶರ್ಮರಂತಹವರು ಸಾಹಿತ್ಯ ವಲಯದಲ್ಲಿರುವಂತೆ ನಿಜ ಬದುಕಿನಲ್ಲಿಯೂ ಬಾಳಲಿಲ್ಲವೆ? ಎಂಬುದು ಮುಖ್ಯವಾಗಿದೆ. ಅಷ್ಟೇ ಅಲ್ಲದೆ ಖಾಸಗಿ ಪತ್ತೆದಾರನ ಪಾತ್ರ ಸೃಷ್ಟಿಸಿದ ಲೇಖಕರು ಆ

"ಪತ್ತೆದಾರನನ್ನು "ದ್ವಾರಕಾದೀಶ್ವರ" ಎಂದು ಹೇಳುತ್ತಾ ದ್ವಾರಕಾಧೀಶ ಶಬ್ದದ ಕಲಿಯುಗವು ತದ್ಭವವೇ ಕೃಷ್ಣ. ಈ ಕೃಷ್ಣನ್ನು ಕಲಿಯುಗದಲ್ಲಿ ಅವತರಿಸಬೇಕಾದರೆ, ಪ್ರೈವೇಟ್ ಡಿಟೆಕ್ಟಿವ್ ಆಗಿಯೇ ಹುಟ್ಟಬೇಕು."[೪]

ಬ್ಲಾಕ್ ಮೇಲ್ ಮಾಡಿ ಅವನ(ಪೆರುಮಾಳ್) ನೌಕರಿಗೆ ದಕ್ಕೆ ಬರುವಂತೆ ಮಾಡಿ ನಾಣನ ಅಪರಾಧವನ್ನು ದೂರ ಮಾಡಿದ್ದಾರೆ. ನಾಣನನ್ನು ರಕ್ಷಿಸಲು ನಿಷ್ಠಾವಂತ ಅಧಿಕಾರಿಯನ್ನೇ ಅಪರಾಧಕ್ಕೆ ಸಿಕ್ಕಿಸುತ್ತಾರೆ. ಅಲ್ಲದೆ

"ನಾನು ಕಾಯ್ದೆ ಒಪ್ಪುವುದಿಲ್ಲ ಎಂದು ಹೇಳುವಾಗ ನಿಮಗೆ ಕೃಷ್ಣನ ಅವತಾರವೆಂದು ಬಾಸವಾಗುವುದಿಲ್ಲವೇ?"[೫]

ಎಂದು ಓದುಗರನ್ನೇ ಪ್ರಶ್ನಿಸುವ ಮೂಲಕ ಕೃತಿಯ ವಿಡಂಬನೆ ನಿಜವೆಂದು ತಿಳಿಯುತ್ತದೆ. ಒಟ್ಟಾರೆ ಏನೇ ಮಾಡಿದರೂ ಕೊನೆಗೆ ದೇವರ ಮೇಲೆ ಹೇಳುತ್ತಾ ತಾವು ಸಮಸ್ಯೆಯಿಂದ ಪಾರಾಗುವುದರ ಬಗ್ಗೆ ವಿಡಂಬನಾತ್ಮಕವಾಗಿ ಮೇಲ್ಕಂಡಂತೆ ಮಾತಾನಾಡಲು ಕಾರಣವಾಗಿದೆ.

ಕುವೆಂಪುರವರು 'ಕಲ್ಕಿ' ಪದ್ಯದಲ್ಲಿ ಕಲ್ಕಿಯ ಅವತಾರವಾಗಿ ನೋಡಿದ ಕೃಷ್ಣನಿಗೂ, ಪುಣೇಕರರು ಕಲ್ಪಿಸಿದ ಕೃಷ್ಣನ ಪಾತ್ರಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಕುವೆಂಪು ಹಾಗೂ ಬೇಂದ್ರೆ ಇಡೀ ವಿಶ್ವದಲ್ಲಿನ

ಅಸಮಾನತೆಯನ್ನು ದೂರ ಮಾಡಿ ಸಮಾನತೆಯ ಸಮಾಜ ಸ್ಥಾಪಿಸಬಯಸಲು ಕೃಷ್ಣನನ್ನು ಆಹ್ವಾನಿಸಿದರೆ, ಪುಣೇಕರರು ಬ್ರಾಹ್ಮಣ ಸಂಪ್ರದಾಯವನ್ನು ಉಳಿಸಲು ಕೃಷ್ಣನ ಅವತಾರವನ್ನು ಆರಾಧಿಸುತ್ತಾರೆ. ಬಹಳ ದೊಡ್ಡ ತಪ್ಪು ಮಾಡಿದ್ದರೂ, ಶಿಕ್ಷೆಯಿಂದ ಪಾರು ಮಾಡಿ ಪುನರ್ ಸ್ಥಾಪಿಸುತ್ತಾರೆ. ಅಲ್ಲದೇ ನಾಣನನ್ನು ಅರ್ಜುನನಿಗೆ ಹೋಲಿಸಿ "ಕಲಿಯುಗದಲ್ಲಿ ಮತ್ತೆ ಬೃಹನ್ನಳೆಯಾಗಿ ಜನಿಸುವಿ. ದ್ವಾರಕಾಧೀಶನು ಖಾಸಗಿ ಪತ್ತೆದಾರನಾಗಿ ಹುಟ್ಟುತ್ತಾನೆಂದು ಹೇಳಿ ನಾಣನನ್ನು 'ಅರ್ಜುನನಿ'ಗೆ ಹೋಲಿಸುತ್ತಾರೆ. ಅರ್ಜುನನ ವಿದ್ಯೆಯು ಸಹ ಎಲ್ಲಾ ಪಾಂಡವ ಕೌರವರನ್ನು ಮೀರಿಸಿತ್ತು ನಿಜ. ಆದರೆ ಕೃಷ್ಣನ ತಂತ್ರ ಹಾಗೂ ಏಕಲವ್ಯನನ್ನು ಮೀರಿಸಲಾಗದೆ, ಅನ್ಯಮಾರ್ಗದಿಂದ ಆತನ ಮೇಲೆ ವಿಜಯಸಾಧಿಸಿ ಏಕಲವ್ಯನ ಬದುಕನ್ನೇ ದುರಂತಮಯ ವಾಗುವಂತೆ ಮಾಡುವುದಲ್ಲದೆ ದ್ರೋಣಾಚಾರ್ಯರನ್ನು ಆ ಅಪರಾಧದಲ್ಲಿ ಸಿಕ್ಕಿಸುತ್ತಾರೆ. ಹೀಗಾಗಿ ನಾಣನ ಬದುಕನ್ನು ವಿಡಂಬಿಸಲು ಹೀಗೆ ಮಾಡಿದ್ದಾರೆ. ಆದರೆ ಗಂಗಾಮಾಯಿಯಲ್ಲಿಯು ಇನ್ನೊಬ್ಬರನ್ನು ಧಮನಿಸುವ ಆಧುನಿಕತೆ ಬೇಡವೆಂದು ರಾಘುಪ್ಪನ ಪಾತ್ರದ ಮೂಲಕ ಹೇಳಿದ ಕೃತಿಕಾರರು ಇಲ್ಲಿಯು ಕೂಡ ಈ ರೀತಿಯ ನಿಲುವು ತಾಳುವುದರ ಮೂಲಕ ನಾಣನ ವಿದ್ಯೆಯನ್ನು ಅರ್ಜುನನ ವಿದ್ಯೆಯ ಸಮಾನಕ್ಕೆ ಹೋಲಿಸಲು ಸಾಧ್ಯವಿಲ್ಲದಿದ್ದರೂ, ಝುಬೇದಾಳನ್ನು ಮೀರಿಸಲು ಆಗದೇ ನಾಣನು ಕೂಡ ಅನ್ಯಮಾರ್ಗಕ್ಕೆ ಇಳಿಯುವುದನ್ನು ಕಾಣುತ್ತೇವೆ. ಹೀಗಾಗಿ ಈ ಹೋಲಿಕೆಯೂ ಸಮಂಜಸವೆನ್ನಿಸಬಹುದು. ಹೀಗಾಗಿ ಏನೇ ಅಪರಾಧ ಮಾಡಿದರೂ ಮತ್ತೆ ಪರಿಹಾರವೆಂಬಂತೆ ದೇವರ ಮೊರೆ ಹೋಗುವುದನ್ನು ಕೃತಿಯು ಹೋಲಿಕೆ ನೀಡುವುದರ ಮೂಲಕ ವಿಡಂಬಿಸುತ್ತಿದೆ.

ಸಂಪ್ರದಾಯವನ್ನು ಬಿಟ್ಟು ಆಧುನಿಕ ಬದುಕನ್ನು ಪ್ರವೇಶಿಸಿ ನಾಣನನ್ನು ಚತುರತೆಯಿಂದ ಅಪರಾಧವೆಲ್ಲವನ್ನು ದೂರ ಮಾಡಿಕೊಂಡು ಮತ್ತೆ ನಾಣ ಕಟ್ಟಾ ಬ್ರಾಹ್ಮಣ ಸಂಪ್ರದಾಯವಾದಿಯಗಿಯೇ ರೂಪಪಡೆಯಲು ಕೃತಿಕಾರರು ಮಾಡುತ್ತಿರುವ ಿಡಂಬನೆಯ ಮನಃಸ್ಥಿತಿಯೇ ಕಾರಣ ಎಂದು ಮೇಲ್ಕಂಡ ಅಂಶಗಳಿಂದ ತಿಳಿದುಬರುತ್ತದೆ.

ಕಾದಂಬರಿಕಾರರು ಆಧುನಿಕತೆಯನ್ನು ಎಲ್ಲೂ ಟೀಕಿಸುವುದಿಲ್ಲ. ಆಧುನಿಕತೆಯು ಭಾರತೀಯ ಸಮಾಜವನ್ನು ಪ್ರವೇಶಿಸುವುದನ್ನು ತುಂಬು ಮನಸ್ಸಿನಿಂದ ಸ್ವಾಗತಿಸುತ್ತಾರೆ. ಆದರೆ ಮೂಲ ಸಂಸ್ಕೃತಿ, ಸಂಪ್ರದಾಯವನ್ನು ಬದಲಾಯಿಸುವ ಆಧುನಿಕತೆಯು ಇವರಿಗೆ ಬೇಡವಾಗಿದೆ. ಹೀಗಾಗಿ ಪುನಃ ಸಂಪ್ರದಾಯವನ್ನೇ ಉಳಿಸುವ ವಕ್ತಾರರಾಗಿ ಗೋಚರಿಸುತ್ತಾರೆ. ಇದಕ್ಕೂ ಒಂದು ಕಾರಣವಿದೆ.

ಭಾರತೀಯ ಸಮಾಜದಲ್ಲಿ ಆಧುನಿಕತೆ ಪ್ರವೇಶಿಸಬೇಕು. ಆದರೆ ನಾಣನು ಪ್ರದರ್ಶಿಸಿದ ಆಧುನಿಕತೆಯು ಲೇಖಕರಿಗೆ ಬೇಡವಾಗಿದೆ. ನಾಣನ ಪ್ರಾರಂಭಿಕ ಹಂತಕ್ಕೂ, ನಂತರದ ಹಂತಕ್ಕೂ ಇರುವ ಸ್ಪಷ್ಟ ವ್ಯತ್ಯಾಸವೆಂದರೆ, ನೃತ್ಯ ಗಾಯನ ಕಲಿಯುಬೇಕೆಂದು ಬಯಸಿದ ಈತನು ಹಣದ ಅತಿಮೋಹಕ್ಕೆ ಗುರಿಯಾಗಿ ನೃತ್ಯ ಗಾಯನವನ್ನೇ ಬಂಡವಾಳವನ್ನಾಗಿಸಿಕೊಂಡು 'ಹಣ' ಸಂಪಾದನೆಗೆ ಮಹತ್ವಕೊಡುತ್ತಾನೆ.

[illegible]

ಪರಿಣಾಮವಾಗಿ ಮಾನವ ಸಂಬಂಧಗಳನ್ನು ಕಡಿದುಹಾಕುತ್ತಾನೆ. ಹೀಗಾಗಿಯೇ ರಾಧಕ್ಕನ ಕಂಪನಿಮಾಲೀಕರು. ಝುಬೇದಾ ಮತ್ತಿತರರು ತೋರುವ ಪ್ರೀತಿ ವಾತ್ಸಲ್ಯಗಳಿಂದ ದೂರ ಸರಿಯುತ್ತಾನೆ. ಇದೇ ಲೇಖಕರಿಗೆ ಬೇಡದ ವಿಚಾರವಾಗಿ ಪರಿಗಣಿಸಿರುವುದು. ಅದಕ್ಕಾಗಿಯೇ ನಾಣ ಕೊನೆಗೆ ವಿವಾಹವಾಗುವುದರ ಮೂಲಕ ಮತ್ತೆ ಸಾಮಾಜಿಕ ಸಂಬಂಧಗಳ ಬಲೆಯೊಳಗೆ ಸಿಕ್ಕಿ ಬೀಳುತ್ತಾನೆ. ಈ ರೀತಿಯ ಆಧುನಿಕತೆ ಲೇಖಕರಿಗೆ ಬೇಕಾಗಿದೆ. ಅಂದರೆ ಗೃಹಸ್ಥ ಜೀವನವನ್ನು ಒಬ್ಬ ವ್ಯಕ್ತಿ ಪ್ರವೇಶಿಸಿದರೆ ಆತನ ಚಟುವಟಿಕೆಗಳ ದಿಕ್ಕು ಬದಲಾಗುತ್ತದೆ ಎಂಬ ತೀರ್ಮಾನಕ್ಕೆ ಬಂದ ಪರಿಣಾಮ ಯುವಕರಿಗಿಂತ ಗೃಹಸ್ಥ ಜೀವನದ ಹಿರಿಯರ ತಲೆಮಾರಿಗೆ ಮಹತ್ವ ನೀಡುತ್ತಾರೆ.

> "ವಿವಾಹವು ತಾರಣ್ಯಕ್ಕೂ ಪ್ರೌಢಾವಸ್ಥೆಗೂ ಇರುವ ಇಳಿಜಾರು ಸೇತುವೆ. ವಿವಾಹವಾದ ಮೇಲೆ ಬದಲಾಗದ ವ್ಯಕ್ತಿ ಅಪರಿಪೂರ್ಣವೆಂದೇ ಹೇಳಬೇಕು. ಹೊಸ ಆಸೆ ಆಕಾಂಕ್ಷೆ ಆದರ್ಶಗಳು ನಾಲ್ಕಾರು ವರ್ಷಗಳಲ್ಲಿ ತಲೆದೂರಿ ತಿಳಲಿನ ಕಸುಕನ್ನು ಮೆಲ್ಲನೆ ಹುಳಿಮಧುರ ಗೊಳಿಸತೊಡಗುತ್ತದೆ."[೬]

ಹೀಗಾಗಿ ನಾಣನನ್ನು ಅಂತಿಮವಾಗಿ ಗೃಹಸ್ಥಶ್ರಮಕ್ಕೆ ಸಿಲುಕಿಸಿ ಆತನ ವ್ಯಕ್ತಿತ್ವವೇ ಬದಲಾಯಿತ್ತೆಂದು ಹೇಳುವುದು ಸಮಂಜಸವಲ್ಲ. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೇ ಹಾಗೂ ಬೆಳೆದ ಸಿರಿ ಮೊಳಕೆಯಲ್ಲಿ' ಎಂಬ ನುಡಿಗಟ್ಟುಗಳು ನಮ್ಮ ಪರಿಸರದಲ್ಲಿ ಬಳಕೆಯಲ್ಲಿವೆ. ಇದೊಂದು ಅರೆ ವಾಸ್ತವ. ಹೀಗಾಗಿ ನಾಣನ ವ್ಯಕ್ತಿತ್ವ ಇದರಿಂದ ಬದಲಾಯಿತು ಎಂದು ಹೇಳುವುದು ಸರಿಯೆ? ಹಾಗೂ 'ಗಂಗವ್ವ ಗಂಗಾಮಾಯಿ'ಯಲ್ಲಿ ಗೃಹಸ್ಥನಾದ ರಾಘುಪ್ಪ ಮಾಡುವ ಚಟುವಟಿಕೆಗಳು ಯಾವ ರೀತಿಯದ್ದಾಗಿರುತ್ತದೆ ಎಂಬುದನ್ನು ಸ್ಪಷ್ಟ ನಿದರ್ಶನಗಳೊಂದಿಗೆ ಹೇಳುತ್ತಿರುವುದನ್ನು ನೋಡಿದಾಗ ಈ ಬಗ್ಗೆ ಲೇಖಕರಲ್ಲಿಯೇ ದ್ವಂದ್ವವಿದೆ ಎನ್ನಿಸುವುದು ಸಹಜ. ಸಾಹಿತ್ಯಕಾರರ ನಿಲುವು ಅವರ ಒಟ್ಟು ಸಾಹಿತ್ಯ ರಚನೆಯಲ್ಲಿ ಒಂದೇ ರೀತಿಯಾಗಿರಬೇಕು ಎಂದು ಬಯಸುವುದು ತಪ್ಪು. ಆದರೆ ಆತ ನೀಡುವ ಒಟ್ಟಾರೆ ದಾರ್ಶನಿಕತೆಯೂ ಅಂತಿಮವಾಗಿ ಒಂದೇ ಆಗಿರಬೇಕೆಂದು ಸಮಾಜ ಬಯಸುವುದು ಸಹಜ ತಾನೇ?

ಸಾಹಿತ್ಯವೂ 'ಜನ ಜೀವನದ ಪ್ರತಿಬಿಂಬ ಹಾಗೂ ಗತಿಬಿಂಬ' ಎಂಬ ಮಾತು ಬಳಕೆಯಲ್ಲಿದೆ. ಹೀಗಾಗಿ ಅನುಭವ ನಮ್ಮದ್ದಾಗಿದ್ದರೆ, ಅಂತಹ ಅನುಭವವನ್ನು ಹೇಳುವ ರೀತಿಯೂ ನಮ್ಮದಾಗಿರಬೇಕು. ಪಾಶ್ಚಾತ್ಯರ ಸಮಾಜದ ಚಿಂತನೆಗಳನ್ನು ವಿಮರ್ಶೆಗೆ ಒಳಪಡಿಸದೇ ನೇರವಾಗಿ ತಂದು ಭಾರತೀಯ ಸಮಾಜಕ್ಕೆ ಅನ್ವಯಿಸಲು ಅರ್ಥೈಸಲು ಸಾಧ್ಯವಿಲ್ಲ ಎಂಬ ಸಂದೇಶವನ್ನು ಕೃತಿ ಒಟ್ಟಾರೆಯಾಗಿ ಧ್ವನಿಸಿರುವುದು ಮಾತ್ರ ಸಮಂಜಸ.

ನವೋತ್ತರ ಎಕ್ಸಿಸ್ಟೆಂಶಿಯಲಿಸ್ಟ್ 'ಪತ್ತೇದಾರಿ ಕಾದಂಬರಿ' ಎಂದು ಹೇಳುವುದರ ಮೂಲಕ ಇತರರನ್ನು ಟೀಕಿಸಲು ಸಂದರ್ಭಗಳನ್ನು ಸೃಷ್ಟಿಸಿಕೊಳ್ಳುವ ಕಾದಂಬರಿಕಾರರು ಒಂದು ಕಾಲಕ್ಕೆ ನಾಲ್ಕು ಪುಸ್ತಕ

[illegible]

> [illegible]

[illegible]

[illegible]

[illegible]

ಬರೆದು ಮಾರಾಟಮಾಡಿ ಹಣ ಸಂಪಾದಿಸುವ ಆಸೆಯು ಕೆಲವರಲ್ಲಿದೆ ಎಂದು ಹೇಳುವುದು ಇವರ ವೈಯಕ್ತಿಕ ವಾದರೂ, ಹಲವಾರು ಪುಸ್ತಕಗಳನ್ನು ಬರೆದ ಮಾತ್ರಕ್ಕೆ ಹಣ ಸಂಪಾದಿಸುವುದಕ್ಕಾಗಿಯೇ ಬರೆಯುತ್ತಾರೆ ಎಂಬುದು ಲೇಖಕರ ಸಂಕುಚಿತ ಭಾವನೆಗೆ ಕಾರಣವಾದರೆ, ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ, ತೇಜಸ್ವಿ, ದೇವನೂರ ಮಹಾದೇವ, ಆಮೂರ, ಕುರ್ತಕೋಟಿ ಮುಂತಾದವರ ಸಾಹಿತ್ಯ ಕೃಷಿಯನ್ನು ನೋಡಿದಾಗ ಇವರ ಅಭಿಪ್ರಾಯ ಓದುಗರಿಗೆ ಒಂದು ಮಿತಿಯಾಗಿ ಕಾಣಿಸುತ್ತದೆ.

"ಗಂಗವ್ವ ಗಂಗಾಮಾಯಿ"ಯ ಕೆಲವು ಅಂಶಗಳು ನಟನಾರಾಯಣಿಯಲ್ಲಿಯೂ ಮುಂದುವರಿಸು ತ್ತಾರೆ. ಗಂಗವ್ವ ಕಿಟ್ಟಿಯನ್ನು ಸಾಕಿ ಬೆಳೆಸಿ ಸಂಸಾರಸ್ಥನನ್ನಾಗಿ ಮಾಡಲು ಶ್ರಮಪಟ್ಟು ಯಶಸ್ವಿಯಾದರೆ, ಇಲ್ಲಿ ರಾಧಕ್ಕ ನಾಣನನ್ನು ತನ್ನ ಮಗನಂತೆ ಸಾಕಿ ಬೆಳೆಸಿ, ಆತನನ್ನು ಕೊನೆಯಲ್ಲಿ ಸಂಸಾರಸ್ಥನನ್ನಾಗಿ ಮಾಡುತ್ತಾಳೆ. ಹೀಗಾಗಿ ಎರಡರಲ್ಲಿಯೂ ತಾಯಿ ಪ್ರೀತಿಯ ಕರುಳುಬಳ್ಳಿಯ ಸಂಬಂಧ ಮಾತ್ರ ಭಿನ್ನವಾಗಿಲ್ಲ. ಹೀಗಾಗಿಯೇ ನಾಣನು ಎಷ್ಟೇ ಅಪರಾಧ ಮಾಡಿ ಬಂದರೂ ಆತನನ್ನು ಮೊದಲಿನಂತೆಯೇ ಸ್ವೀಕರಿಸುತ್ತಾಳೆ. ಮೆಹಬೂಬಳ ಪಾತ್ರ ಸೃಷ್ಟಿಸಿದ ಲೇಖಕರು, ಇಲ್ಲಿ ಝುಬೇದಾಳ ಪಾತ್ರ ಸೃಷ್ಟಿಸುತ್ತಾರೆ. ಈಕೆಯೂ ಕೂಡ ಮೆಹಬೂಬಳ ವ್ಯಕ್ತಿತ್ವವನ್ನೇ ಹೊಂದಿದ್ದವಳು. ಆದರೆ ಈ ಎರಡು ಪಾತ್ರಗಳನ್ನು ಸ್ವಾಭಾವಿಕ ಚಿತ್ರಿಸುವಲ್ಲಿ ವಿಫಲತೆಯನ್ನು ಅನುಭವಿಸಿ, ಅರೆಬರೆಯ ಪಾತ್ರವಾಗಿ ಮಾಡಿದ್ದಾರೆ. ಒಂದು ಜನಾಂಗದ ವ್ಯಕ್ತಿಗಳನ್ನೇ ಈ ಪಾತ್ರಗಳಿಗೆ ಬಳಸಿರುವುದು ಮಾತ್ರ ದುರಂತ. ಹಾಗೂ ಮುಸ್ಲಿಂ ಸಂವೇದನೆಯನ್ನು ಸ್ವಾಭಾವಿಕವಾಗಿ ಚಿತ್ರಿಸುವಲ್ಲಿ ಎಲ್ಲೋ ಒಂದು ಕಡ ವಿಫಲವಾಗಿರುವುದು ಕಂಡುಬರುತ್ತದೆ. ಹೀಗಾ ಮುಸ್ಲಿಂ ಸಂವೇದನೆಯ ಅನುಭವ ಕೃತಿಕಾರರಿಗೆ ಸಂಪೂರ್ಣವಾಗಿ ಆಗಿಲ್ಲ ಎಂಬ ನಿರ್ಣಯಕ್ಕೆ ಬರಬೇಕಾಗುತ್ತದೆ. ಹೀಗಾಗಿ ಅವರೇ ಹೇಳಿದ ಅನುಭವ ನಮ್ಮದಾಗಿದ್ದರೆ, ಅದನ್ನು ಹೇಳುವ ರೀತಿಯು ನಮ್ಮದಾಗಿರಬೇಕು ಎಂಬ ನಿಲುವು ಇಲ್ಲಿಯೇ ವಿಫಲವಾಗಿದೆ. ಗಂಗವ್ವ, ರಾಧಕ್ಕ ಪುರುಕುತ್ಸ ನಿರಿಯಂತಹ ಪಾತ್ರ ಸೃಷ್ಟಿಸಿದ ಲೇಖಕರಿಗೆ ಮೆಹಬೂಬ, ಝುಬೇದಾಳ ಪಾತ್ರ ಸೃಷ್ಟಿಸುವಾಗ ಅನುಭವದ ಕೊರತೆ ಕಾಡಿದೆ ಎಂಬುದನ್ನು ಗುರುತಿಸಬಹುದು. ಒಟ್ಟಾರೆ ಇಲ್ಲಿ ಬರುವ ಸ್ತ್ರೀ ಪಾತ್ರಗಳು "ಪುರುಷ" ಪಾತ್ರಗಳಿಗೆ ಹೋಲಿಸಿದಾಗ ಉದಾತ್ತವಾಗಿವೆ. ಸ್ತ್ರೀಯ ಅಂತಃಕರಣವನ್ನು ಎತ್ತಿಹಿಡಿದಿವೆ. ಇದು ಪುಣೇಕರರಿಗೆ ಸ್ವಾಭಾವಿಕವೇನೊ ಎನ್ನಿಸುತ್ತದೆ.

ಇದೊಂದು ಪತ್ತೆದಾರಿ ಕಾದಂಬರಿಯಾಗಿರುವುದರಿಂದ ಓದುಗರರ ಮನಸ್ಸನ್ನು ಸಂಪೂರ್ಣವಾಗಿ ಸೆಳೆಯುತ್ತದೆ. ಒಂದೊಮ್ಮೆ ಸಂಬಂಧಕ್ಕೆ ಬಿರುಕು ಬಂದು ಎಂದೆನ್ನಿಸಿದಾಗ ನೇರವಾಗಿ ಲೇಖಕರೇ ಓದುಗರನ್ನು ಉದ್ದೇಶಿಸಿ ಮಾತಿಗಿಳಿದಿದ್ದಾರೆ. ಇದು ಒಂದು ತಂತ್ರವೇ ಸರಿ. ಶಿಷ್ಟವಾದ ಸಂಭಾಷಣೆಯು ಸರಳ ಭಾಷೆಯೊಂದಿಗೆ ಶಿಷ್ಟ ಕಥನ ಕ್ರಮದಿಂದ ಕೃತಿಯು ಓದುಗರನ್ನು ತನ್ನತ್ತ ಸೆಳೆಯುತ್ತದೆ. ಆದರೆ ಅತಿಯಾಗಿ ತಮ್ಮ ವಿಚಾರಗಳನ್ನೇ ಏಕಮುಖವಾಗಿ ಓದುಗರ ಮೇಲೆ ಹೇರುವ ಪ್ರಯತ್ನ ಮಾಡಿದ್ದಾರೆ.

ಲೇಖಕರಿಗೆ ಭಾರತೀಯ ಸಮಾಜ ಬದಲಾಗಬೇಕೆಂಬ ಆಶಯವಿರುವುದು ತೆಳುವಾಗಿ ಗೋಚರಿಸು ತ್ತದೆ. ಆದರೆ ಆ ಬದಲಾವಣೆಗೆ 'ಹಣ'ವನ್ನೇ ಪರಿಗಣಿಸಿದಾಗ ಹಣವೇ ಪ್ರಭುತ್ವ ಸ್ಥಾಪಿಸಿ ಸಾಮಾಜಿಕ

ಸಂಬಂಧಗಳು ಹಾಗೂ ಸಾಮಾಜಿಕ ಪರಿಸ್ಥಿತಿ ಹೇಗಾಗುತ್ತದೆ? ಎಂಬುದನ್ನು ತಿಳಿಸಲು ಬಯಸಿದ್ದಾರೆ. ಮನುಷ್ಯ-ಮನುಷ್ಯನ ನಡುವೆ ಮಾನವೀಯ ಹಾಗೂ ಕುಟುಂಬದಂತಹ ಪ್ರಾಥಮಿಕ ಸಂಬಂಧಗಳಿರಬೇಕು. ಮಾನವೀಯ ಸಂಬಂಧಗಳನ್ನು ದೂರಮಾಡಿದ ಬದಲಾವಣೆಯು ನಮಗೆ ಬೇಡವಾಗಿದೆ. ಹಣದ ಮೋಹಪರರಾಗುವ ಸಂಸ್ಕೃತಿಯು ಬೇಕಾಗಿಲ್ಲ. ಸಮಾಜದಲ್ಲಿ ಆಧುನಿಕತೆ ಎಂಬ ಹೆಸರಿನಿಂದ ವ್ಯಕ್ತಿ-ವ್ಯಕ್ತಿಯ ನೈತಿಕತೆಗೆ ಹಣವನ್ನೇ ಪ್ರಮಾಣವಾಗಿರಿಸುತ್ತಿರುವುದು ಮಾತ್ರ ದುರಂತ. ಈ ಹಣದಿಂದಾಗಿಯೇ ಮಾನವ ಸಂಬಂಧಗಳು ಸತ್ತು ಹುಟ್ಟುತ್ತವೆ. ಹುಟ್ಟಿ ಸಾಯುತ್ತಿವೆ.

ಈ ಹಣದಿಂದಾಗಿಯೇ ನಾಣನ ಬದುಕಿನಲ್ಲಿ ಆ ರೀತಿಯ ಬದಲಾವಣೆಯು ಕಂಡುಬಂದು ಆತ ಅಪರಾಧಿಯಾಗಿದ್ದು, ಹೀಗಾಗಿ ಆಧುನಿಕತೆ ಎಂದಾಗ ನಾಣನ ರೀತಿಯ ಬದಲಾವಣೆಯಲ್ಲ, 'ಗಂಗವ್ವ ಗಂಗಾಮಾಯಿಯ' ರಾಘುಪ್ಪನ ರೀತಿಯ ವ್ಯಕ್ತಿತ್ವವಲ್ಲ ಈ ಎರಡು ರೀತಿಯ ಬದಲಾವಣೆಗಳು ಭಾರತೀಯ ಸಮಾಜಕ್ಕೆ ಕಾಲಿರಿಸಿದರೆ, ದಿನನಿತ್ಯ ಕಹಿ ಘಟನೆಗಳ ತಾಣವಾಗುವುದರಲ್ಲಿ ಆಶ್ಚರ್ಯವಿಲ್ಲ ಜೊತೆಗೆ ಇವರು ಬಯಸುವುದು ಗಂಗವ್ವ, ದೇಸಾಯಿ ಪುರುಕುತ್ಸಾನಿಯ ವ್ಯಕ್ತಿತ್ವದ ರೀತಿಯ, ನೈತಿಕ ಮೌಲ್ಯಗಳಿಂದ ಕೂಡಿ ಸಂಬಂಧಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಬಯಸುವ ಆಧುನಿಕತೆಯನ್ನು. ಇದಕ್ಕಾಗಿಯೇ ಇವರು ವೇದಕಾಲದ ಆಚಾರ ವಿಚಾರಗಳಿಗೆ ಹೋಗಿ ಅಲ್ಲಿಯ ಸಂಸ್ಕೃತಿಯನ್ನು ಪರಿಚಯಿಸಿ ಸಮಕಾಲೀನ ಸಮಾಜಕ್ಕೆ ಅನ್ವಯವಾಗುವ ರೀತಿಯಲ್ಲಿ 'ಅವಧೇಶ್ವರಿ' ಕೃತಿ ರಚಿಸಿರುವುದು.

ಒಟ್ಟಿನಲ್ಲಿ ಕನ್ನಡ ಕಾದಂಬರಿಯ ಲೋಕದಲ್ಲಿ ಗಂಗವ್ವ ಗಂಗಾಮಾಯಿಯಂತಹ ಕೃತಿ ರಚಿಸಿದ ಕೃತಿಕಾರರು ತುಸುಭಿನ್ನವಾಗಿ ಈ ಕೃತಿ ರಚಿಸಿರುವುದು ಅವರ ಸೃಜನಶೀಲತೆಗೆ ಸಾಕ್ಷಿ ಒಂದು ಕಡೆಯಾದರೆ, ಭಾರತೀಯ ಸಮಾಜದಲ್ಲಿ ವ್ಯಕ್ತಿ ಏನೇ ಮಾಡಿದರೂ ದೇವರ ಮೇಲೆ ಆರೋಪಿಸುವ ಮೂಲಕ ಮತ್ತೆ ಮತ್ತೆ ದೇವರೇ ಪರಿಹಾರವೆಂದು ತಿಳಿದು ತಪ್ಪು ಮಾಡುತ್ತಾ ಹೋಗುವುದನ್ನು ನಾಣನ ಪಾತ್ರದಲ್ಲಿ ತೋರಿಸಿಕೊಟ್ಟಿದ್ದಾರೆ.

ಟಿಪ್ಪಣಿಗಳು

೧. ಶಂಕರಮೊಕಾಶಿ ಪುಣೇಕರ, ನಟನಾರಾಯಣಿ, ಪು.೨೨

೨. ಅದೇ, ಪು.೯

೩. ಅದೇ, ಪು.೪೦

೪. ಅದೇ, ಪು.೧೭೬

೫. ಅದೇ, ಪು.೧೭೪

೬. ಅದೇ, ಪು.೧೭೧

ಅಧ್ಯಾಯ ೬

ಅವಧೇಶ್ವರಿ-ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷ

೬

'ಅವಧೇಶ್ವರಿ' - ಸಂಪ್ರದಾಯ ಹಾಗೂ ಆಧುನಿಕತೆಗಳ ಸಂಘರ್ಷ

ಯಾವುದೇ ಕಾಲದ ರಾಜಕೀಯಕ್ಕೂ ಸಲ್ಲಬಹುದಾದ 'ಅವಧೇಶ್ವರಿ'ಯು ಪ್ರಮುಖವಾಗಿ ವೇದಗಳ ಕಾಲದಲ್ಲಿನ ರಾಜಕೀಯ ಪರಿಸ್ಥಿತಿಯನ್ನು ವಸ್ತುವಾಗಿ ಒಳಗೊಂಡ ಕಾದಂಬರಿ, ಹೆಣ್ಣಿನ ಸಾಮಾನ್ಯ ಸೃಜನಶೀಲ ವ್ಯಕ್ತಿತ್ವವೂ ಇತರ ಕ್ಷೇತ್ರಗಳಂತೆ ಹೇಗೆ ರಾಜಕೀಯ ಕ್ಷೇತ್ರಗಳಲ್ಲಿಯೂ ಸೋಪಜ್ಞತೆಯನ್ನು ಹುಟ್ಟುಹಾಕಬಲ್ಲದು ಹಾಗೂ ಪುರುಷರಿಗೆ ಸರಿ ಸಮಾನವಾಗಿ ನಿಂತು ಶಕ್ತಿ ಸಾಮರ್ಥ್ಯದ ಮೂಲಕ ಹೇಗೆ ಸವಾಲೆಸೆಯ ಬಲ್ಲದೆಂಬುದನ್ನು ನಾವು ಇಲ್ಲಿ ನೋಡಬಹುದು.

ತಮ್ಮ ಸೃಜನಶೀಲ ವ್ಯಕ್ತಿತ್ವವನ್ನು ಪುಣೇಕರರು ಮುಖ್ಯವಾಗಿ ಸಂಶೋಧನೆಯತ್ತ ತೊಡಗಿಸಿಕೊಂಡ ಪರಿಣಾಮವಾಗಿ, ಹರಪ್ಪ ಮೆಹೆಂಜಾದಾರೊ ಸಂಸ್ಕೃತಿಯನ್ನು ಹುಡುಕುತ್ತ ದೊರೆತ ಋಗ್ವೇದದ ಸೂಕ್ತಗಳು, ಇವುಗಳ ಅಧ್ಯಯನದಲ್ಲಿ ಕಂಡುಕೊಂಡ ಕೆಲವು ಮುಖ್ಯಾಂಶಗಳು, ಬೇಂದ್ರೆಯವರೊಂದಿಗೆ ಮಾತಿನ ಮೋಡಿಯ ಸರಸದಲ್ಲಿ ದೊರೆತ ಕೆಲವು ಮಹತ್ವದ ಸುಳಿವುಗಳು, ಅಷ್ಟೇ ಅಲ್ಲದೆ ಜನಾಂಗ ಮೂಲ ಅಧ್ಯಯನ ಮುಂತಾದ ಸೃಜನಶೀಲ ಅಂಶಗಳಿಂದ ಈ ಕಾದಂಬರಿಯನ್ನು ರಚಿಸಿದ್ದಾರೆ. ಆದರೂ "ಕನ್ನಡ ಕೇಂದ್ರ ಪರಂಪರೆಗೆ ದನಿಕೂಡಿಸುವ ಈ ಯತ್ನವನ್ನು ಕಾದಂಬರಿಯಾಗಿಯೇ ಓದಬೇಕು. ಸಂಶೋಧನೆಯೆಂದಲ್ಲ" ಎಂದು 'ಅವಧೇಶ್ವರಿ ಕೃತಿಯ ಮುನ್ನಡಿ'(ಪು.೧೦)ಯಲ್ಲಿಯೇ ವಿನಂತಿಸಿಕೊಂಡಿರುವುದು ಧ್ವನಿಪೂರ್ಣವಾಗಿದೆ. ಇದು ಪುಣೇಕರರ ಒತ್ತಾಸೆ ಹಾಗೂ ಮುಂದೆ ಕೃತಿ ತಾಳಬಹುದಾದ ನಿಲುವುಗಳ ಬಗ್ಗೆ ಸೂಚ್ಯವಾಗಿ ಸೂಚನೆಯನ್ನು ನೀಡುವಂತಿದೆ.

ಕಾದಂಬರಿಯ ಕೇಂದ್ರ ಅಯೋಧ್ಯೆ ಹಾಗೂ ಸುತ್ತಮುತ್ತಲ ಪ್ರದೇಶ ಅಣ್ಣ ತಂಗಿಯನ್ನು ಮದುವೆಯಾಗುವ ಪ್ರಸ್ತಾಪದೊಂದಿಗೆ ಕಾದಂಬರಿ ಪ್ರಾರಂಭವಾಗುತ್ತದೆ. ಇದು ಕಾದಂಬರಿಯಲ್ಲಿ ನಡೆಯುವ ಮುಂದಿನ ಎಲ್ಲಾ ಆಗು-ಹೋಗುಗಳಿಗೂ ಕಾರಣಬಿಂದುವಾಗಿ ಕ್ರಿಯಾತ್ಮಕಗೊಳ್ಳುತ್ತದೆ.

ರಾಜಮನೆತನದ ರಕ್ತ ಪರಿಶುದ್ಧತೆಯನ್ನು ಕಾಪಾಡುವ ಹೆಸರಿನಲ್ಲಿ ಈಜಿಪ್ಟ್ ರಾಜಮನೆತನದಲ್ಲಿ ಅಣ್ಣ-ತಂಗಿಯನ್ನೇ ವಿವಾಹವಾಗುವ ಸಂಪ್ರದಾಯವಿತ್ತೆಂದು ತಿಳಿದ ಅಯೋಧ್ಯೆಯ ಮಾಂದಾತ(ಪುರುಕುತ್ಸನ ತಂದೆ) ಮಹಾರಾಜನು. ತನ್ನ ಸಂಬಂಧಿ ಪೆರುದೊರೆಯ ಸಲಹೆಯ ಮೇರೆಗೆ ಮಗ ಪುರುಕುತ್ಸನ ಮದುವೆಯನ್ನು ಮಗಳಾದ ಪುರುಕುತ್ಸಾನಿಯೊಂದಿಗೆ, ಪುರಜನರ ತಿರಸ್ಕಾರದ ನಡುವೆಯೂ ಮಾಡುತ್ತಾನೆ.

[illegible]

[illegible]

[illegible]

[illegible]

[illegible]

ತನ್ನ ಬದುಕಿನ ಜೊತೆಗಾರರನ್ನು ಆರಿಸಿಕೊಳ್ಳಲು ಸ್ವಾತಂತ್ರ್ಯವಿಲ್ಲದಿರುವ ಪುರುಕುತ್ಸ ಮಹಾರಾಜನು ಪುರುಕುತ್ಸಾನಿಯನ್ನು ತನ್ನ ತಂಗಿ ಎಂಬುದನ್ನು ಕೊನೆಯವರೆಗೂ ಮರೆಯಲು ಸಾಧ್ಯವಾಗದೆ. ಮನುಷ್ಯ ಸಾಮಾನ್ಯ ಸಹಜ ಲೈಂಗಿಕ ಸಂಬಂಧದಿಂದ ವಂಚಿತರಾಗಿ, ಅಂತಸ್ತು, ಅಧಿಕಾರ, ಹಣ ಎಲ್ಲವೂ ಇದ್ದು ಸಂಸಾರ ಸುಖದಿಂದಲೂ, ರಾಜವಂಶ ಸಂತಾನ ಪಡೆಯುವುದರಿಂದಲೂ ವಂಚಿತರಾಗುತ್ತಾರೆ. ಆದರೆ ರಕ್ತ ಸಂಬಂಧಿಗಳನ್ನು ಲಗ್ನವಾಗುವುದು ವೇದಗಳ ಕಾಲದ (ಅಯೋಧ್ಯೆಯ) ಸಾಮಾಜಿಕ ಪದ್ಧತಿಯಾಗಿರಲಿಲ್ಲ. ಉದಾಹರಣೆಗೆ ಪುರುಕುತ್ಸನ ತಂದೆ ತಾಯಿಯ ವಿವಾಹವೂ ಕೂಡ ವರ್ಣಸಂಕರದಿಂದ ಆದುದ್ದೆಂದು ಕಾದಂಬರಿಯಿಂದ ತಿಳಿದುಬರುತ್ತದೆ. ಈ ಪುರುಕುತ್ಸನ ಮಾತಾಪಿತೃಗಳಿಗೆ ರಾಜಮನೆತನದ ರಕ್ತ ಪರಿಶುದ್ಧತೆಯ ವಿಚಾರ ಮೂಡಲು ಅನ್ಯರ ಪ್ರಭಾವೇ ಕಾರಣ. ಏಕೆಂದರೆ ಈಜಿಪ್ಟ್ ಹಾಗೂ ಪೆರು ದೊರೆಯ ಸಂಪರ್ಕ ಆತ್ಮೀಯವಾಗಿದ್ದ ಪರಿಣಾಮ ಇವರ ಒಪ್ಪಿಗೆಯನ್ನು ಕೇಳಬೇಕಾಗಿ ಬಂದಿತ್ತು. ಅಲ್ಲದೆ ಪುರುಕುತ್ಸಾನಿ ಬಾಲ್ಯದಲ್ಲಿ ತುಸು ಗಂಡುಬೀರಿ ಎಂದು ಕೃತಿಂಯಲ್ಲಿಯೇ ವರ್ಣಿತವಾಗಿರುವುದರಿಂದ ಈಕೆಯನ್ನು ಹೊಸ ಸಂಬಂಧದೊಂದಿಗೆ ಲಗ್ನ ಮಾಡಿದರೆ, ಈಕೆ ಅಲ್ಲಿಯೂ ಹೀಗೆ ವರ್ತಿಸಿ ಕುಟುಂಬದ ಸಂಬಂಧಗಳಲ್ಲಿ ಸಮರಸತೆ ಸಾಧ್ಯವಾಗಿರಲಾರದು ಎಂಬ ಅನುಮಾನ ಮಾಂದಾತ ಮಹಾರಾಜನಿಗೆ ಬಂದಿರಬಹುದು.

ಆದರೆ, ಶಂಬರಾಸುರ ಹೇಳುವ ಮಾತುಗಳು ಮಾತ್ರ ರಕ್ತಸಂಬಂಧ ವಿವಾಹವಿತ್ತೆಂದು ನಿರೂಪಿಸುತ್ತವೆ. ಆದರೆ, ಈತ ಆಯೋಧ್ಯೆಯ ಪರಿಸರದಿಂದ ದೂರವಿದ್ದವನು. ಜೊತೆಗೆ ತ್ರಸದಸ್ಯು ಹುಟ್ಟಿದ್ದೇ, ಅಂತರ ಜಾತಿಯ ಸಂಬಂಧದಿಂದ. ಮತ್ತು ಮುಂದೆ ಈತನ ವಿವಾಹವೂ ಕೂಡ ವರ್ಣ ಸಂಕರದಿಂದಲೇ ಆಗಿದ್ದು ಎಂಬುದನ್ನು ನಾವು ಕಂಡುಕೊಳ್ಳಬಹುದು. ಆದರೆ ಈ ಬಗ್ಗೆ ಸ್ಪಷ್ಟವಾಗಿ ನಿರ್ಧಾರ ತೆಗೆದುಕೊಳ್ಳಲು ಕೃತಿಯಲ್ಲಿ ಆಧಾರಗಳು ಕಡಿಮೆಯಾಗಿವೆ. ಇನ್ನುಳಿದ ಯಾವುದೇ ಮತದ ಸಂಪ್ರದಾಯಗಳು ಕಾದಂಬರಿಯಲ್ಲಿ ನಿರೂಪಿತವಾಗಿಲ್ಲದಿರುವುದು, ಕೃತಿಕಾರರು 'ಪುರುಕುತ್ಸಾನಿ'ಗೆ ನೀಡಿದ ಮಹತ್ವವನ್ನು ಸೂಚಿಸುತ್ತದೆ.

ದೈಹಿಕ ಬಯಕೆಗಳನ್ನು ನಿಗ್ರಹಿಸಲು ಸಾಧ್ಯವಾಗದೇ ವಂಚಿತನಾದ ಪುರುಕುತ್ಸನು ಯೌವ್ವನಕ್ಕೆ ಬರುಬರುತ್ತಾ ಕಾಮುಕನಾಗಿ ವಿಷಯಲಂಪಟನಾಗುತ್ತಾನೆ. ಅರಮನೆಯ ಇನ್ನಿತರ ಸ್ತ್ರೀಯರೊಂದಿಗೆ, ಸದಾ ಕಾಲ ಕಳೆಯುತ್ತಾ ರಾಜ್ಯದ ಆಡಳಿತ ಯಂತ್ರವನ್ನು ಮುನ್ನೆಡೆಸುವ ಜವಬ್ದಾರಿಯಿಂದ ವಿಮುಖನಾಗುತ್ತಾನೆ. ಗಂಡನೊಡನೆ ತನ್ನ ಸಹಜ ಲೈಂಗಿಕ ಸಂಬಂಧ ಬೆಳೆಸಲು ಮಾಡಿದ ಎಲ್ಲಾ ಪ್ರಯತ್ನಗಳು ವಿಫಲವಾಗಿ, ಕೊನೆಗೆ ಗಂಡನ ವ್ಯಭಿಚಾರಕ್ಕೆ ಹೆಣ್ಣುಗಳನ್ನೊದಗಿಸಿಕೊಡುತ್ತಾ, ರಾಜಮನೆತನದ ಮರ್ಯಾದೆಯನ್ನು ಗಮನದಲ್ಲಿಟ್ಟುಕೊಂಡು, ಪುರುಕುತ್ಸನನ್ನು ಅರಮನೆಯನ್ನು ಬಿಟ್ಟು 'ಅಮ್ರವನ'ದಲ್ಲಿ ಗೃಹಬಂಧನದಲ್ಲಿರಿಸುತ್ತಾಳೆ. ಈ ಕಾರಣದಿಂದ ಪುರುಕುತ್ಸಾನಿಯೇ ರಾಜ್ಯಾಡಳಿತದ ಸೂತ್ರವನ್ನು ಕೈಗೆತ್ತಿಕೊಂಡು, ಅಯೋಧ್ಯೆಯನ್ನು ಶತ್ರುಗಳಿಂದ ರಕ್ಷಿಸುತ್ತಾ ಸುತ್ತಮುತ್ತಲ ಅನೇಕ ರಾಜರುಗಳ ಆಕ್ರಮಣಶೀಲತೆಯಿಂದ ರಾಜ್ಯಗಡಿಯನ್ನು ಕಾಪಾಡಿಕೊಂಡು, ಆಂತರೀಕ ಆಡಳಿತದಲ್ಲಿ ಬಿರುಕುಂಟಾದಾಗ ಸಲಹೆ ಸಹಕಾರ ಮುಂದಾಲೋಚನೆಯಿಂದ ಯಶಸ್ವಿಯಾಗಿ ಆಡಳಿತ ನಿರ್ವಹಿಸುತ್ತಾಳೆ.

ರಾಜ್ಯದ ಅಧಿಕಾರದ ಚುಕ್ಕಾಣಿಯನ್ನು ಯಶಸ್ವಿಯಾಗಿ ನಿಭಾಯಿಸಿದ ಪುರುಕುತ್ಸಾನಿ, ರಾಜ್ಯದ ಉತ್ತರಾಧಿಕಾರಿಯನ್ನು ಪಡೆಯಲಾರದೆ, ರಾಜವಂಶವನ್ನು ಮುಂದುವರಿಸುವ ಉದ್ದೇಶದಿಂದ, "ಮೈತ್ರಾವರುಣ ಯಜ್ಞ" ಹಾಗೂ 'ನಿಯೋಗ' ಪದ್ಧತಿ ಸಂಭೋಗದ ಮೂಲಕ 'ತ್ರಸದಸ್ಯು' ಎಂಬ ಮಗನನ್ನು ಪಡೆದು ಸಾಕಿ ಬೆಳೆಸಿ ರಾಜ್ಯಭಾರವಹಿಸಿಕೊಡುತ್ತಾಳೆ.

ಹೀಗೆ ತನ್ನ ಮಗ ತ್ರಸದಸ್ಯುವಿಗೆ ರಾಜ್ಯದ ಅಧಿಕಾರ ವಹಿಸಿದ ನಂತರವೂ ಮಗನು ಸರಿಯಾಗಿ ಕಾರ್ಯನಿರ್ವಹಿಸದಿದ್ದಾಗ, ಆಡಳಿತದಲ್ಲಿ ತೊಡಕುಗಳು ಬಂದಾಗ ಮತ್ತೆ ನೇರವಾಗಿ ಅಧಿಕಾರ ಪಡೆದು ಕೆಲವೊಮ್ಮೆ 'ದೂರ ನಿಯಂತ್ರಣ'ದ ಮೂಲಕ ಸಲಹೆ ಸಹಕಾರ ನೀಡುತ್ತಾ ರಾಜಕಾರಣವನ್ನು ನಡೆಸುತ್ತಾಳೆ. ತಾರ್ಕ್ಷ್ಯನೊಂದಿಗೆ ಕೊನೆಯಲ್ಲಿ ಸಹಜ ದೈಹಿಕ ಸಂಬಂಧವನ್ನು ಮನಸಾರೆ ಪಡೆದುಕೊಂಡು ಸರ್ಪದಂಶವಾದ ಮೂಲಕ(ಹಾವು ಕಚ್ಚುವುದು) ಮರಣ ಹೊಂದುತ್ತಾಳೆ.

ಕಥೆಯ ಕೇಂದ್ರಬಿಂದು 'ನರ್ಮದಾ ಪುರುಕುತ್ಸಾನಿ'. ಈಕೆ ಅಸಾಧಾರಣ ಸ್ತ್ರೀ. ಹಾಗೂ ವರ್ಚಸ್ವೀ ವ್ಯಕ್ತಿತ್ವ ಹೊಂದಿರುವವಳು. ಆಕ್ರಮಣಕಾರೀ ಹಾಗೂ ರಾಜ್ಯ ವಿಸ್ತರಣೆಯ ಆಕಾಂಕ್ಷೆಯನ್ನು ಬಿಟ್ಟು. ತನ್ನ ಹಿರಿಯರಿಂದ ಬಂದ ಆಯೋಧ್ಯೆಯನ್ನು ರಕ್ಷಿಸುವ ಜವಬ್ದಾರಿಯನ್ನು ಮಾತ್ರ ಗಮನದಲ್ಲಿರಿಸಿಕೊಂಡು, ತನ್ನ ಗಂಡನ ವಿಷಯಲೋಲುಪತೆಯಿಂದಾಗಿ ಈಗಾಗಲೇ ಸಡಿಲಗೊಂಡ ಆಡಳಿತವನ್ನು ಒಂದು ಚೌಕಟ್ಟಿನೊಳಗೆ ತರುವುದು ಅನಿವಾರ್ಯವಾಗುತ್ತದೆ. ಒಂದೊಂದು ಸಂದರ್ಭವೂ ಕೂಡ ಪುರುಕುತ್ಸಾನಿಗೆ ಸತ್ವ ಪರೀಕ್ಷೆಯಂತಾಗಿ ಚಾಣಾಕ್ಷ್ಯ ಮತಿಯಿಂದ ಹಾಗೂ ಮುತ್ಸದ್ದಿತನದಿಂದ ಎಲ್ಲಾ ಕಾರ್ಯಗಳಲ್ಲೂ ಯಶಸ್ವಿಯಾಗುತ್ತಾಳೆ. ತನ್ನ ಗಂಡ ಪುರುಕುತ್ಸನೊಂದಿಗೆ ಬಾಲ್ಯದಲ್ಲಿ ಗುದುಮುರಿಗೆ ಹಾಕಿ ಗೆಲ್ಲುತ್ತಿದ್ದ ಪುರುಕುತ್ಸಾನಿ, ಮುಂದೆ ಅಂತಹದ್ದೇ ಗುದುಮುರಿಗೆಯನ್ನು ತನ್ನ ಶತೃಗಳಿಗೆ ತೋರಿಸುತ್ತಾಳೆ.

ಈಕೆಯದು ದೂರದರ್ಶಿತ್ವದಿಂದ ಕೂಡಿ ಗುಪ್ತ ರಾಜಕೀಯ. ಹೀಗಾಗಿಯೇ ಶ್ರಾವಸ್ತಿಯ ಅರಸರು ವಶಪಡಿಸಿಕೊಂಡಿದ್ದ ಅಯೋಧ್ಯೆಯ ನಾಲ್ಕು ಗ್ರಾಮಗಳನ್ನು ಹೆಚ್ಚಿನ ರಕ್ತಪಾತವಿಲ್ಲದೆ ಮರಳಿ ಪಡೆದು, ಪ್ರಜೆಗಳು ವಿಸ್ಮಿತರಾಗುವಂತೆ ಮಾಡಿದವಳು. ಹೀಗಾಗಿ ರಾಜಕೀಯ ಜೀವನದಲ್ಲಿ ಸೋಲು ಎಂಬುದಿಲ್ಲ.

ಪುರುಕುತ್ಸಾನಿ ಆಶಾವಾದಿ ಹಾಗೂ ಅಭಿಮಾನಶಾಲಿ. ಹೊರಗಿನ ಆಕ್ರಮಣಗಳನ್ನು ಆದಷ್ಟು ದೂರದಿಂದಲೇ ತಡೆಯುವ ಹಾಗೂ ಮೊಳಕೆಯಲ್ಲಿಯೇ ಚಿವುಟಿಹಾಕುವ, ಬುದ್ಧಿಶಕ್ತಿಯು ಓದುಗರ ಮೆಚ್ಚುಗೆಯನ್ನು ಪಡೆಯುತ್ತದೆ. ಈಕೆಯ ತಂತ್ರದ ಮುಂದೆ ಯಾವುದೇ ಪ್ರತಿತಂತ್ರಗಳು ನಡೆಯಲಾರವು. ಕೇವಲ ಏಕಮುಖವಾದ ಪ್ರಯತ್ನಗಳನ್ನು ನಂಬಿ ಕೂರುವವಳೂ ಅಲ್ಲ. ಹಾಗೂ ತನ್ನ ರಾಜ್ಯದ ಪರಿಮಿತಿಯೊಳಗೆ ಯಾರನ್ನು ತಿರಸ್ಕರಿಸದೇ ಆ ಮೂಲಕ ಆಂತರೀಕವಾಗಿ ಶತೃಗಳೇ ಹುಟ್ಟದಂತೆ ನೋಡಿಕೊಂಡು ಮೊದಲ ಆಂತರೀಕ ಭದ್ರತೆಗೆ ಪ್ರಾಶಸ್ತ್ಯ ನೀಡಿದವಳು. ಇದಕ್ಕೆ ನಿದರ್ಶನ ನೀಡುವುದಾದರೆ, ಕಾಲಿಯು ಪುರುಕುತ್ಸ ಮಹಾರಾಜರ ವಿಷಯಲೋಲುಪತೆಗೆ ತನ್ನ ತಂಗಿಯೇ ಬಲಿಯಾದಾಗ, ಆಯೋಧ್ಯೆಯನ್ನು

[illegible]

[illegible]

[illegible]

[illegible]

[illegible]

ತಿರಸ್ಕರಿಸಿ ಹೋಗಿ ಪುರುಕುತ್ಸ ಹಾಗೂ ತಾರ್ಕ್ಷ್ಯನನ್ನು ಕೊಲ್ಲುವ ಸಂಚು ಹೂಡಿದಾಗ ರಾಜ್ಯದ ವ್ಯಕ್ತಿಯೊಬ್ಬ ಚಿಕ್ಕ ವಯಸ್ಸೆ ಆಗಲಿ, ರಾಜ-ರಾಣಿಯರ ಎಲ್ಲಾ ಗುಟ್ಟನ್ನು ಅರಿತ ಸೇವಕನೊಬ್ಬ ಓಡಿಹೋಗಿ ಶತೃವಾಗುವುದು ಪುರುಕುತ್ಸಾನಿಗೆ ಪ್ರಾಶಸ್ತ್ಯವೆನ್ನಿಸದ ಕಾರಣ, ತಾನೇ ಕಾಲಿಯನ್ನು ಹುಡುಕಿಕೊಂಡು ಹೋಗಿ ಕಾಲಿಯನ ಮಾನಸಿಕ ಸ್ಥಿತಿಯನ್ನು ಅರಿತು ಸಮಾಧಾನಪಡಿಸಿ, ರಾಜ್ಯದ ಸೈನ್ಯಾಧಿಕಾರಿಯ ಉನ್ನತ ಹುದ್ದೆಯನ್ನು ನೀಡಿ ಗುರುತರವಾದ ಕರ್ತವ್ಯವನ್ನು ವಹಿಸುತ್ತಾಳೆ.

ಏಕಕಾಲಕ್ಕೆ ನಾಲ್ಕಾರು ಯೋಜನೆಗಳನ್ನು ಒಂದೇ ಕಾರ್ಯಸಾಧನೆಗೆ ಬಳಸಿದ ಪರಿಣಾಮವಾಗಿ ಶ್ರಾವಸ್ತಿ ಹಾಗೂ ಕಾಶಿ ಎರಡು ಸಾಮ್ರಾಜ್ಯಗಳು ಒಟ್ಟಿಗೆ ಸೇರಿ ಅಯೋಧ್ಯೆಯ ಮೇಲೆ ಆಕ್ರಮಣಮಾಡಲು ಸಂಚು ರೂಪಿಸುತ್ತಿರುವಾಗಲೇ, ತಾರ್ಕ್ಷ್ಯ ಹಾಗೂ ಕಾಲಿಯನಿಗೆ ಸಲಹೆ ನೀಡಿ ಸೈನ್ಯ ಬಳಸಿ ಸಂಚುಗಳನ್ನೆಲ್ಲಾ ಪೂರ್ವಭಾವಿಯಾಗಿಯೇ ವಿಫಲಗೊಳಿಸುತ್ತಾಳೆ.

'ಅವಧೇಶ್ವರಿ' ಕೃತಿಯಲ್ಲಿನ ಮತ್ತೊಂದು ಪ್ರಮುಖ ಪಾತ್ರವೆಂದರೆ 'ಭದ್ರಾಯು'ವಿನದು. ಭದ್ರಾಯು ತನ್ನ ಸುತ್ತಮುತ್ತಲಿನ ಎಲ್ಲಾ ರಾಜ್ಯಗಳನ್ನು ವಶಪಡಿಸಿಕೊಂಡ ಕೆಳವರ್ಗಕ್ಕೆ ಸೇರಿದ ವ್ಯಕ್ತಿ. ಕೊನೆಗೆ ಅಯೋಧ್ಯೆಯ ಮೇಲೆ ದಾಳಿ ಮಾಡಲು ಯತ್ನಿಸಿದಾಗ ಪುರುಕುತ್ಸಾನಿಯ ಎಲ್ಲಾ ಯೋಜನೆಗಳ ಮುಂದೆ ಭದ್ರಾಯು ಸೋಲುವಂತಾಗುವ ಸಂದರ್ಭ ಬರುತ್ತದೆ. ಕೊನೆಗೆ ಪುರುಕುತ್ಸ ಹಾಗೂ ಮೃಗನಯನೆಯನ್ನು ಭದ್ರಾಯು ಅಮ್ರುವನದಿಂದಲೇ ಅಪಹರಿಸಿ, ಸಂಪೂರ್ಣ ಆಯೋಧ್ಯೆಯನ್ನು ವಶಪಡಿಸಿಕೊಳ್ಳಲಾರದೆ, ಕೊನೆಗೆ ಪುರುಕುತ್ಸಾನಿಯನ್ನೆ ವಿವಾಹವಾಗುವ ಮೂಲಕ ಸಾಮ್ರಾಜ್ಯವಿಸ್ತರಿಸುವ ಯೋಜನೆಯನ್ನು ಹಾಕುತ್ತಾನೆ.

ಇದಕ್ಕಾಗಿ ಪುರುಕುತ್ಸಾನಿಗೆ ಸಂದೇಶವನ್ನು ಈ ರೀತಿ ಕಳುಹಿಸುತ್ತಾನೆ. "ಪುರುಕುತ್ಸ-ಪುರುಕುತ್ಸಾನಿಯರ ವಿವಾಹ, ಭಾರತೀಯ ಪದ್ಧತಿಯಿಂದ ನ್ಯಾಯ ಸಮ್ಮತವಲ್ಲ. ಆದ್ದರಿಂದ ಪುರುಕುತ್ಸಾನಿಯು ತನ್ನನ್ನು ಮದುವೆಯಾದರೆ, ಕಾಶಿ, ವಂಗ, ಅಂಗ, ಕಳಿಂಗ ರಾಜ್ಯಗಳು ಒಂದಾಗಿ ವಿಶಾಲ ಆರ್ಯಾವರ್ತ ಸಾಮ್ರಾಜ್ಯ ಕಟ್ಟಬಹುದೆಂಬ ಬಯಕೆ ವ್ಯಕ್ತಪಡಿಸುತ್ತಾನೆ.

ಚದುರಂಗದಾಟದಲ್ಲಿ ಒಂದು ಪೇದೆಯನ್ನು ಕೊಟ್ಟು ಇನ್ನೊಂದು ಕುದುರೆಯಿಂದ ರಾಜನ ಮೇಲೆ ಒತ್ತಡ ತರುವ ಸಂಭಾವ್ಯತೆಯಿಂದಾಗಿ ಪುರಕುತ್ಸಾನಿ ಮೊದಲು ಮಹಾರಾಜ ಪುರುಕುತ್ಸರನ್ನು ತಂದೊಪ್ಪಿಸು ಆಮೇಲೆ ಮಾತಾಡೋಣ ಎಂದು ತಿಳಿಸುತ್ತಾಳೆ. ಪುರುಕುತ್ಸಾನಿ ದಾಂಪತ್ಯ ಸುಖದಿಂದ ಮೋಸಗೊಂಡಿದ್ದರೂ ತನ್ನ ಪತಿಯ ಒಪ್ಪಿಗೆ ಇದ್ದರೂ ಭದ್ರಾಯುನಂತಹ ವ್ಯಕ್ತಿಯನ್ನು ವಿವಾಹವಾಗದಿರುವುದು ಪುರುಕುತ್ಸಾನಿಯ ಮನೋಧರ್ಮಕ್ಕೆ ಸಾಕ್ಷಿ. ಒಂದೆಡೆಯಾದರೆ, ಭದ್ರಾಯು ಕೆಳವರ್ಗದಿಂದ ಬಂದವನಾದರೂ ಕ್ಷತ್ರಿಯ ವಂಶಸ್ಥಳಾದ ಪುರುಕುತ್ಸಾನಿಯನ್ನು ವಿವಾಹವಾಗುವುದರ ಮೂಲಕ 'ವರ್ಗ ಸಮಾನತೆ' ಸಾಧಿಸಲು ಯತ್ನಿಸುವ ಸೂಚನೆಯನ್ನು ನಾವು ಗುರುತಿಸಬಹುದು.

ಕಾದಂಬರಿಯು ಗಮನ ನೀಡುವ ಮತ್ತೊಂದು ಅಂಶವೆಂದರೆ, ಬ್ರಾಹ್ಮಣರ ಜೀವನ ಪದ್ಧತಿ, ಪುರುಕುತ್ಸಾನಿಯ ಕಾಲದಲ್ಲಿ ಯಾವುದೇ ರೀತಿಯ ಬ್ರಾಹ್ಮಣರ ಒಳಜಗಳಗಳಾಗಲಿ ಮತ್ಯಾವುದೇ ಆಂತರೀಕ

ಸಮಸ್ಯೆಗಳು ಉದ್ಭವಿಸದಂತೆ ತಡೆಯುತ್ತಾಳೆ. ಅಧಿಕಾರಿ ಮತ್ತು ಸಾಮಂತ ಎಂಬ ಸ್ಥಾನ ನೀಡಿ ಸೈನ್ಯವನ್ನು ಸಂಘಟಿಸಿ, ದೇವರಾಜನು ಪುರುಕುತ್ಸನಂತೆ ಅತೀ ಕಾಮುಕನಾಗಿ ಕಂಡುಬಂದಾಗ ದಂಡನಾಯಕನಾಗಿ ಮುಂದುವರಿಯಲು ಅನರ್ಹ ಎಂದು ತಿಳಿದು ಆತನ ಮಗನಿಗೆ ದಂಡನಾಯಕನ ಪಟ್ಟ ನೀಡುವುದರ ಮೂಲಕ ದೇವರಾಜನ ಮನಸ್ಸಿಗೂ ಕೂಡ ನೋವಾಗದಂತೆ ನೋಡಿಕೊಳ್ಳುತ್ತಾಳೆ.

ತಾರ್ಕ್ಷ್ಯನಂತಹ ವ್ಯಕ್ತಿಯಲ್ಲಿ ಸಮರ್ಥವನ್ನು ಗುರುತಿಸಿದ ಈಕೆಯು ಪುರುಕುತ್ಸ ಮಹಾರಾಜನಿಗೆ ಅನೈತಿಕ ಸಂಬಂಧಗಳಿಗೆ ಹೆಣ್ಣುಗಳನ್ನು ತಂದೊಪ್ಪಿಸುವ ಕಾಯಕ ಮಾಡುತ್ತಾ ಸಾಮರ್ಥ್ಯದ ಅಪವ್ಯವಾಗುತ್ತಿದ್ದಾಗ, ಆತನನ್ನು ತನ್ನ ಆಪ್ತಸಲಹೆಗಾರನಾಗಿ ಮಾಡಿಕೊಂಡು, ಆಡಳಿತದ ಮುಖ್ಯ ವಾಹಿನಿಗೆ ತರುತ್ತಾಳೆ.

ಯಾವುದೇ ಕಾರ್ಯವಾಗಬೇಕಾದಾದರೂ, ಕಾಲಿಯ ಹಾಗೂ ತಾರ್ಕ್ಷ್ಯರನ್ನು ಸಂಘಟಿಸುವುದರ ಮೂಲಕ ಜಯಸಾಧಿಸುತ್ತಾಳೆ. ಹೀಗಾಗಿ ಕಾಲಿಯ, ತಾರ್ಕ್ಷ್ಯರ ವಿಜಯ ಪುರುಕುತ್ಸಾನಿಯ ವಿಜಯವಾಗಿ, ಪುರುಕುತ್ಸಾನಿಯ ವಿಜಯ ಕಾಲಿಯ ತಾರ್ಕ್ಷ್ಯರ ವಿಜಯವಾಗುತ್ತದೆ.

ಚತುರತೆಯಿಂದ ಪುರುಕುತ್ಸಾನಿ ತನ್ನ ಸಾಮ್ರಾಜ್ಯವನ್ನು ಯಶಸ್ವಿಯಾಗಿ ಮುಂದೆ ಕೊಂಡೊಯ್ದರೂ, ರಾಜಮನೆತನವನ್ನು ಮುನ್ನೆಡೆಸಲು ಅಗತ್ಯವಾದ ವಂಶಾಭಿವೃದ್ಧಿಯ ವಿಷಯದಲ್ಲಿ ಮಾತ್ರ ಸೋಲು ಕಂಡಳು ಎಂದೇ ಹೇಳಬಹುದಾಗಿದೆ. ವಂಶಾಭಿವೃದ್ಧಿ ಬೆಳೆಸುವುದು ತನ್ನ ಕೈಮೀರಿದ ಸಮಸ್ಯೆ ಎಂದೆನ್ನಿಸಿದಾಗ, ದೈವತ್ವಕ್ಕೆ ಶರಣಾಗಿ, ಅಮರುವಿನ ದೇವದೇಮರ ಮಹರ್ಷಿಗಳ ಸಲಹೆಯ ಮೇರೆಗೆ 'ನಿಯೋಗ ಪದ್ಧತಿ'ಯ ಮೂಲಕ ಸಂತಾನ ಪಡೆಯಲು ಬಯಸುತ್ತಾಳೆ.

ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಸಂಘರ್ಷವಾಗಿ ಕೆಳಗಿನ ಭಾಗಗಳನ್ನು ಗಮನಿಸ ಬಹುದು. ಪ್ರಾಚೀನ ಭಾರತದ ವಿವಾಹ ಪದ್ಧತಿಯ ಬಗೆಗಳಲ್ಲಿ 'ನಿಯೋಗ' ಪದ್ಧತಿಯು ಚರ್ಚೆಗೆ ಒಳಗಾಗಿದೆ. ನಿಯೋಗ ಸಂಬಂಧವೂ ಕೆಲವು ವೇಳೆ ಅನಿವಾರ್ಯವಾಗಿತ್ತೆಂಬುದನ್ನು ಗಮನಿಸಬಹುದು. ಜೊತೆಗೆ ನಿಯೋಗ ಸಂಬಂಧವೆಂದರೆ, ಒಂದು ಕುಟುಂಬದಲ್ಲಿ ಮದುವೆಯಾದ ನಂತರ, ಆ ವ್ಯಕ್ತಿ ಅಕಾಲಿಕ ಮರಣಹೊಂದಿದರೆ, ಅಥವಾ ಆ ವ್ಯಕ್ತಿಯಿಂದ ಮಕ್ಕಳನ್ನು ಪಡೆಯಲು ಸಾಧ್ಯವಾಗದಿದ್ದರೆ, ಅಂತಹ ವೇಳೆಯಲ್ಲಿ ಇನ್ನುಳಿದ ಸಹೋದರನನ್ನು ದೈಹಿಕವಾಗಿ ಕೂಡುವುದರ ಮೂಲಕ ಮಕ್ಕಳನ್ನು ಪಡೆಯಲು ಯತ್ನಿಸುವುದನ್ನು ಕಾಣುತ್ತೇವೆ. ಅಂದರೆ ಇಲ್ಲಿ ಪ್ರಸ್ತಾಪಿತವಾಗಿರುವ ನಿಯೋಗದ ಪರಿಕಲ್ಪನೆ ತುಸು ಭಿನ್ನವಾಗಿದೆ. ನಿಯೋಗ ಸಂಬಂಧ ಹೊಂದುವಾಗ ಪುರುಕುತ್ಸಾನಿ ಬಯಸುವುದು ಕ್ಷತ್ರಿಯ ಕುಲದವರನ್ನು. ಆದರೆ ಋಷಿಮುನಿಗಳ ಮಾರ್ಗದರ್ಶನಕ್ಕೆ ಬದ್ಧರಾಗಿ ಸಿಂಹಭಟ್ಟ ಎಂಬ ಬ್ರಾಹ್ಮಣ ಕುಲದವನೊಂದಿಗೆ ಸಂಬಂಧ ಹೊಂದಿರುವುದು ನಿಯೋಗ ಪದ್ಧತಿಯಾಗುತ್ತದೆಯೇ? ಜೊತೆಗೆ ಈ ರೀತಿಯ 'ನಿಯೋಗ' ಪದ್ಧತಿ ಸಮಾಜ ಒಪ್ಪಿತವಾಗಿತ್ತೆಂಬುದನ್ನು ಗಮನಿಸಿರುವುದರಿಂದ ಇಲ್ಲಿ ಪುಣೇಕರರು ಸಮಾಜ ಒಪ್ಪಿತವಾಗಿರಲಿಲ್ಲ ಎಂಬ ನಿರ್ಣಯಕ್ಕೆ ಬಂದಿರುವುದು ಚರ್ಚಾರ್ಹವಾಗಿದೆ. ಇವರಿಗೆ ಸಂಶೋಧನೆ ಮಾಡುವಾಗ ಈ ರೀತಿಯ

[illegible]

ಆಧಾರಗಳು ದೊರೆತಿದ್ದರೆ, ಕೃತಿಯಲ್ಲಿ ಪ್ರಸ್ತಾಪಿಸಬಹುದಾಗಿತ್ತು. ಆದರೆ ಈ ರೀತಿಯ ಪ್ರಯತ್ನವನ್ನು ಕೃತಕಾರರು ಮಾಡಿಲ್ಲದಿರುವುದು ಒಂದು ಕೊರತೆಯಾಗಿ ಕಾಡುತ್ತದೆ.

ಪುರುಕುತ್ಸಾನಿ ರಾಜಕೀಯ ಚತುರಗಾರ್ತಿಯಂತೆ, ಮಾನವೀತೆ ಹಾಗೂ ನೈತಿಕ ಮೌಲ್ಯಗಳನ್ನು ಹೊಂದಿರುವುದನ್ನು ಗುರುತಿಸಬಹುದಾಗಿದೆ. ಸಿಂಹಭಟ್ಟನೊಂದಿಗೆ ಹೊಂದಿದ್ದ ಲೈಂಗಿಕ ಸಂಬಂಧವನ್ನು ಮತ್ತೆ ಬೆಳೆಸಲಿಲ್ಲ. ಹಾಗೂ ಸಿಂಹಭಟ್ಟ ತನ್ನೆದುರಿಗೆ ಸದಾ ಇದ್ದರೂ ಕಾಮುಕ ದೃಷ್ಟಿಯಿಂದ ಒಮ್ಮೆಯೂ ನೋಡಿದವಳಲ್ಲ. ಆದರೆ ಸಿಂಹಭಟ್ಟ ಮಾತ್ರ ತನ್ನ ಪತ್ನಿ ಇದ್ದರೂ ಪುರುಕುತ್ಸಾನಿಯನ್ನು ಮರೆಯಲೂ ಆಗದೆ, ಲೈಂಗಿಕ ಬಯಕೆಯನ್ನು ಹತ್ತಿಕ್ಕಲಾರದೆ ಹುಚ್ಚನಾದಾಗ ಪುರುಕುತ್ಸಾನಿ ನಾನೇ ಇದಕ್ಕೆ ಕಾರಣವೆಂದು ಇಡೀ ಅಯೋಧ್ಯೆಯ ಪ್ರಜೆಗಳೇ ನನ್ನನ್ನು ಗಮನಿಸುತ್ತಿದ್ದಾರೆ ಎಂಬುದು ತಿಳಿದರೂ ಕೂಡ, ಆತ ಮತ್ತೆ ಮೊದಲಿನಂತೆಯೇ ಆಗಬಹುದೆಂಬ ಕಾರಣದಿಂದ ತನ್ನನ್ನು ಸಿಂಹಭಟ್ಟನಿಗೆ ಅರ್ಪಿಸಿಕೊಳ್ಳುತ್ತಾಳೆ. ಹುಚ್ಚನಾಗಿ ಆತ ನೀಡಿದ ಎಲ್ಲಾ ಹಿಂಸೆಗಳನ್ನು ಸಹಿಸಿಕೊಳ್ಳುತ್ತಾಳೆ. ಜೊತೆಗೆ ಪುರುಕುತ್ಸ ಸತ್ತಾಗ ನೊಂದುಕೊಳ್ಳುವುದು ಆಕೆಯ ನೈತಿಕ ಮನೋಧರ್ಮಕ್ಕೆ ಸಾಕ್ಷಿಯಾಗಿದೆ.

ಅಯೋಧ್ಯೆಯ ಪ್ರಜೆಗಳು ಆಡಿದ ಅಣುಕುಮಾತಿನಿಂದ ತಾನು ಯಾರ ಮಗನೆಂದು ಕೇಳಿಬಂದ ತ್ರಸದಸ್ಯುವಿನ ಪ್ರಶ್ನೆಗೆ ಕೊಡುವ ಉತ್ತರವೆಂದರೆ,

> "ಮಹರ್ಷಿಗಳೇ, ನನ್ನ ಮಗ ನಿಮ್ಮ ಮಾತು ಕೇಳುವ ಸ್ಥಿತಿಯಲ್ಲಿ ಇಲ್ಲ. ನಾನೇ ಉತ್ತರ ಕೊಡುತ್ತೇನೆ. ನಾನು ಹುಟ್ಟಿದಾಗ ನನ್ನ ತಂದೆ ತಾಯಿಗಳು 'ಪುರುಕುತ್ಸಾನಿ' ಎಂದು ಹೆಸರಿಟ್ಟರು. ನನ್ನ ವಿವಾಹ ಸಮಯದಲ್ಲಿ ಗಂಡ ಪುರುಕುತ್ಸ ಮಹಾರಾಜರು ನನಗೆ 'ನರ್ಮದೆ' ಎಂದು ಹೆಸರಿಟ್ಟು ಮಂಗಳಸೂತ್ರ ಕಟ್ಟಿದರು. ಈಗ ನಾನು ಪುರುಕುತ್ಸರ ವಿಧವೆ. ಮಹಾರಾಣಿಯಾಗಿದ್ದವಳು ನಿನಗೆ ಪಟ್ಟಕಟ್ಟಿ ಸಾಮಾನ್ಯ ಸ್ತ್ರೀಯಾಗಿದ್ದೇನೆ. ಇನ್ನು ಮುಂದೆ ಈ ಹುಚ್ಚು ಬ್ರಾಹ್ಮಣರ ಹುಚ್ಚು ಇಳಿಯುವರೆಗೆ ಈತನ ಸೂಳೆ. ಇದನ್ನೇ ಪರೀಕ್ಷೆ ಮಾಡುವುದಕ್ಕಾಗಿ "ನಾನು ಇಲ್ಲಿಯವರೆಗೆ ಬಂದಿರುವೆ. ಹಾಗಾದರೆ ಕೇಳು. ನಾನು ಇಲ್ಲಿಯವರೆಗೆ ಪುರುಕುತ್ಸರ ಪತ್ನಿ. ಇಂದಿನಿಂದ ಈ ಬ್ರಾಹ್ಮಣನ ಸೂಳೆ ತಿಳಿಯಿತೇ?" ಎಂದು ಆವೇಶದಿಂದ ಮುನ್ನುಗ್ಗಿ, ನೆಲಕ್ಕೆ ಕುಸಿದ ಸಿಂಹಭಟ್ಟನನ್ನು ಎತ್ತಿ ತನ್ನ ತೊಡೆಯ ಮೇಲೆ ಮಲಗಿಸಿಕೊಂಡಳು. "ಈ ಸಂಬಂಧಕ್ಕೆ ಇದೇ ತಾನೆ ಕೃಪಾದೇವಿ ಔದಾರ್ಯದಿಂದ ಅನುಮತಿ ನೀಡಿದ್ದಾಳೆ. ಅವಳನ್ನು ಕೇಳು, ಖಂಡಿತ ಮಾಡಿಕೋ. ಆಮೇಲೆ ನಿನ್ನ ಕೈಯಿಂದಲೇ ನನಗೆ ಅರಿಶಿಣ ಕುಂಕುಮ ಕೊಟ್ಟು, ಸಂಬಂಧವನ್ನು ಪವಿತ್ರಗೊಳಿಸು""[7]

ಎಂದು ಇಷ್ಟೊಂದು ಧೈರ್ಯವಾಗಿ ಮಗನಿಗೆ ಹೇಳುವ ಪುರುಕುತ್ಸಾನಿಯ ವ್ಯಕ್ತಿತ್ವವನ್ನು ಮೆಚ್ಚಲೇಬೇಕು. ಆದರೂ ಪುರುಕುತ್ಸಾನಿಗೂ ದೈಹಿಕ ಬಯಕೆಯನ್ನು ಹತ್ತಿಕ್ಕಲಾರದೆ, ಈ ಕಾರಣವಾಗಿಯಾದರೂ ಸಿಂಹಭಟ್ಟನನ್ನು

ಮತ್ತೆ ಸೇರುವ ಆಸೆ ಇನ್ನೂ ಸುಪ್ತವಾಗಿ ಅಂತರಾಳದಲ್ಲಿ ಇರಬಹುದೆ ಎನ್ನಿಸುತ್ತದೆ. ಏಕೆಂದರೆ ಪುರುಕುತ್ಸಾನಿ ಅಂತಿಮವಾಗಿ ಮತ್ತೆ ತಾರ್ಕ್ಷ್ಯನೊಂದಿಗೆ ದೈಹಿಕವಾಗಿ ಸೇರುವುದರ ಮೂಲಕ ತಾರ್ಕ್ಷ್ಯನಿಗೆ ಮಾನಸಿಕವಾಗಿ ಪತಿಯ ಸ್ಥಾನವನ್ನು ನೀಡುತ್ತಾಳೆ. ಇದರಿಂದ ಒಬ್ಬ ವ್ಯಕ್ತಿ ಯಾವ ಬಗೆಯ ವ್ಯಕ್ತಿತ್ವ ಹೊಂದಿದ್ದರೂ ಕೂಡ ಪ್ರಕೃತಿ ಸಹಜವಾದ ಕಾಮದಂತಹ ಜೈವಿಕ ಬಯಕೆಯನ್ನು ಮೀರಲು ಸಾಧ್ಯವಿಲ್ಲ. ಕೆಲವೊಮ್ಮೆ ಈ ಬಯಕೆಯನ್ನು ಮೀರಿದ ಕೆಲವು ಉದಾಹರಣೆಗಳಿರ ಬಹುದು. ಆದರೂ ಬಹಳ ಕಡಿಮೆ. ಅದರಲ್ಲೂ, ಕೆಲವರು ಸಮಾಜದ ಹೊರನೋಟಕ್ಕೆ ಕಾಣದಂತೆ ಅನೈತಿಕ ಸಂಬಂಧವನ್ನು ಹೊಂದಿರುವುದು ಬಹಳ ಪ್ರಾಚೀನ ಕಾಲದಿಂದಲೂ ಹಿಡಿದು ಇಂದಿನ ಆಧುನಿಕ ಬದುಕಿನವರೆಗೂ ನೋಡಬಹುದು.

ತಾರ್ಕ್ಷ್ಯ ತನ್ನ ಆಡಳಿತದ ಆಪ್ತ ಸಹಾಯಕನಾಗಿ ಜೊತೆಯಲ್ಲಿಯೇ ಇದ್ದರೂ ಕೂಡ, ಕೊನೆಯಲ್ಲಿ ಏಕೆ ಪುರುಕುತ್ಸಾನಿ ಆತನನ್ನು ಬಯಸಿದಳು? ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಅಷ್ಟೆ ಅಲ್ಲ ಭದ್ರಾಯುವಿನ ಮಗನು ಇಪ್ಪತ್ತು ವರ್ಷಗಳ ನಂತರ ಪುರುಕುತ್ಸನನ್ನು ಬಿಡುಗಡೆಗೊಳಿಸಿದಾಗ ಕರೆದುಕೊಂಡು ಬರಬೇಕು ಎನ್ನುವಷ್ಟರಲ್ಲಿ, ಯಾರಿಗೂ ತಿಳಿಯದಂತೆ ತಾರ್ಕ್ಷ್ಯನೇ ಪುರುಕುತ್ಸನನ್ನು ಕೊಲ್ಲುತ್ತಾನೆ. ಈ ವಿಷಯ ನಮಗೆ ಆಶ್ಚರ್ಯತರಿಸಬಹುದು. ಆದರೆ ವಾಸ್ತವ ಸತ್ಯ. ಒಬ್ಬ ರಾಜನನ್ನು ಯಾವ ಸಿಟ್ಟು ಇಲ್ಲದ ಒಬ್ಬ ಸೈನ್ಯಾಧಿಕಾರಿ ಹಾಗೂ ಪುರುಕುತ್ಸನ ವ್ಯಭಿಚಾರಕ್ಕೆ ತಾನೇ ಹೆಣ್ಣುಗಳನ್ನು ಹೊದಗಿಸಿಕೊಡುತ್ತಿದ್ದವ ಪುರುಕುತ್ಸಾನಿಗೆ ಯಾವಾಗಲೂ, ಯಾವ ರೀತಿಯಿಂದಲೂ ಮೋಸ ಮಾಡಲು ಬಯಸದ ಈ ತಾರ್ಕ್ಷ್ಯ ಹೀಗೆ ಏಕಾ ಏಕಿ ಪುರುಕುತ್ಸನನ್ನು ಕೊಲ್ಲಲು ಕಾರಣಗಳು ಏನು? ಎಂಬುದು ಕಾದಂಬರಿಯಲ್ಲಿ ವಿಸ್ತೃತವಾಗಿ ಮೂಡಿಲ್ಲ. ಆದರೆ ಪುರುಕುತ್ಸನ ಆಯೋಧ್ಯೆಗೆ ಬರಲು ಮೊದಲು ಒಪ್ಪಲಿಲ್ಲ ಎಂಬುದು ವಾಸ್ತವ ಮತ್ತು ಮುಂದೊಂದು ದಿನ ಪುರುಕುತ್ಸಾನಿಯನ್ನು ದೈಹಿಕವಾಗಿ ಅನುಭವಿಸಬೇಕೆಂಬ ಆಸೆ ಈ ತಾರ್ಕ್ಷ್ಯನಿಗಿತ್ತೆ? ಇದಕ್ಕಾಗಿ ಪುರುಕುತ್ಸನಿದ್ದರೆ ಇದು ಅಸಾಧ್ಯ ಎಂಬ ಕಾರಣವೇ. ಆಯೋಧ್ಯೆಗೆ ಪುರುಕುತ್ಸನಂತಹ ಸ್ತ್ರೀಲೋಲುಪ ಮತ್ತೆ ಕಾಲಿಡಬಾರದು ಎಂಬ ಚಿಂತನೆಯೇ. ಅಥವಾ ತ್ರಸದಸ್ಯು ಪುರುಕುತ್ಸರ ಮಧ್ಯೆ ವೈಮನಸ್ಸು ಮೂಡಬಹುದು ಎಂಬ ಶಂಕೆಯೇ, ಅಥವಾ ಪುರುಕುತ್ಸ ಈಗಾಗಲೇ ರೋಗಿಯಾಗಿದ್ದು, ಈ ರೋಗಿಷ್ಠನನ್ನು ಮತ್ತೆ ಅಯೋಧ್ಯೆಗೆ ಕರೆತಂದರೆ, ಇಡೀ ಆಯೋಧ್ಯೆಯ ಸಮಾಜವೇ ರೋಗಿಷ್ಟವಾಗಬಹುದೆಂಬ ಹಿತಚಿಂತನೆಯೇ ಎಂಬುದನ್ನು ಓದುಗರೇ ಊಹಿಸಬೇಕಾಗುತ್ತದೆ.

ಪುರುಕುತ್ಸಾನಿ ಮನಸ್ಸು ಮಾಡಿದರೆ, ಪುರಕುತ್ಸನೊಂದಿಗೆ ಸಂಸಾರ ಸುಖ ಪಡೆಯಬಹುದಾಗಿತ್ತು. ಪುರುಕುತ್ಸ ಬಯಸಿದಾಗ, ಆಕೆ ತಿರಸ್ಕರಿಸಿದಳು. ಪುರುಕುತ್ಸಾನಿ ಬಯಸಿಬಂದಾಗ ಪುರುಕುತ್ಸ ತಿರಸ್ಕರಿಸಿದ. ಇಬ್ಬರೂ ಪರಸ್ಪರ ದೈಹಿಕವಾಗಿ ಕೂಡುವ ವೇಳೆಯಲ್ಲಿ ಭದ್ರಾಯು ಅಪಹರಿಸಿದ್ದು ವಿಪರ್ಯಾಸವೇ. ಆದರೂ ಆಯೋಧ್ಯೆಯು ಇಷ್ಟೊಂದು ಬಲಿಷ್ಠ ಸೇನೆಯನ್ನು ಹೊಂದಿದ್ದು, ತಾರ್ಕ್ಷ್ಯ ಕಾಲಿಯ ಪುರುಕುತ್ಸಾನಿಯಂತಹ ಚತುರು ದೂರದರ್ಶಿತ್ವ ಹೊಂದಿದವರಿದ್ದರೂ, ಏಕೆ ಇಪ್ಪತ್ತು ವರ್ಷ ಪುರುಕುತ್ಸನನ್ನು ಬಿಡಿಸಿಕೊಂಡು ಬರುವ ಆಲೋಚನೆಯನ್ನು ಮಾಡಲಿಲ್ಲ ಅಥವಾ ಪುರುಕುತ್ಸನನ್ನು ಬಿಡಿಸಿಕೊಂಡು ಬರುವುದು ಪುರುಕುತ್ಸಾನಿಗೆ

ಬೇಕಾಗಿರಲಿಲ್ಲವೊ? ಕಾದಂಬರಿಕಾರರ ತಂತ್ರವೋ? ಎಂಬುದು ಗೌಪ್ಯವಾಗಿಯೇ ಉಳಿದಿದೆ. ಆದರೆ ಪುರುಕುತ್ಸ, ಅಯೋಧ್ಯೆಯಲ್ಲಿಯೇ ಇದ್ದಿದ್ದರೆ, ಪುರುಕುತ್ಸಾನಿ ತ್ರಸದಸ್ಯವನ್ನು ಪಡೆಯಲಾಗುತ್ತಿರಲ್ಲಿಲ್ಲ ಎಂಬುದು ನಿಜ. ಹೀಗಾಗಿ ಕೃತಿಕಾರರ ತಂತ್ರವಾಗಿರಬಹುದು ಎನ್ನಿಸುತ್ತದೆ.

'ಗಂಗವ್ವ ಗಂಗಾಮಾಯಿ'ಯಲ್ಲಿ ರಾಘುಪ್ಪನಂತಹ ವ್ಯಕ್ತಿಯನ್ನು ಕೆಡಕಿನ ಸ್ವರೂಪವನ್ನು ತಂದ ಪುಣೇಕರರೂ, ಕೆಡಕಿನ ಸ್ವರೂಪದ ಜೊತೆ ಜೊತೆಯಲ್ಲಿಯೇ ಆತನ ದುರಂತಜೀವನವನ್ನು ಪರಿಚಯಸುತ್ತಾರೆ. ಆತ ಬರೆದಿಟ್ಟ ಪತ್ರವೇ ಇದನ್ನು ಸ್ಪಷ್ಟಪಡಿಸುತ್ತದೆ. ಹಾಗೆಯೇ ಪುರುಕುತ್ಸಾನಿಯ ರಾಜಕೀಯ ತಂತ್ರಗಳನ್ನಷ್ಟೇ ಗಮನಿಸಿದವರಿಗೆ, ಆಕೆಯ ದುರಂತ ಜೀವನದ ಪರಿಚಯವಾಗಲಾರದು ತಂದೆ-ತಾಯಿಯ ವಂಚನೆಯಿಂದ ಅಣ್ಣನನ್ನೇ ಗಂಡನಾಗಿ ಪಡೆಯಬೇಕಾದದ್ದು, ಪುರುಕುತ್ಸನೊಂದಿಗೆ ಸತಿ-ಪತಿ ಭಾವದೊಂದಿಗೆ ಸಂಸಾರ ನಡೆಸಲು ಸಾಧ್ಯವಾಗದೆ, ಪುರುಕುತ್ಸನ ಪರಸ್ತ್ರೀಗಮನದ ವ್ಯಭಿಚಾರವನ್ನು ಎದುರಿಗೆ ಸಹಿಸಬೇಕಾಗುತ್ತದೆ. ಅಷ್ಟೇ ಅಲ್ಲ ತಾನೇ ಆತನಿಗೆ ಹೆಣ್ಣುಗಳನ್ನು ಹೊದಗಿಸಿಕೊಡಬೇಕಾಗುತ್ತದೆ. ಆಗ ಸಾಮಾನ್ಯ ಸ್ತ್ರೀ ಸಹಜ ದುಃಖವನ್ನು ಕಾದಂಬರಿಯಲ್ಲಿ ಹೀಗ ಕಾಣಬಹುದು.

> "ಮಹಾರಾಣಿಯ ಕಣ್ಣಲ್ಲಿ ನೀರು ಊರಿತು. ತನ್ನನ ಗಂಡನ ಸೂಳೆಗಾಗಿ ತಾನೇ ಕುಂಟಲಗಿತ್ತಿಯಾಗಬೇಕಾಯಿತ್ತಲ್ಲಾ-ಎಂಬ ಕಲ್ಪನೆಯಿಂದ."[೨]

ಈ ರೀತಿಯ ಸಂದರ್ಭಗಳನ್ನು ನೋಡಿದಾಗ ಓದುಗರಿಗೆ ದುಃಖವಾಗದಿರದು. ರಾಜವಂಶ ಬೆಳೆಸಬೇಕಾದ ಅನಿವಾರ್ಯತೆಯ ಮಧ್ಯೆಯೇ 'ನಿಯೋಗ' ಪದ್ಧತಿಯ ಮೂಲಕ ಮಗು ಪಡೆದದ್ದು, ಮುಂದೆ ಮಗನ ಪ್ರತಿಭಟನೆ, ಭೀಮಭಟ್ಟ, ವೃಶನ ಕೊಂಕುನುಡಿ, ಅಯೋಧ್ಯೆ ಜನರ ಪಿಸುಮಾತು, ಸಿಂಹಭಟ್ಟ ಹುಚ್ಚನಾಗುವುದಕ್ಕೆ ತಾನೇ ಕಾರಣನೆಂದು ತಿಳಿ ಆತನ ಹುಚ್ಚು ಬಿಡಬಹುದೆಂಬ ಕಾರಣದಿಂದ ಒಬ್ಬ ರಾಣಿ ಸಾಮಾನ್ಯ ವ್ಯಕ್ತಿಯ ಸೂಳೆಯಾಗಬೇಕಾಗಿ ಬಂದಿದ್ದು, ಆತ ನೀಡಿದ 'ಹಿಂಸೆ'ಗಳೆಲ್ಲವನ್ನು ಮೌನವಾಗಿ ಯಾರಿಗೂ ಹೇಳಿಕೊಳ್ಳಲಾರದೆ ಸಹಿಸಿಕೊಂಡಿದ್ದು ಮಾತ್ರವಲ್ಲದೆ, ಕೊನೆಗೆ ಪ್ರಾಣಿ ಸಹಜ ಜೈವಿಕ ಬಯಕೆಯಿಂದ ತಾರ್ಕ್ಷ್ಯನೊಡನೆ ಲೈಂಗಿಕ ಸಂಬಂಧವನ್ನು ಹೊಂದುವುದರ ಹಿಂದಿನ ಹತಾಶೆ -ಇವುಗಳ ಮೂಲಕ ಹಾಯ್ದು ಬರುವಂತಹ ನರ್ಮದಾ ಪುರುಕುತ್ಸಾನಿಯ ಬದುಕು ದುರಂತಬದುಕಲ್ಲದೆ ಮತ್ತೇನು? "ಎಲ್ಲಾ ಕಾರ್ಯಗಳಲ್ಲೂ ಗೆದ್ದಂತೆ ತೋರಿಸಿಕೊಳ್ಳುವ ಪುರುಕುತ್ಸಾನಿ ಎಲ್ಲಾ ಕಡೆಯೂ ಸೋತಂತೆ ಗೋಚರಿಸುತ್ತಾಳೆ ಕೊನೆಗೆ ತ್ರಸದಸ್ಯುವಿಗೆ ಬಹುಬೇಗ ಪಟ್ಟಕಟ್ಟಿ ರಾಜಕೀಯ ಅಧಿಕಾರದಿಂದ ನಿವೃತ್ತಿ ಬಯಸುವುದು, ಅಪ್ರತ್ಯಕ್ಷ ಗಂಭೀರ ದುರಂತವೇ". ತಾರ್ಕ್ಷ್ಯ ಕಾಲಿಯ ಇಲ್ಲದೆ ಹೋಗಿದ್ದರೆ, ಅಯೋಧ್ಯೆ ಯಾವ ವೇಳೆಯಲ್ಲಾದರೂ, ಪರಕೀಯರ ಆಳ್ವಿಕೆ ಒಳಪಡುತ್ತಿದ್ದದ್ದರಲ್ಲಿ ಸಂದೇಹವಿಲ್ಲ. ಪುರುಕುತ್ಸಾನಿ ಅವಧೇಶ್ವರಿಯಾಗುತ್ತಿರಲಿಲ್ಲ.

ತ್ರಸದಸ್ಯುವಿನ ಹುಟ್ಟು 'ನಿಯೋಗ ಪದ್ಧತಿ'ಯ ಮೂಲಕ ವರ್ಣಸಂಕರದಿಂದ ಆದದ್ದು. ಈತನ ಹುಟ್ಟೇ ಒಂದು ರೀತಿಯ ಸಮಸ್ಯೆಗಳ ಸರಪಳಿಯ ಹುಟ್ಟಾಗುತ್ತದೆ. ಪುರುಕುತ್ಸಾನಿಯಂತೆ ಈತನು ಆಡಳಿತ ನಡೆಸಲಾಗಲಿಲ್ಲ. ಅಂತೂ ತ್ರಸದಸ್ಯುವಿನ ರಾಜ್ಯ ಅನೇಕ ಪಾತಳಿಗಳಲ್ಲಿ ವಿಘಟಿತವಾಗ ತೊಡಗಿತ್ತು. ಕುಲ-ಕುಲಗಳಲ್ಲಿ, ಜಾತಿ-ಜಾತಿಗಳಲ್ಲಿ, ವೃತ್ತಿ-ವೃತ್ತಿಗಳಲ್ಲಿ, ಗಂಡು-ಹೆಣ್ಣುಗಳಲ್ಲಿ ಅಷ್ಟೇ ಅಲ್ಲ ಅಧಿಕಾರಿ-ಅಧಿಕಾರಿಗಳ ನಡುವೆ, ವ್ಯಕ್ತಿ-ವ್ಯಕ್ತಿಗಳ ನಡುವೆ ಬಿರುಕಿನ ಭಾಗ ಒಮ್ಮೆಲೇ ಕಾಣತೊಡಗಿತ್ತು'' ಎಂದು ಕೃತಿಕಾರರೇ ಬರೆಯುತ್ತಾರೆ.

ರಾಜರ ಅಧೀನದಲ್ಲಿದ್ದ ಪುರೋಹಿತರು ತ್ರಸದಸ್ಯುವಿನ ಕಾಲದಲ್ಲಿ ರಾಜನಿಗೆ ಸವಾಲಾಗುತ್ತಾರೆ. ಗಜಾನನನ ಮೇಲೆ ರಾಜ ರಥ ಹರಿದ ಸಂದರ್ಭವನ್ನೇ ಇದಕ್ಕೆ ಉದಾಹರಿಸಬಹುದು. ವೃಶ ರಾಜರಥವನ್ನು ನಡೆಸುತ್ತಿದ್ದಾಗ ಗಜಾನನ ಎಂಬ ಮಗುವಿನ ಮೇಲೆ ಹರಿದು ಪ್ರಜ್ಞೆ ತಪ್ಪಿದಾಗ, ವೃಶ ತ್ರಸದಸ್ಯುವೇ ರಥ ನಡೆಸುತ್ತಿದ್ದ ಎಂದು ಇಡೀ ಪಟ್ಟಣದಲ್ಲಿಯೇ ಸುದ್ದಿ ಹಬ್ಬಿಸುತ್ತಾನೆ.

ಮುಂದೆ ಸ್ವತಃ ರಾಜನೇ ನೇರವಾಗಿ ಅಪರಾಧಿಯ ಸ್ಥಾನದಲ್ಲಿ ನಿಂತು ವಿಚಾರಣೆಗೆ ಒಳಗಾಗಬೇಕಾಗುತ್ತದೆ. ತ್ರಸದಸ್ಯು ನ್ಯಾಯ ವಿಚಾರಣೆಗೆ ಒಳಗಾಗುವುದು ಮೇಲ್ನೋಟಕ್ಕೆ ನ್ಯಾಯ ಪಕ್ಷಪಾತವನ್ನು ತೋರಿಸುತ್ತಿದ್ದರೆ, ಒಳಪದರದಲ್ಲಿ 'ಇಗೋ ನೋಡಿ ನಾನು ಸಭ್ಯ, ನ್ಯಾಯ ಪರಿಪಾಲಕ' ಎಂದು ತೋರಿಸಿಕೊಳ್ಳುವ ಮನೋಭಾವವೂ ಸಹ ಸೇರಿಕೊಂಡಿದೆ. ಏಕೆಂದರೆ ಸುಲಭವಾಗಿ ಬಗೆಹರಿಯುವ ಸಮಸ್ಯೆಯನ್ನು ದೊಡ್ಡದಾಗಿ ತ್ರಸದಸ್ಯುವೇ ಮಾಡುತ್ತಾನೆ. ಅಷ್ಟೇ ಅಲ್ಲ. ಅಯೋಧ್ಯೆಯಲ್ಲಿ ಉಂಟಾದ ಬಿಕ್ಕಟ್ಟಿಗೆ ಕಾಶಿ ರಾಜರನ್ನು ಕರೆಯಿಸಿ ನ್ಯಾಯನಿರ್ಣಯ ಮಾಡಬೇಕಾದ ಅವಶ್ಯಕತೆಯೇ ಇರಲಿಲ್ಲ. ಇದು ತ್ರಸದಸ್ಯುವಿನ ಮಾನಸಿಕ ಕ್ಷೋಭೆಯ ಫಲ. ತಾನು ಯಾರೆಂದು ನಿರೂಪಿಸುವ ಮನೋಭಾವ ಮನಸ್ಸಿನಲ್ಲಿ ಮೂಡಿ ಇಷ್ಟೆಲ್ಲಾ ಕೆಲಸಗಳನ್ನು ಮಾಡಿಸುತ್ತದೆ. ಜೊತೆಗೆ ತನ್ನಲ್ಲಿರುವ ದ್ವಂದ್ವವನ್ನು ತೋರಿಸಿಕೊಳ್ಳುತ್ತಾನೆ. ಏಕೆಂದರೆ ತ್ರಸದಸ್ಯುವಿಗೆ ತಾನು 'ಯಾರ ಮಗನೆಂದು' ನಿರೂಪಿಸಿಕೊಳ್ಳುವ ಸಮಸ್ಯೆಯನ್ನು ಕಾಣುತ್ತೇವೆ. ಕೊನೆಯಲ್ಲಿ ನೀನು "ದೇವಾಂಶ ಸಂಭೂತ" ಎಂದಾಗ ತಾನು 'ಅರ್ಧದೇವ' ಎಂದು ನಂಬುತ್ತಾನೆ. ಅಂತ್ಯದಲ್ಲಿ ಇಷ್ಟೆಲ್ಲಾ ದ್ವಂದ್ವವಿರುವ ವ್ಯಕ್ತಿಯನ್ನು ಕಾದಂಬರಿಕಾರರು 'ಕವಿಯಾಗಿ' ದೇವರಾಗಿ ಉಳಿಸಿಕೊಳ್ಳುತ್ತಾರೆ.

ಹೀಗಾಗಿ ತ್ರಸದಸ್ಯು 'ಪುರುಕುತ್ಸಾನಿ'ಯ ಮುಂದೆ ಕುಬ್ಜನಾಗಿ ಕಾಣುತ್ತಾನೆ. ಪುರುಕುತ್ಸಾನಿಯ ವ್ಯಕ್ತಿತ್ವಕ್ಕೆ ತ್ರಸದಸ್ಯು ಎಂದೂ ಹೇರಲಾರ. ಆಕೆಯಂತೆ ಗುಪ್ತ ಆಡಳಿತವನ್ನು ನಡೆಸಲಾರ. ದುಡುಕು ಸ್ವಭಾವದ ವ್ಯಕ್ತಿಯಾಗಿ ತನ್ನ ಸಾಮ್ರಾಜ್ಯವನ್ನು ಕಾಪಾಡುವನೇ ಎಂಬುದರಲ್ಲಿ ಅನುಮಾನ ಕೃತಿಯಲ್ಲಿಯೇ ವ್ಯಕ್ತಗುತ್ತದೆ.

ಬ್ರಾಹ್ಮಣವರ್ಗದ ದಿನನಿತ್ಯದ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಬಹುದು. ಬ್ರಾಹ್ಮಣ ಬ್ರಾಹ್ಮಣರಲ್ಲಿಯೇ ಪರಸ್ಪರ ಭಿನ್ನಾಭಿಪ್ರಾಯವಿದ್ದು, ಕೇವಲ ದಾನ ಪಡೆಯುವುದರಲ್ಲಿಯೇ ಜೀವನದ

[illegible]

[illegible]

[illegible]

[illegible]

[illegible]

ಸಾರ್ಥಕತೆಯನ್ನು ಕಳೆಯುತ್ತಾರೆ. ದಾನ ಪಡೆಯುವುದಕ್ಕಾಗಿಯೇ ಪರಸ್ಪರ ತಿಕ್ಕಾಟವಿದೆ. ದಾನದ ಭಾಗವನ್ನು ಕಾಮುಕ ವ್ಯಭಿಚಾರಕ್ಕೆ ಮೀಸಲಿಡುವ ಇವರಿಗೆ ಕುಟುಂಬದಲ್ಲಿನ ಪತ್ನಿ ಮಕ್ಕಳ ಚಿಂತೆ ಅಷ್ಟೊಂದಿಲ್ಲ. ಕ್ಷತ್ರಿಯ ರಾಜ ಇಡೀ ರಾಜ್ಯವನ್ನೇ ನಿಯಂತ್ರಿಸಿದರೆ, ಬ್ರಾಹ್ಮಣರು ಮಂತ್ರ-ತಂತ್ರವೆಂಬ ಹೆಸರಿನಿಂದ ರಾಜರನ್ನು ನಿಯಂತ್ರಿಸುತ್ತಾರೆ.

ವೇದಗಳ ಕಾಲದ ಆಡಳಿತ ಪದ್ಧತಿಯು ಕೆಲವು ಪ್ರಜಾಪ್ರಭುತ್ವದ ಗುಣಗಳನ್ನು ಸಹ ಹೊಂದಿದೆ. ರಾಜರನ್ನು ಆಯ್ಕೆ ಮಾಡುವ ಅಧಿಕಾರ ಇಲ್ಲದಿದ್ದರೂ, ಪ್ರಜೆಗಳು ನೇರವಾಗಿ ರಾಜನ ಆದೇಶಗಳ ವಿರುದ್ಧ, ಮಾತಾನಾಡುತ್ತಾರೆ. ರಾಜ್ಯಾಡಳಿತವನ್ನು ವಿಮರ್ಶಿಸುತ್ತಾರೆ. ಜೊತೆಗೆ ಸಲಹೆ ಸಹಕಾರವನ್ನು ನೀಡುತ್ತಾರೆ.

ವೇದಗಳ ಕಾಲದಲ್ಲಿ ಕ್ಷತ್ರಿಯ ಹಾಗೂ ಬ್ರಾಹ್ಮಣ ಎಂಬ ಎರಡು ಕುಲಗಳು ಮಾತ್ರ ಇದ್ದವೆ ಎಂಬ ಅನುಮಾನ ಬರುತ್ತದೆ. ಏಕೆಂದರೆ ಇದೇ ಕಾದಂಬರಿಯಲ್ಲಿ ಬ್ರಾಹ್ಮಣ, ಕ್ಷತ್ರಿಯರ ವಿಚಾರಧಾರೆಗಳನ್ನು ಬಿಟ್ಟರೆ, ಬೇರೆ ಯಾವ ವರ್ಗದ ಪರಿಚಯವನ್ನು ನಮಗೆ ಮಾಡಿಸಲಾರದು. ಆದರೆ ಆಯೋಧ್ಯಯ ಸುತ್ತಮುತ್ತಲ ಕಾಡುಗಳಲ್ಲಿ ನಾಗ ಬಿಲ್ಲವರು ಇರುವುದನ್ನು ಕೃತಿಕಾರರು ಆಯೋಧ್ಯೆಯ ಪರಿಮಿತಿಯೊಳಗೆ ಇವರನ್ನು ತಂದಿಲ್ಲವೆಂದೆನಿಸುತ್ತದೆ. ಆದರೆ

> "ನಾಗರ ಸಂಖ್ಯೆ ಬೆಳೆದಂತೆ ಅವರೂ ಕುರುಜಾಂಗಲದಲ್ಲಿ ನೆಲೆಸ ತೊಡಗಿದರು. ನಮ್ಮ ಜನರಿಗೆ ಉಪದ್ರವ ಕೊಡತೊಡಗಿದರು. ಅವರ ಉಪಟಳ ಸಹಿಸದೆ ನಮ್ಮ ಹಿರಿಯರು ಕಾನ್ಯಕುಬ್ಜದ ಈ ಅಡವಿಗಳಲ್ಲಿ ನೆಲಸಿದರು. ನಮ್ಮನ್ನು ತಪ್ಪಾಗಿ ಅಸುರರೆಂದು ಇಲ್ಲಿಯ ಜನರು ಕರೆಯುತ್ತಾರೆ. ಭಾರತೀಯ ಜನರಿಗೆ ಎಲ್ಲ ವಿದೇಶಿಯರೂ ಅಸುರರೆಂದೇ ಭಾವನೆ ನಾವು ಅಸುರರಲ್ಲ ಮ್ಲೇಚ್ಛರು ಮೊದಲು ಮಲೋಚ್ ದೇವತೆಯ ಭಕ್ತರು. ಲಕುಲೀಶ ಬಂದ ಮೇಲೆ ನಾವು ಲಕುಲೀಶರಾದೆವು. ಅರ್ಮಾನ ದೇಶದವರು ನಮ್ಮನ್ನು ಹೊರಗೆ ಅಟ್ಟಿದ ಮೂಲಕ ನಮ್ಮ ನಮ್ಮ ತಂಡಗಳು ಅಲ್ಲಲ್ಲಿ ನೆಲಸಿದವು. ನಮ್ಮ ತಂಡವೊಂದು ಭಾರತಕ್ಕೆ ಬಂದು ಕುರುಜಾಂಗಲದಲ್ಲಿ ನೆಲೆಸಿತ್ತು. ಇಲ್ಲಿರುವವರೆಗೆ ನಾವು ನಮ್ಮ ಕುಲರಕ್ತದ ಶುದ್ಧಿಯನ್ನು ಕಾಯ್ದಿದ್ದೇವೆ. ನಮ್ಮ ಹೆಣ್ಣು ಮಕ್ಕಳನ್ನು ನಮ್ಮ ಕುಲದವರಿಗೇ ಕೊಡುತ್ತೇವೆ. ನಮ್ಮವರು ಇಲ್ಲಿಯ ಹೆಣ್ಣುಮಕ್ಕಳನ್ನು ಲಗ್ನವಾಗುದಿಲ್ಲ. ಈ ಧರ್ಮಸೂಕ್ಷ್ಮ ವಿಚಾರವನ್ನು"[೩]

ಎಂದು ಶಂಬರಾಸುರ ಹೇಳುವಾಗ ಮೂಲದಲ್ಲಿ ಕೆಲವು ಪಂಗಡಗಳು ಭಾರತದಲ್ಲಿದ್ದವು. ಅಲ್ಲದೆ ಹೊರದೇಶದಿಂದಲೂ ಕೆಲವು ಪಂಗಡಗಳು ಬಂದವೆಂಬುದನ್ನು ಸೂಚಿಸುತ್ತಿದೆ. ಜೊತೆಗೆ ಕೃತಿಯಲ್ಲಿಯೇ ಹೇಳುವಂತೆ ಹೊರದೇಶದಿಂದ ಬಂದವರವನ್ನು ಮೂಲ ಪಂಗಡದವರು ಅಸುರರೆಂದು ಕರೆದು ಅವರನ್ನು ತಮ್ಮ ಸಮುದಾಯದಿಂದ ಬೇರ್ಪಡಿಸಿಟ್ಟಿರು. ಮುಂದೆ ಈ ಬೇರ್ಪಡಿಸಿದ್ದ ಸಮುದಾಯದ ಜನರೇ ಕೆಳವರ್ಗದ ಪಂಗಡವಾಗಿರಬಹುದೆಂಬ ಸುಳಿವನ್ನು ಕೃತಿ ನೀಡುತ್ತದೆ. ಹೀಗಾಗಿಯೇ ಮೇಲ್ಜಾತಿ-ಕೆಳಜಾತಿ

ಎಂಬ ತಾರತಮ್ಯ ಉದ್ಭವಿಸಿ, ಈ ರೀತಿ ನೀತಿಯೇ ಮುಂದೆ ತಲೆಮಾರುಗಳಿಂದ-ತಲೆಮಾರುಗಳಿಗೆ, ಈ ಒಂದು ಸಂಸ್ಕೃತಿಯು ಪರಂಪರೆಯಾಗಿ, ಬೆಳೆದು ಬಂದು ವರ್ಗ ಅಸಮಾನತೆಯು ಉದ್ಭವಿಸಿರಬಹುದು ಎಂಬ ಸುಳಿವು ನೀಡಿರುವುದು ಪುಣೇಕರರು ಮಾಡಿರುವ ಸಂಶೋಧನೆಯ ಫಲವಾಗಿ ಕಾಣುತ್ತದೆ.

ಸ್ತ್ರೀಯರನ್ನು ಬಲತ್ಕರಿಸುವುದು ಆಧುನಿಕ ಸಮಾಜದ ಶಿಕ್ಷಾರ್ಹ ಅಪರಾಧ ಎಂಬ ಚಿಂತನೆಯೂ ವೇದಗಳ ಕಾಲದಲ್ಲಿಯೂ ಇತ್ತೆ ಎಂಬುದರ ಬಗ್ಗೆ ಕಾದಂಬರಿ ಬೆಳಕು ಬೀರುತ್ತದೆ. ಏಕೆಂದರೆ ದುರ್ಗಸಿಂಹ ಶ್ರವಣ ಎಂಬ ಶಬರ ಕನ್ಯೆಯನ್ನು ಅತ್ಯಾಚಾರ ಮಾಡಿದ ಸಂದರ್ಭದಲ್ಲಿ ಆ ಶಬರ ಜನಾಂಗದವರು ದುರ್ಗಸಿಂಹನನ್ನು ಶಿಕ್ಷೆಗೆ ಒಳಪಡಿಸುವುದನ್ನು ಕಾಣಬಹುದು. ಹೀಗಾಗಿ ಆಗಿನ ಕಾಲದಲ್ಲಿಯೂ ಈ ರೀತಿಯ ಕಾನೂನು ಇತ್ತೆಂದು ಹೇಳಬೇಕಾಗುತ್ತದೆ.

ಪುರುಕುತ್ಸಾನಿಯಂತೆ ಈ ಕಾದಂಬರಿಯಲ್ಲಿ ಬರುವ ಎಲ್ಲಾ ಸ್ತ್ರೀ ಪಾತ್ರಗಳು ಚರ್ಚಾರ್ಹವಾಗಿದೆ. ಸವತಿ ಮತ್ಸರದಿಂದ ವಿಕಲಾಂಗ ಮಗುನ್ನು ಪಡೆಯಬೇಕಾದ ಯಾದವಿಯು ತನ್ನ ಗರ್ಭದಲ್ಲಿರುವ ಮಗು ಯಾವ ತಪ್ಪು ಮಾಡಿತ್ತು. ನೇರವಾಗಿ ಉತ್ತರ ಕೊಡಿ. ಪುರ್ನಜನ್ಮದ ಕತೆಯನ್ನು ಬಿಚ್ಚಬೇಡಿರಿ ಎಂದು ಋಷಭಮುನಿಗಳನ್ನು ಪ್ರಶ್ನಿಸುವುದು 'ಆಧುನಿಕ ಬದುಕಿನ ಚಿಂತನೆಯಂತೆ' ಕಾಣುತ್ತದೆ. ಏಕೆಂದರೆ ಇಲ್ಲಿಯವರಿಗೂ ಪುನರ್ಜನ್ಮದ ಬಗ್ಗೆ ನಂಬಿಕೆ ಅಷ್ಟೊಂದಿಲ್ಲ. ಹಾಗೂ ಈ ಋಷಿಮುನಿಗಳು ಸ್ವರ್ಗ, ನರಕ, ಪುನರ್ಜನ್ಮದ ಹೆಸರಿನಲ್ಲಿ ಸಾಮಾನ್ಯರ ಬದುಕಿನಲ್ಲಿ ಭಯದ ವಾತಾವರಣ ನಿರ್ಮಿಸುತ್ತಿದ್ದರೇನೋ? ಆದಕ್ಕಾಗಿ ಯಾದವಿ ಮೇಲ್ಕಂಡಂತೆ ನೇರವಾಗಿ ಕೇಳಿಕೊಳ್ಳುತ್ತಾಳೆ. ಮೃಗನಯನೆ ಪುರುಕುತ್ಸನೊಂದಿಗೆ ಇಪ್ಪತ್ತು ವರ್ಷ ಸೆರೆಮನೆಯಲ್ಲಿದ್ದು, ರೋಗಿಯಾದ ಪುರುಕುತ್ಸನ ಸೇವೆ ಮಾಡುತ್ತಾಳೆ. ಪುರುಕುತ್ಸನಿಗೆ ಪುರುಕುತ್ಸಾನಿ ನೀಡಬೇಕಾದ ಸುಖವನ್ನು ನೀಡುತ್ತಾಳೆ. ಅದೇ ರೀತಿ ಪಕ್ಷ್ಮಾದೇವಿ, ಶಾಂಕಿ, ಕೃಪಾದೇವಿ, ಕೇಶಿ ಮುಂತಾದ ಸ್ತ್ರೀ ಪಾತ್ರಗಳು ವೈವಿಧ್ಯತೆಯಿಂದ ಕೂಡಿ ಅಧ್ಯಯನ ಯೋಗ್ಯವಾಗಿವೆ.

ಕಾದಂಬರಿಯು ರಾಜವಂಶದ ರಕ್ತ ಶುದ್ಧತೆಯ ಬಗೆಗೆ ಆಧುನಿಕತೆಯ ನೆರಳಿನಲ್ಲಿ ಚರ್ಚಿಸುತ್ತದೆ. ಕುಲದ ಪಾವಿತ್ರ್ಯ, ರಕ್ತಶುದ್ಧಿಗಾಗಿ ಎಲ್ಲಾರು ವಿಶೇಷ ಕಾಳಜಿವಹಿಸುತ್ತಾರೆ. ಆದರೆ ಈ ಕುಲದ ಪಾವಿತ್ರ್ಯ ಅಳಿಯುವುದನ್ನು ಕಾದಂಬರಿಯು ಸೂಕ್ಷ್ಮವಾಗಿ ಗಮನಿಸಿದೆ. ಮಾಂದಾತ ಮಹಾರಾಜನ ಕಾಲದಲ್ಲಿಯೇ ರಕ್ತಶುದ್ಧತೆಯು ಉಳಿಯಲಿಲ್ಲ. ಹೀಗಾಗಿ ಪುರುಕುತ್ಸ ಪುರುಕುತ್ಸಾನಿಯರ ಮದುವೆ ಮಾಡಿದರೂ, ತ್ರಸದಸ್ಯು ಜನಿಸಿದ್ದು ವರ್ಣ ಸಂಕರದಿಂದ. ಸಿಂಹಭಟ್ಟನೆಂಬ ಬ್ರಾಹ್ಮಣನಿಗೆ. ಅದೇ ರೀತಿ

> "ಶಂಬರಾಸುರನು ಹೀಗೆ ಹೇಳುತ್ತಾನೆ. ನಮ್ಮ ರಕ್ತ ಶುದ್ಧತೆಯಲ್ಲಿಯೇ ನಮ್ಮ ಕುಲದ ಸ್ವಾತಂತ್ರ್ಯ ಕಾದಿದೆ, ಆದರೆ ನನ್ನ ಮೊಮ್ಮಗಳಾದ ಕ್ಲಿಯೋರಾಣಿಯಿಂದಲೇ ಅಶುದ್ಧ ಸಂತತಿ ಪ್ರಾರಂಭವಾದದ್ದು ನನಗೆ ಅಗೌರವ"[೪]

ಎಂದು. ಹೀಗೆ ರಕ್ತಶುದ್ಧತೆಯ ಪ್ರಶ್ನೆಯೇ ಹಾಸ್ಯಾಸ್ಪದವಾಗುತ್ತದೆ.

[illegible]

[illegible]

[illegible]

[illegible]

ಕೃತಿಯಲ್ಲಿ ಸ್ತ್ರೀಯೊಬ್ಬಳು ಗಳಿಸಿಕೊಳ್ಳುವ ಶಕ್ತಿಸಾಮರ್ಥ್ಯಗಳು ಮತ್ತು ರಾಜವಂಶದ ಆಡಳಿತವನ್ನು ಸ್ಥಿರಗೊಳಿಸುವ ಕ್ರಮಗಳು ಯಾವೊಬ್ಬ ಪುರುಷನಿಗಿಂತಲೂ ಮೇಲ್ಮಟದವು ಎಂದೇ ಹೇಳಬಹುದು. ಅಷ್ಟೇ ಅಲ್ಲ ಕಾದಂಬರಿ ರಚಿಸುವ ವೇಳೆಯಲ್ಲಿ ೧೯೭೦-೮೦ರ ದಶಕದ ಭಾರತೀಯ ರಾಜಕಾರಣವನ್ನು ನೆನಪಿಗೆ ತಂದುಕೊಂಡಿದ್ದರೆ ಆಶ್ಚರ್ಯವಿಲ್ಲ.

ಪುರಕುತ್ಸಾನಿ ದೈವಭಕ್ತೆಯು ಹೌದು. ಹೀಗಾಗಿ ಕಾದಂಬರಿ "ಸಂಪ್ರದಾಯ ಹಾಗೂ ಆಧುನಿಕತೆ" ಒಟ್ಟಿಗೆ ಬೆಸೆದಿದೆ. ಪುರುಕುತ್ಸಾನಿ ತನ್ನ ಆಡಳಿತದ ವೈಖರಿಯಿಂದ ಆಧುನಿಕ ಬದುಕಿನತ್ತ ಚಿಂತಿಸಿದರೆ, ಮಕ್ಕಳನ್ನು ಪಡೆಯಲು ದೈವದ ಮರೆಹೋಗುತ್ತಾಳೆ. ವೇದಗಳ ಕಾಲದಲ್ಲಿ ಪುರೋಹಿತ ತನವೂ ಮಹತ್ವದ ಕಾರ್ಯವಾಗಿದ್ದು, ಇವರು ಸದಾ ಒಂದಿಲ್ಲೊಂದು ಯಜ್ಞ ಯಾಗಾದಿಗಳಲ್ಲಿ ತೊಡಗುವುದನ್ನು ಕಾಣಬಹುದು. ಬ್ರಾಹ್ಮಣರು ದಾನ ಪಡೆಯಲು ಯಾವ ಯಾಗವನ್ನಾದರೂ ಕೂಡ ಮಾಬಡಬಲ್ಲರು. ಹೀಗಾಗಿ ರಾಜಪುರೋಹಿತರಾಗಲು ಬ್ರಾಹ್ಮಣರಲ್ಲಿಯೇ ಅಂತಃಕಲಹ ಏರ್ಪಡುವುದನ್ನು ಕಾಣಬಹುದು. ಜೊತೆಯಲ್ಲಿಯೇ ಬ್ರಾಹ್ಮಣ-ಕ್ಷತ್ರಿಯ ಪಂಗಡಗಳ ನಡುವೆ ಸಂಘರ್ಷ ನಡೆಯುವುದನ್ನು ಕಾಣಬಹುದು.

ಪುರುಕುತ್ಸಾನಿ ರಾಣಿಯೂ ಎದುರಿಸುವ ರಾಜಕೀಯ ಸಮಸ್ಯೆಗಳು ಹೆಚ್ಚಾಗಿ ಕ್ಷತ್ರಿಯರೊಂದಿಗೆ. ಆದರೆ ತ್ರಸದಸ್ಯು ಎದುರಿಸುವ ಸಮಸ್ಯೆಗಳು ಪುರೋಹಿತ ವರ್ಗದೊಂದಿಗೆ. ಬ್ರಾಹ್ಮಣರೊಂದಿಗೆ ಘರ್ಷಣೆಗೆ ಯಾವಾಗಲೂ ಇಳಿಯದ ಕ್ಷತ್ರಿಯ ರಾಜರು, ಇಲ್ಲಿ ತ್ರಸದಸ್ಯು ನೇರವಾಗಿ ಭೀಮಭಟ್ಟ ವೃಶಜಾನನೊಂದಿಗೆ ನ್ಯಾಯಾಂಗ ಘರ್ಷಣೆಗೆ ಇಳಿದು, ತ್ರಸದಸ್ಯುವೇ ಧರ್ಮದ ರೀತಿಯಲ್ಲಿಯೇ ವಿಜಯಗಳಿಸುವುದು ರಾಜಪುರೋಹಿತರೇ ಮೇಲು ಎಂಬ ಸಂಪ್ರದಾಯದ ಮುರಿತವಾಗಿದೆ.

ಜೊತೆಗೆ ರಾಜಕೀಯ ಅಸ್ಥಿರತೆಯು ಅಳಿಯುತ್ತಾ ಬಂದಂತೆ ಕಾಲಕ್ರಮದಲ್ಲಿ ಬ್ರಾಹ್ಮಣರ, ಅವರು ಮಾಡುವ ಯಜ್ಞಗಳು ಹಾಗೂ ಆಶ್ರಮಗಳ ಪಾವಿತ್ರ್ಯವೂ ಅಳಿದು 'ವಿಡಂಬನೆಯೇ' ಪ್ರಮುಖ ಸ್ಥಾನ ಪಡೆದಿದೆ. ಏಕೆಂದರೆ ದೇಮದೇವರು, ಋಷಭಮುನಿಗಳು ಮುಂತಾದ ಋಷಿಮುನಿಗಳ ಬಗ್ಗೆ ಇದ್ದ ನಂಬಿಕೆ ಸಾಮಾನ್ಯಜನರಿಂದ ದೂರವಾಗುತ್ತ ಸಾಗುತ್ತದೆ. ಇದಕ್ಕೆ ಯಾದವಿಯ ಪುನರ್ಜನ್ಮದ ಕಥೆ ಹೇಳಬೇಡಿರಿ" ಎಂದು ಹೇಳುವುದನ್ನೇ ನೋಡಬಹುದು. ಬ್ರಾಹ್ಮಣರೆಂದರ ವ್ಯಭಿಚಾರಿಗಳು ಎಂಬ ಭಾವನೆ ಕಾದಂಬರಿಯಲ್ಲಿ ಬಲವಾಗಿದೆ. ತಾಕ್ಷ್ಯ, ಕಾಲಿಯೂ, ಶಂಬರಾಸುರರಂತಹ ನಾಗ, ಬಿಲ್ಲವ ಜನಾಂಗಕ್ಕೆ ಕೊಟ್ಟ ಮಹತ್ವವನ್ನು ಬ್ರಾಹ್ಮಣವರ್ಗಕ್ಕೆ ನೀಡಿಲ್ಲದಿರುವುದು, ಇಂದಿನ ಆಧುನಿಕ ವ್ಯವಸ್ಥೆಯನ್ನು ಬೆಳೆಸಿ ಸಂಪ್ರದಾಯವನ್ನು ಅಳಿಸುವುದು ಒಂದು ಕಡೆಯಾದರೆ, ನಾಗ, ಕ್ಷತ್ರೀಯರು ನೈತಿಕ ಮೌಲ್ಯಗಳಿಂದ ಕೂಡಿ ಈ ಮೌಲ್ಯವನ್ನೆ ಬದುಕಿನ ಮೂಲ ಮಂತ್ರವಾಗಿ ಮಾಡಿಕೊಂಡಿದ್ದಾರೆ.

ಪುಣೇಕರರು ಕೃತಿ ರಚಿಸುವಾಗ ಕರ್ನಾಟಕದ ಸಾಹಿತ್ಯ ವಲಯದಲ್ಲಿ ದಲಿತ-ಬಂಡಾಯ ಚಳುವಳಿಯು ಉದ್ಭವಿಸಿ ಬಲಿಷ್ಠವಾಗಿತ್ತು. ಹೀಗಾಗಿ ಬಂಡಾಯ ಧೋರಣೆಗಳನ್ನು ಕೃತಿಯಲ್ಲಿ ತೆಳುವಾಗಿ ಕಾಣಬಹುದು. ಬ್ರಾಹ್ಮಣವರ್ಗದ ಆಚಾರ-ವಿಚಾರ, ಯಜ್ಞ-ಯಾಗಾದಿಗಳೊಂದಿಗಿನ ಬಂಡಾಯವೂ ಕೃತಿಯ

ಅಂತರಂಗದಲ್ಲಿ ತಣ್ಣನೆಯ ರೂಪದಲ್ಲಿ ವ್ಯಕ್ತವಾಗಿದೆ. "ವೇದ ಋಚೆಗಳನ್ನು ರಚಿಸಿದವರೆಲ್ಲ ಋಷಿಗಳಲ್ಲ" ಎಂದು ಹೇಳುವುದರ ಮೂಲಕ ಕ್ಷಾತ್ರ ಮೌಲ್ಯಗಳ ಭ್ರಮ ನಿರಸನವೇ ಕೃತಿಯ ಪ್ರಮುಖ ಧ್ವನಿಯಾಗಿದೆ. ಹೀಗಾಗಿ ಸಂಪ್ರದಾಯ ಹಾಗೂ ಆಧುನಿಕತೆಯ ಸಂಘರ್ಷವಾಗುತ್ತದೆ.

ಕಾದಂಬರಿಯ ಮುಖಪುಟದಲ್ಲಿರುವ ಅಂಶಗಳು, ದೊಡ್ಡ ಆನೆಯೊಂದು ದೀನ ಮುಖದಿಂದ ಎರಡು ಚೇಳುಗಳ ಕುಟುಕು ಸಹಿಸುತ್ತಿದೆ. ಚೇಳು-ವೃಶ್ಚಿಕ ವೈಶಜಾನ. ಇನ್ನೊಂದರಲ್ಲಿ ಒಂದು ಕಾಡುಮಿಕವು ಎರಡು ನಕ್ಷತ್ರಗಳಲ್ಲಿ ಕಣ್ಣು ಸಿಕ್ಕಿಸಿ ಬೀಸುಗಾಲಿನಿಂದ ನಡೆಯುತ್ತಿದೆ. ಬೆನ್ನಟ್ಟಿದ ಎರಡು ಚೇಳುಗಳು ಹಿಂದೆ ಬಿದ್ದಿವೆ. ಒಬ್ಬ ಹುಡುಗ ಮಧ್ಯೆ ನಿಂತಿದ್ದಾನೆ. ಹೀಗಾಗಿ ಆನೆಯ ಗಂಭೀರವ್ಯಕ್ತಿತ್ವ ಒಂದೆಡೆಯಾದರೆ, ಕಾಡಮಿಕವೂ ನಕ್ಷತ್ರಗಳನ್ನು ನೋಡುತ್ತಿರುವುದು, ನಾನು 'ದೈವಾಂಶ ಸಂಭೂತ ಅರ್ಧದೇವ' ಎಂಬ ತ್ರಸದಸ್ಯು ತಿಳಿದುಕೊಂಡಿರುವುದನ್ನು ಸೂಚಿಸುತ್ತಿದೆ. ಈ ಮೂಲಕ ತ್ರಸದಸ್ಯು ಕೊನೆಯಲ್ಲಿ ಮಾನಸಿಕ ಸಂತೋಷ ಅನುಭವಿಸಿ ಕವಿಯಾಗುವುದು. ಚೇಳುಗಳ ಚಿತ್ರಣವೂ ಭೀಮಭಟ್ಟ ಹಾಗೂ ವೃಶಭಟ್ಟರ ವ್ಯಕ್ತಿತ್ವವನ್ನು ಸೂಚಿಸುತ್ತಿದೆ. ತ್ರಸದಸ್ಯುವಿಗೆ ತೊಂದರೆ ಕೊಡುವುದೇ ಇವರ ಕೆಲಸ. ಒಟ್ಟಾರೆ ಬ್ರಾಹ್ಮಣರನ್ನು ಚೇಳುಗಳಿಗೆ ಹೋಲಿಸಿರುವುದು ಕಂಡುಬಂದಿದೆ.

ಅಷ್ಟೇ ಅಲ್ಲ "ಪುರುಕುತ್ಸ ಇಷ್ಟು ಕೆಟ್ಟವನಲ್ಲ. ನಾನೇ ಸಾಂದರ್ಭಿಕ ಹೀಗೆ ಚಿತ್ರಿಸಬೇಕಾಯಿತು" ಎಂದು ಹೇಳಿರುವುದನ್ನು ಗಮನಿಸಿದಾಗ ಪುಣೇಕರರು ಪುರುಕುತ್ಸಾನಿಯ ಪಾತ್ರವನ್ನು ವೈಭವಿಕರಿಸಲು ಹೀಗೆ ಮಾಡಿದ್ದಾರೆ. ಹೀಗಾಗಿ ಸಂಶೋಧನೆಯಲ್ಲಿ ದೊರೆತ ಕೆಲವು ಅಂಶಗಳಿಂದ ತಮ್ಮ ಭಾವನೆಯ ಆಧಾರದ ಮೇಲೆ ಕೃತಿ ರಚಿಸಿದ್ದಾರೆ.

> "ಅದಕ್ಕಾಗಿಯೇ ಕನ್ನಡ ಕೇಂದ್ರ ಪರಂಪರೆಗೆ ದನಿ ಕೂಡಿಸುವ ಈ ಯತ್ನವನ್ನು ಕಾದಂಬರಿಯಾಗಿಯೇ "ಓದಬೇಕು ಸಂಶೋಧನೆಯಿಂದಲ್ಲ"[೫]

ಎಂದು ಹೇಳಿರುವುದು. ಆದರೆ ಈ ಕಾದಂಬರಿ ಮಹತ್ವ ಕೊಡುವುದು ಹಿರಿಯ ತಲೆಮಾರಿಗೆ. ತರುಣ ತಲೆಮಾರು ದುರ್ಬಲ ಎಂಬ ಭಾವನೆಯು ಗಂಗವ್ವ ಗಂಗಾಮಾಯಿ ನಟನಾರಾಯಣಿ ಕೃತಿಗಳಂತೆಯೇ ಇಲ್ಲಿಯೂ ಮನೆ ಮಾಡಿದೆ. ಇದು ಆಧುನಿಕತೆಯ ಪರಿಣಾಮ ಎಂದು ಲೇಖಕರ ಭಾವನೆಯ ಜೊತೆಗೆ ವಿಡಂಬನೆಯೂ ಆಗಿದೆ.

ಒಟ್ಟಾರೆ ಪುಣೇಕರರು ಮೂರು ಕಾದಂಬರಿಗಳಲ್ಲಿ ಪುರುಷ ಪಾತ್ರಗಳನ್ನು 'ಅನೈತಿಕ ಸಂಬಂಧ ಹೊಂದಿರುವ ಪಾತ್ರಗಳಾಗಿ ಚಿತ್ರಿಸಿದ್ದಾರೆ. ಸ್ತ್ರೀಯರು ನೈತಿಕ ಮೌಲ್ಯಗಳ ಗಣಿಯಾಗಿದ್ದಾರೆ. ಜೊತೆಗೆ ಮೇಲ್ವರ್ಗ ಬ್ರಾಹ್ಮಣ ಜೀವನ ಪದ್ಧತಿಯನ್ನೇ ಆಧರಿಸಿ ಮೂರು ಕಾದಂಬರಿಯನ್ನು ರಚಿಸಿರುವುದು ಒಂದು ಕಡೆಯಾದರೆ, ೧೯೭೦-ಆಂರ ದಶಕದಲ್ಲಿ ನವ್ಯೋತ್ತರ ಸಾಹಿತ್ಯ ಚಳುವಳಿಯೂ ಸಮಾಜದ ಅತ್ಯಂತ ಕಟ್ಟಕಡೆಯ ಸ್ಥಾನಹೊಂದಿದ್ದ ಕುಟುಂಬಗಳನ್ನು ಅಕ್ಷರ ಸಂಸ್ಕೃತಿಯೊಳಗೆ ತಂದುದ್ದಲ್ಲದೆ, ೧೯ಆಂರ ದಶಕದಲ್ಲೆ 'ನಟನಾರಾಯಣಿ' ಹಾಗೂ 'ಅವಧೇಶ್ವರಿ'ಯನ್ನು ರಚಿಸಿದ ಕೃತಿಕಾರರು ಯಾವುದೋ ಒಂದು

ನಿಲುವಿಗೆ ಅಂಟಿಕೊಂಡಿರುವುದು ಸ್ಪಷ್ಟವಾಗುತ್ತದೆ. ಆ ನಿಲುವು ಸಂಪ್ರದಾಯ ಸಂಸ್ಕೃತಿಯನ್ನು ಉಳಿಸುವ ದರ್ಶನವಾಗಿ ಕಾಣಿಸಿಕೊಂಡಿದೆ ಎಂದರೆ ತಪ್ಪಲ್ಲ.

ಒಟ್ಟಾರೆ ಈ ಕೃತಿಯಲ್ಲಿ ವಿಜ್ಞಾನವೂ ಹೇಳುವಂತೆ ರಕ್ತಸಂಬಂಧಿಗಳಲ್ಲಿಯೇ ಮದುವೆಯಾದರೆ, ಹುಟ್ಟುವ ಸಂತಾನವೂ ದುರ್ಬಲವಾಗಿರುತ್ತದೆ ಎಂದು ಇದು ವೈಜ್ಞಾನಿಕವಾಗಿ ವಾಸ್ತವವಾಗಿದೆ. ಆದರೆ ಶಂಬರಾಸುರನ ಪಂಗಡವರು ರಕ್ತಸಂಬಂಧಿಗಳಲ್ಲಿಯೇ ವಿವಾಹವಾದವರು. ಹೀಗಾಗಿ ಶಂಬರಾಸುರ ಹಾಗೂ ಅವರ ಸೈನಿಕರು ಎಂತಹ ಸಾಮರ್ಥ್ಯ ಹೊಂದಿದವರೆಂದು ಕೃತಿಯಲ್ಲಿ ನಿರೂಪಿತವಾಗಿದೆ. ಹೀಗಾಗಿ ಈ ವೈಜ್ಞಾನಿಕ ಅಂಶವನ್ನು ಎಲ್ಲೋ ಒಂದು ಕಡೆ ವಿಮರ್ಶಿಸುತ್ತಿದೆ. ಇದು ಕೃತಿಕಾರರು ವಿಜ್ಞಾನ ಅಥವಾ ಆಧುನಿಕತೆಗೆ ಒಡ್ಡಿದ ಸವಾಲು. ಇದರ ಜೊತೆಯಲ್ಲಿಯೇ ರಕ್ತಸಂಬಂಧಿ ವಿವಾಹಗಳು ಹೇಗೆ ಮಾಯವಾಯಿತ್ತು ಎಂಬುದನ್ನು ಹೇಳುತ್ತಿರುವುದರಿಂದ ಮತ್ತು ಒಂದು ಸಂಪ್ರದಾಯ ಆಳಿದ ಆ ಜಾಗವನ್ನು ಮತ್ತೊಂದು ಸಂಪ್ರದಾಯ ಅವರಿಸುತ್ತಿದೆ. ಹೀಗಾಗಿ ಬ್ರಾಹ್ಮಣರು, ಋಷಿಮುನಿಗಳಿಗೆ ಇದ್ದ ಪ್ರಾಮುಖ್ಯತೆಯನ್ನು ದೂರಮಾಡಿದೆ ಅಲ್ಲದೆ ಪುರೋಹಿತಷಾಹಿಗಿಂತ ಕ್ಷತ್ರಿಯರ ಸಾಮರ್ಥ್ಯ ದೊಡ್ಡದೆಂದು ಹೇಳುತ್ತಲೇ ಬ್ರಾಹ್ಮಣರೇ ಕ್ಷತ್ರಿಯರನ್ನು ಹತೋಟಿಯಲ್ಲಿಡಲು ಯತ್ನಿಸುತ್ತಾರೆ. ಅದು ಮಂತ್ರ-ತಂತ್ರದ ಮೂಲಕ ಎಂಬುದನ್ನು ಹೇಳುತ್ತಿದೆ.

ಮಾನವನ ಸಾಮರ್ಥ್ಯಕ್ಕಿಂತ ಯಜ್ಞಹೋಮ ಮಾಡಿದರೆ, ಬಯಕೆಗಳು ಈಡೇರುತ್ತವೆ ಎಂಬ ನಂಬಿಕೆಯನ್ನು ಕಾದಂಬರಿ ದೂರಮಾಡಿ, ಯಜ್ಞ ಮಾಡಿದ ಪುರುಕುತ್ಸನಿಗೆ ಮಗು ಹುಟ್ಟುವುದು ಮಾತ್ರ ಮನುಷ್ಯನಿಂದಲೇ? ಹೀಗಾಗಿ ಒಂದು ಕಡೆ ವೈಜ್ಞಾನಿಕತೆಯೇ ಗೆದ್ದಂತೆ ಆಗಿದೆ. ಹೆಣ್ಣು- ಗಂಡು ಪರಸ್ಪರ ಸಂಮಿಲನದಿಂದ ಮಾತ್ರ ಈ ರೀತಿ ಸಾಧ್ಯ ಎಂದು ಕೃತಿಕಾರರು ಒಪ್ಪಿದ್ದಾರೆ.

ಒಟ್ಟಿನಲ್ಲಿ ಆಧುನಿಕತೆ ಎಂಬ ಹೆಸರಿನಲ್ಲಿ ಇಲ್ಲಿ ಬರುವ ಬ್ರಾಹ್ಮಣ ವ್ಯಕ್ತಿಗಳಂತೆ, ಯಾರಿಗೂ ತೊಂದರೆ ನೀಡದ ವೈಚಾರಿಕತೆ ಭಾರತೀಯ ಸಮಾಜಕ್ಕೆ ಬರಬೇಕಾಗಿದೆ ಎಂಬುದನ್ನು ಗುರುತಿಸುತ್ತಿದೆ. ಹೀಗಾಗಿ ಸಂಪ್ರದಾಯ ಹಾಗೂ ಆಧುನಿಕತೆಯ ಮಧ್ಯೆ ಸಂಘರ್ಷವೂ ಕೃತಿಯ ಆಳದಲ್ಲಿ ನಡೆದಿರುವುದು ಕಂಡುಬರುತ್ತದೆ. ಕೊನೆಗೆ ಸಂಪ್ರದಾಯವೇ ವಿಜಯ ಸಾಧಿಸುವಂತೆ ಮಾಡುತ್ತಾ ಮೇಲ್ಕಂಡ ಎಲ್ಲ ಅಂಶಗಳಲ್ಲಿ ವಿಡಂಬನೆಯನ್ನು ವ್ಯಕ್ತಪಡಿಸುತ್ತಿದೆ.

ಟಿಪ್ಪಣಿಗಳು

೧. ಶಂಕರಮೊಕಾಶಿ ಪುಣೇಕರ, ಅವಧೇಶ್ವರಿ, ಪು.೨೬೦

೨. ಅದೇ, ಪು.೨೮

೩. ಅದೇ, ಪು.೨೧೦

೪. ಅದೇ, ಪು.೨೧೦

೫. ಅದೇ, (ಮುನ್ನುಡಿ), ಪು.೧೦

ಅಧ್ಯಾಯ ೭

ಉಪಸಂಹಾರ

೭

ಉಪಸಂಹಾರ

೭.೧. ಉಪಸಂಹಾರ

ಮಾನವ-ಮಾನವನ ಮಾನವೀಯ ಸಂಬಂಧಗಳಲ್ಲಿ ಪೂರ್ಣನಂಬಿಕೆ ಇರುವ ಪುಣೇಕರರು ತಮ್ಮ ಜೀವನದ ಉದ್ದಕ್ಕೂ ತಾವು ಕಂಡುಕೊಂಡ ಸತ್ಯಗಳನ್ನು ಯಾರ ಅಂಗಿಗೂ ಒಳಗಾಗದೆ ನೇರವಾಗಿ ಹೇಳುತ್ತಿದ್ದವರು. ಬದುಕಿನಲ್ಲಿ ವೈಚಾರಿಕತೆಯ ಪ್ರಶ್ನೆಯು ಎದುರಾದಾಗ ಪರಿಸರಕ್ಕೆ ತಕ್ಕಂತೆ ಅಗತ್ಯವಾದ ನಿಲುವುಗಳನ್ನು ಮಂಡಿಸುತ್ತಾರೆ. ಪೌರ್ವಾತ್ಯ ದೃಷ್ಟಿಕೋನದಲ್ಲಿ ಪಾಶ್ಚಾತ್ಯ ಪ್ರಭಾವ ನವ್ಯದ ವ್ಯಕ್ತಿನಿಷ್ಠ ದೃಷ್ಟಿಕೋನವನ್ನು ಹಾಗೂ ಮೂಲ ಗ್ರಹೀತಗಳನ್ನು ಅನುಮಾನದಿಂದಲೇ ಪ್ರಶ್ನಿಸುತ್ತಾ ಬಂದವರು. ವ್ಯಕ್ತಿ ಅಭಿವ್ಯಕ್ತಿಯೇ ನಿಜವಾದದ್ದು, ಎಂಬುದನ್ನು ಅಲ್ಲಗೆಳೆಯುತ್ತಾ, ಕಳಂಕರಹಿತವಾದ ಜೀವನ ನಿಷ್ಠವಾದ ಮಾನವೀಯ ಮೌಲ್ಯಗಳ ಅಂತರಂಗವನ್ನು ಅವರು ಶೋಧಿಸುತ್ತಾರೆ.

ಭಾರತೀಯ ಸಾಮಾಜಿಕ, ಸಾಂಸ್ಕೃತಿಕ ಪರಂಪರೆಯ ಸಮಗ್ರವಾದ ಅರಿವು ಇವರಿಗಿದ್ದ ಪರಿಣಾಮವಾಗಿ, ಇವರ ಕಾದಂಬರಿಗಳು ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಆಳವಾಗಿ ಬೇರುಬಿಟ್ಟಿದ್ದರೂ, ಆಶಯದಲ್ಲಿ ಆಧುನಿಕವಾಗಿದೆ. ಭಾರತೀಯ ಸಮಾಜದ ರೀತಿ-ನೀತಿಗಳಿಗೆ ಹೊಂದಿಕೊಂಡು ಬದುಕುವ ಚಿಂತನೆಯನ್ನು ವ್ಯಕ್ತಪಡಿಸುತ್ತಾರೆ. ಹೀಗಾಗಿಯೇ ಇವರು ಪಾಶ್ಚಾತ್ಯ ಸಮಾಜ ಹಾಗೂ ಭಾರತೀಯ ಸಮಾಜದ ನಡುವೆ ಸ್ಪಷ್ಟ ವ್ಯತ್ಯಾಸಗಳನ್ನು ಗುರುತಿಸುತ್ತಾರೆ. ಪಾಶ್ಚಾತ್ಯ ಸಮಾಜ ಬಹುಬೇಗ ವೈಚಾರಿಕತೆಯ ನೆಲೆಯಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಿಕೊಂಡು, ಆಧುನಿಕ ಬದುಕಿನತ್ತ ಹೆಜ್ಜೆ ಹಾಕಿದ್ದು, ಕೈಗಾರೀಕರಣ, ನಗರೀಕರಣಗಳು ಬೆರೆತಂತಹ ಆಧುನೀಕರಣಗೊಂಡ ಸಮಾಜ ಅಸ್ತಿತ್ವಕ್ಕೆ ಬಂದಿತ್ತು. ಇಲ್ಲಿ ದಿನದಿಂದ ದಿನಕ್ಕೆ ಮನುಷ್ಯ-ಮನುಷ್ಯನ ಸಂಬಂಧಗಳಲ್ಲಿ ಬಿರುಕು ಕಾಣಿಸಿಕೊಂಡು-ಮಾನವೀಯ ಸಂಬಂಧಗಳು ದೂರಸರಿಯುತ್ತ, ಸಮಯ ಹಾಗೂ ಹಣಗಳಿಸುವುದಕ್ಕೆ ಒಲವು ತೋರಿಸಿದರು. ಹೀಗಾಗಿ ಪ್ರೀತಿ-ಪ್ರೇಮ, ವಿಶ್ವಾಸ, ಅಕ್ಕರೆಗಳಿಂದ ಕೂಡಿದ ಕುಟುಂಬದಲ್ಲಿನ ಸಂಬಂಧಗಳ ಅಳಿವು ಸಂಭವಿಸಿ ಒಂಟಿತನ, ಬರಡುತನದಿಂದ ಕೂಡಿದ ಸಮಾಜ ನಿರ್ಮಾಣವಾಯಿತ್ತೆಂದು ಪುಣೇಕರರ ಭಾವನೆ. ಹೀಗಾಗಿಯೇ ಪಾಶ್ಚಾತ್ಯ ಸಮಾಜದಲ್ಲಿ ಅಸ್ತಿತ್ವದ ಪ್ರಶ್ನೆಯು ಅಷ್ಟೊಂದು ಗಾಢವಾಗಿ ಕಾಡಲು ಕಾರಣವಾಯಿತ್ತೆಂದು ತಮ್ಮ ಅಭಿಪ್ರಾಯ ಮಂಡಿಸುತ್ತಾರೆ.

[illegible]

[illegible]

[illegible]

[illegible]

[illegible]

ಭಾರತೀಯ ಸಮಾಜದ ಸಾಮಾಜಿಕ ಪರಿಸರವೂ ಪಾಶ್ಚಾತ್ಯ ಸಮಾಜಕ್ಕಿಂತ ಭಿನ್ನವಾಗಿದೆ. ಭಾರತೀಯರಲ್ಲಿ ತಮ್ಮದೇ ಆದ ಸಂಸ್ಕೃತಿ ಇದ್ದು ಈ ಸಂಸ್ಕೃತಿಯೂ ಪಾಶ್ಚಾತ್ಯ ಸಮಾಜದ ಸಂಸ್ಕೃತಿಗಿಂತಲೂ ಬೇರೆಯಾಗಿದೆ. ಇಲ್ಲಿ ಮನುಷ್ಯ-ಮನುಷ್ಯನ ನಡುವೆ ಮಾನವೀಯ ಸಂಬಂಧವಿದೆ. ಕುಟುಂಬ, ಗ್ರಾಮ, ನಾವು-ನಮ್ಮವರು ಎಂಬ ಆಂತರೀಕವಾದ ಭಾವನೆ ಇದ್ದು ವ್ಯಕ್ತಿ-ವ್ಯಕ್ತಿಗಳ ಮಧ್ಯೆ ಈ ಪ್ರಾಥಮಿಕ ಸಂಬಂಧಗಳು ಬಹುಬೇಗ ಬೇರ್ಪಡಲು ಸಾಧ್ಯವಿಲ್ಲ. ಈ ಸಂಬಂಧಗಳಿಂದ ಬಿಡಿಸಿಕೊಳ್ಳಲು ಯತ್ನಿಸಿದಷ್ಟು ನಾವೂ ಅಂಟಿಕೊಳ್ಳುತ್ತಾ ಹೋಗುತ್ತೇವೆ. ಅಲ್ಲದೆ ವಿವಾಹದಂತಹ ಸಂಸ್ಕೃತಿಗೆ ಭಾರತೀಯರಲ್ಲಿ ಬಹಳ ಮಹತ್ವದ ಸ್ಥಾನವಿದೆ. ಈ ಸಂಸ್ಕೃತಿಯಿಂದ ಸಂಬಂಧಗಳು ಬೆಳೆಯುತ್ತಾ ಹೋಗುತ್ತವೆ. ಹೀಗಾಗಿ ಅಸ್ಥಿತ್ವದ ಪ್ರಶ್ನೆ ಭಾರತೀಯ ಸಮಾಜದಲ್ಲಿ ಉದ್ಭವಿಸಲಾರದು. ಆದರೆ ಹುಟ್ಟಿದ ಮನುಷ್ಯ ತನ್ನ ಬದುಕಿನಲ್ಲಿ ಒಂದಲ್ಲ ಒಂದು ಬಾರಿ ತನ್ನ ಅಸ್ಥಿತ್ವದ ಪ್ರಶ್ನೆಯನ್ನು ಎದುರಿಸುವುದು ಸಹಜ. ಆದರೆ ಜೀವನದಲ್ಲಿ ಇದೇ ಅಂತಿಮ ಅಲ್ಲ. ಈ ಅಸ್ಥಿತ್ವದ ಪ್ರಶ್ನೆಯೂ ಕೆಲವು ವೇಳೆಯಲ್ಲಿ ಇರಲು ಮಾತ್ರಸಾಧ್ಯ. ಬದುಕಿನುದ್ದಕ್ಕೂ ಮುಂದುವರಿಯಲಾರದು. ಆತನು ಮುಂದೊಂದು ದಿನ 'ರಕ್ತಸಂಬಂಧ' ಎಂಬ ಸಂಬಂಧದ ಸುಳಿಯಲ್ಲಿ ಸಿಕ್ಕಿಬೀಳುತ್ತಾನೆ.

ಅಂದರೆ ಪಾಶ್ಚಾತ್ಯದಲ್ಲಿ ಮಾತ್ರ ವಿವಾಹ ಎಂಬುದು ಕೆಲವೊಂದು ಅಗತ್ಯಗಳ ಪೂರೈಕೆಯ ತಾಣವಾಗಿ ಪರಿಣಮಿಸಿ, ತಮ್ಮ ಅಗತ್ಯ ಬಯಕೆಗಳು ತೀರಿದ ಮೇಲೆ ಬೇರ್ಪಡುವ ಸಂಭಾವ್ಯತೆ ಅಧಿಕವಾಗಿದೆ. ಹೀಗಾಗಿಯೇ ವಿಚ್ಛೇದನದಂತಹ ಸಂಸ್ಕೃತಿ ಅಲ್ಲಿ ಹೆಚ್ಚಾಗಿ ಬೆಳದಿರುವುದು. ಆದರೆ ಈ ರೀತಿಯ ಪರಿಸ್ಥಿತಿಯು ಭಾರತೀಯರಲ್ಲಿ ಅಪರೂಪಕ್ಕೊಂದರಂತೆ ಸಂಭವಿಸಬಹುದು. ಅದೇ ಗ್ರಾಮೀಣ ಭಾರತದಲ್ಲಿ ವಿವಾಹ ಎಂಬುದು ಮುರಿಯದ ಸಂಬಂಧ ಎಂಬ ನಂಬಿಕೆಯು ಬಲವಾಗಿ ಬೇರೂರಿದೆ.

ಹೀಗಾಗಿ ಅನುಭವಗಳು ನಮ್ಮದಾಗಿದ್ದರೆ, ಅಂತಹ ಅನುಭವಗಳನ್ನು ಹೇಳುವ ರೀತಿಯು ನಮ್ಮದಾಗಿರಬೇಕು. ಬೇರೊಂದು ಸಮಾಜದ ಅನುಭವಗಳನ್ನು ತಂದು ನಮ್ಮ ಸಮಾಜಕ್ಕೆ ಅನ್ವಯಿಸುವುದರ ಬಗ್ಗೆ ಬಹಳಷ್ಟು ಕೋಪವಿದೆ. ಹಾಗೆಂದು ಇಡೀ ಭಾರತೀಯ ಸಂಸ್ಕೃತಿಯೆಲ್ಲವೂ ಶ್ರೇಷ್ಠ ಎಂಬ ನಂಬಿಕೆಯೂ ಲೇಖಕರಲ್ಲಿ ಇಲ್ಲ. ಇಲ್ಲೂ ಸಹ ಅಮೌಲ್ಯಯುಕ್ತ ಸಂಸ್ಕೃತಿ ಇದೆ. ಈ ತೂಕವಿರದ ಸಂಪ್ರದಾಯ ಅಳಿಯಬೇಕು. ಹೊಸ ಭಾವನೆ ನೈತಿಕತೆಯ ಅಡಿಯಲ್ಲಿ ಬೆಳೆಯಬೇಕು ಎಂಬ ನಿಲುವಿಗೆ ಬದ್ಧರಾಗುತ್ತಾರೆ.

ಈ ಹಿನ್ನೆಲೆಯಲ್ಲಿ ಪುಣೇಕರರ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ ಒಳಿತು-ಕೆಡಕಿನ ಸಂಘರ್ಷವೂ, ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷವಾಗಿ ಮಾರ್ಪಟ್ಟಿದೆ. ಇದು ನಮ್ಮ ಕೃತಿಗಳಲ್ಲಿ ಗಾಢವಾಗಿ ಓದುಗರನ್ನು ಕಾಡುತ್ತಿದೆ. ಏಕೆಂದರೆ ಭಾರತೀಯರ ಜೀವನದಲ್ಲಿ ಸಣ್ಣ-ಸಣ್ಣ ವಿಚಾರಗಳು ಸಂಘರ್ಷಕ್ಕೆ ದಾರಿಮಾಡಿಕೊಡುತ್ತವೆ. ಈ ದೃಷ್ಟಿಯನ್ನು ಇಟ್ಟುಕೊಂಡು ಗಂಗವ್ವ-ಗಂಗಾಮಾಯಿಯನ್ನು ಚರ್ಚಿಸಲಾಗಿದೆ.

ಗಂಗವ್ವ-ಗಂಗಾಮಾಯಿಯಲ್ಲಿ ಅಮೌಲ್ಯ, ಅಮುಖ್ಯ ಸಂಪ್ರದಾಯವೂ ಅಳಿದು, ಆ ಜಾಗದಲ್ಲಿ ವೈಚಾರಿಕತೆಯಿಂದ ಕೂಡಿದ ಸಮಾನ ಸಂಸ್ಕೃತಿ ಹುಟ್ಟಬೇಕೆಂದು ಹಂಬಲಿಸುತ್ತಾರೆ. ಪುಣೇಕರರು ಸಂಪ್ರದಾಯ

ಮತ್ತು ಆಧುನಿಕತೆಯನ್ನು ಮುಖಾಮುಖಿಯಾಗಿಸುವುದು ಒಳಿತು-ಕೆಡಕಿನ ಸಂಘರ್ಷದ ಹಿನ್ನೆಲೆಯಲ್ಲಿ ಅದು ಗಂಗವ್ವ ಮತ್ತು ರಾಘಪ್ಪನ ಪಾತ್ರದ ಮೂಲಕ ಗಂಗವ್ವ ಪರಂಪರೆಯಿಂದ ಬಂದ ಸಂಪ್ರದಾಯವನ್ನು ಬಿಟ್ಟಂತೆ ಮಾಡಿ ಮತ್ತೆ ಮೂಲ ಸಂಸ್ಕೃತಿಯನ್ನೆ ಅಪ್ಪಿಕೊಳ್ಳಲು ಕಾರಣವೆಂದರೆ ರಾಘಪ್ಪನು ವ್ಯಕ್ತಪಡಿಸಿದ ಆಧುನಿಕತೆಯು ಭಾರತೀಯ ಸಮಾಜಕ್ಕೆ ಬೇಡ ಎಂಬುದಾಗಿದೆ. ರಾಘಪ್ಪ ಎಲ್ಲಾ ರೀತಿಯ ನೈತಿಕ ಮೌಲ್ಯಗಳನ್ನು ಕಳೆದುಕೊಂಡು ಹಣಸಂಸ್ಕೃತಿಗೆ ಮಹತ್ವ ನೀಡಿದ್ದರ ಫಲವೇ ಕೊನೆಯಲ್ಲಿ ಆತ ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿ ಬಂದಿದ್ದು. ಅಷ್ಟೇ ಅಲ್ಲ ತನ್ನನ್ನು ನಂಬಿ ಬದುಕುತ್ತಿದ್ದ ಎಲ್ಲರೂ ಸಹ ಮರಣಹೊಂದಬೇಕಾಯಿತ್ತು.

ತರುಣ ಪಾತ್ರಗಳು ಸಹ ಕೆಲವೊಮ್ಮೆ ರಾಘಪ್ಪನ ರೀತಿಯೇ ವರ್ತಿಸುತ್ತವೆ. ಸಮರ್ಥಂತ ಹಿರಿಯರು ಅನುಭವ ತುಂಬಿರುವವರು ತಮ್ಮ ಬದುಕನ್ನು ರೂಪಿಸಲು ಯತ್ನಿಸುತ್ತಿದ್ದಾರೆ, ಎಂಬ ಭಾವನೆ ಈ ತರುಣರಲ್ಲಿ ಇಲ್ಲವಾಗಿ, ಅಪಕ್ವವಯಸ್ಸಿನಲ್ಲಿ ಅಸಕ್ವ ರೀತಿಯಲ್ಲಿ ವರ್ತಿಸಿ, ಹಣಗಳಿಸುವುದನ್ನೇ ಉದ್ಯೋಗ ಮಾಡಿಕೊಂಡು ಮತ್ತು ಇಚ್ಚಾನುಸಾರಸವಾಗಿ ಲೈಂಗಿಕ ಬಯಕೆಯನ್ನು ಇಡೇರಿಸಿಕೊಳ್ಳುವುದು, ಸಿನಿಮಾ ನೋಡುವುದು ಮುಂತಾದ ರೀತಿಯ ಆಧುನಿಕತೆಯನ್ನು ಹಾತೊರೆದು ಪಡೆದುಕೊಳ್ಳಲು ಯತ್ನಿಸುತ್ತಾರೆ. ಆದರೆ ಅಚ್ಯುತನ ಪಾತ್ರ ಸ್ವಲ್ಪ ಭಿನ್ನವಾಗಿದ್ದು ಆತ ಪುಣೇಕರರು ಬಯಸಿದ ಆಧುನಿಕತೆಯನ್ನು ಪ್ರದರ್ಶಿಸುತ್ತಾನೆ. ಆದರೂ ಈ ಪಾತ್ರ ಅತಿಥಿ ನಟನ ಪಾತ್ರದಂತಾಗಿದೆ. ಹೀಗಾಗಿ ಇದು ಆಧುನಿಕತೆಯ ಫಲವೂ ಹೌದು ಎಂದು ಹೇಳಬಹುದು.

ಪುಣೇಕರರು ಬಯಸಿದ ಆಧುನಿಕತೆಯು ಗಂಗವ್ವ, ಪುರಕುತ್ಸಾನಿ ಹಾಗೂ ನಾಣಿಯ ಅಂತಿಮ ಹಂತದ ಬದುಕಿನ ರೀತಿಯದ್ದು. ನಾಣಿಯ ಪ್ರಾರಂಭಿಕ ಬದುಕಿಗೂ ಕೊನೆಯ ಅವಧಿಯ ಬದುಕಿಗೂ ಸ್ಪಷ್ಟ ವ್ಯತ್ಯಾಸವಿದೆ. ನಾಣಿ ಕುಟುಂಬದಂತಹ ಪ್ರಾಥಮಿಕ ಸಂಬಂಧವನ್ನು ಕಡಿದು ಕೊಂಡಿದ್ದರ ಫಲವೇ ಆತನನ್ನು ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸಿತ್ತು. ಹೀಗಾಗಿ ಸಂಗೀತ ಕಲಿಯಬೇಕೆಂಬ ಮನದಾಸೆಯು ಹಣ ಗಳಿಸಬೇಕೆಂಬ ಮೋಹದಾಸೆಯಾಗಿ ಪರಿವರ್ತಿತವಾಯಿತ್ತು. ತನ್ನ ಪರಿಸರವನ್ನು ಮೀರಿ ಬೆಳೆದ ವ್ಯಕ್ತಿತ್ವವೂ ನಾಣಿಯ ಬದುಕಿಗೆ ಮಾರಕವಾಯಿತ್ತೆಂಬುದನ್ನು ಸಮಗ್ರವಾಗಿ ಚಿತ್ರಿಸುತ್ತಾರೆ.

ನಾಣಿಯನ್ನು ಕಾಡಿದ ಅಸ್ತಿತ್ವದ ಪ್ರಶ್ನೆಯೂ ನಿಜವಾಗಿಯೂ ಅಸ್ತಿತ್ವದ ಪ್ರಶ್ನೆಯಲ್ಲ ಎಂಬ ಸ್ಪಷ್ಟ ತೀರ್ಮಾನಕ್ಕೆ ಬರುತ್ತಾರೆ. ಇದು ಸಮರ್ಥವೂ ಹೌದು. ಏಕೆಂದರೆ ನಾಣಿ ತನ್ನ ಕುಟುಂಬ, ನೆರೆಹೊರೆಯ ಪೂರ್ವ ಪ್ರಾಥಮಿಕ ಸಂಬಂಧಗಳನ್ನು ಕಡಿದುಕೊಂಡದ್ದು ಒಂದೆಡೆಯಾದರೆ, ಮತ್ತೊಂದೆಡೆ ಯಾರು ತನಗೆ ಪ್ರೀತಿ ವಿಶ್ವಾಸ ತೋರಿಸಲು ಯತ್ನಿಸುತ್ತಾರೋ, ಅವರಿಂದ ದೂರವಾಗಲು ಪ್ರಯತ್ನಿಸುತ್ತಾನೆ. ಆತನಿಗೆ ಯಾವ ರೀತಿಯ ಸಂಬಂಧಗಳು ಬೇಕಾಗಿದರೆ, ಹಣ ಮಾತ್ರ ಬೇಕಾಗಿತ್ತು. ಹೀಗಾಗಿ, ಈ ಹಣ ಸಂಸ್ಕೃತಿಯೇ ಆತನ ನೈತಿಕತೆಯನ್ನು ಹೊರದೂಡಿ ಆ ಜಾಗವನ್ನು ಆಕ್ರಮಿಸಿತ್ತು. ಹೀಗಾಗಿ ಆತನಿಗೆ ಅಸ್ತಿತ್ವದ ಪ್ರಶ್ನೆ ಕಾಡಿದ್ದು. ಈತ ಸಹಜವಾಗಿ ವರ್ತಿಸಿದ್ದರೆ, ಆತನಿಗೆ ಯಾವುದೇ ರೀತಿಯ ಮೋಹ ದುರಾಸೆ ಅಂಟಿಕೊಳ್ಳುತ್ತಿರಲಿಲ್ಲ.

ಅಲ್ಲದೆ 'ನಟನಾರಾಯಣಿ'ಯಲ್ಲಿ ಕನ್ನಡ ಸಾಹಿತ್ಯ ವಲಯದಲ್ಲಿ ಬೀಸಿದ ನವ್ಯ ಚಿಂತನೆಗಳನ್ನು ಲೇವಡಿ ಮಾಡಲು ಸಹ ಉಪಯೋಗಿಸಿಕೊಳ್ಳುತ್ತಾರೆ. ಅದಕ್ಕಾಗಿ ಭಾರತೀಯ ಹಾಗೂ ಪಾಶ್ಚಾತ್ಯ ಸಮಾಜಕ್ಕಿರುವ ವ್ಯತ್ಯಾಸವೇನು? ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡಲು ಯತ್ನಿಸುತ್ತಾರೆ. ಅನುಭವಗಳು ಮೊದಲು ನಮ್ಮವಾಗಬೇಕು. ಆ ಅನುಭವಗಳನ್ನು ಹೇಳುವ ರೀತಿಯು ನಮ್ಮದಾಗಿರಬೇಕು. ಬೇರೊಂದು ಸಮಾಜಕ್ಕೆ ಅನ್ವಯಿಸುವ ಚಿಂತನೆಯನ್ನು ತಂದು ನಮ್ಮಲ್ಲಿ ಅನ್ವಯಿಸಿಕೊಳ್ಳುವ ಅವಶ್ಯಕತೆಯನ್ನು ಪ್ರಶ್ನಿಸಿದ್ದಾರೆ.

ಆದರೆ ನವ್ಯ ಸಾಹಿತ್ಯವೆಲ್ಲವೂ ನಮ್ಮ ಪರಿಸರಕ್ಕೆ ಮೀರಿ ಬೆಳೆದಿದ್ದೆ? ಅಥವಾ ನಮ್ಮ ಸಮಾಜಕ್ಕೆ ಅನಗತ್ಯವೇ ಎಂಬ ಪ್ರಶ್ನೆಯೂ ಉದ್ಭವಿಸುವುದು ಸಹಜ. ಹೀಗಾಗಿ ನವ್ಯ ಸಾಹಿತ್ಯವೆಲ್ಲವೂ ಅನಾವಶ್ಯಕ ಎಂದು ಹೇಳಲು ಸಾಧ್ಯವಿಲ್ಲ. ಅಲ್ಲೂ ಸಹ ದಾರ್ಶನಿಕತೆ ಇದೆ. ಮನುಷ್ಯನ ಪ್ರವೃತ್ತಿಗಳಿಗೆ ಮನಃಶಾಸ್ತ್ರೀಯ ಹಿನ್ನೆಲೆಯಲ್ಲಿ ಮಹತ್ವ ನೀಡಿದ್ದರಿಂದ ವ್ಯಕ್ತಿವಿಶಿಷ್ಟತೆ, ಕಾಮವೂ ಹೆಚ್ಚಿನಸ್ಥಾನ ಪಡೆಯಿತ್ತು. ಭಾರತೀಯರು ಪಾಶ್ಚಾತ್ಯರ ಬದುಕನ್ನು ವೇಗವಾಗಿ ಅನುಕರಣೆ ಮಾಡುತ್ತಿರುವುದರಿಂದ ಮುಂದೊಂದು ದಿನ ಈ ನವ್ಯ ಚಿಂತನೆಗಳಿಗೆ, ಭಾರತೀಯ ಸಮಾಜದಲ್ಲಿ ಸಂಪೂರ್ಣವಾಗಿ ಅಲ್ಲದಿದ್ದರೂ ಭಾಗಶಃವಾದರೂ ಅನ್ವಯಿಸುವುದರಲ್ಲಿ ಅನುಮಾನವಿಲ್ಲ. ಕಳೆದ ಒಂದೆರಡು ದಶಕದಲ್ಲಿ, ಖಾಸಗೀಕರಣ, ಜಾಗತೀಕರಣ ಎಂಬ ವಿಚಾರಧಾರೆ ಹಿನ್ನೆಲೆಯಲ್ಲಿ ಬಹಳಷ್ಟು ಬದಲಾವಣೆಗೆ ಒಳಪಟ್ಟಿರುವುದನ್ನು ಗುರುತಿಸಬಹುದು. ಯಾವ ವ್ಯಕ್ತಿಯಲ್ಲಿ ಸಾಮರ್ಥ್ಯ, ಪ್ರತಿಭೆ, ಎನ್ನುವುದಕ್ಕಿಂತ ಬಂಡವಾಳವನ್ನು ಹೂಡಿ ದುಪ್ಪಟ್ಟು ಉತ್ಪಾದಿಸುವವನಿಗೆ ಬೆಲೆಗೊಡುವುದು, ಉತ್ಪಾದನೆಯನ್ನು ಮೌಲ್ಯವೆಂದು ಸಂಭಾವಿಸುವುದು. ಆ ಮೂಲಕ ಜ್ಞಾನ ಸಂಪಾದನೆಯ ಅಂತಿಮ ಉದ್ದೇಶ ಬಂಡವಾಳ ವಿಸ್ತರಣೆ ಎನ್ನುವ ನಿಲುವಿಗೆ ಬಂದುಬಿಡುವುದು ಜಾಗತೀಕರಣದ ಪರಿಣಾಮವಾಗಿದೆ. ಜಾತಿಯ ಆಧಾರದ ಮೇಲೆ ಹಾಗೂ ಯಾರೊಬ್ಬರ ಚಿಂತನೆಯ ನೆರಳಿನಲ್ಲಿ ಮತ್ತೊಬ್ಬರು ಗೌರವಿಸಲ್ಪಡುತ್ತಿರುವುದು ನಿಲ್ಲಲೇ ಬೇಕಾಗುತ್ತದೆ. ಇದನ್ನು ಸ್ಪಷ್ಟಪಡಿಸುವುದಾದರೆ, ಭಾರತೀಯ ಕುಟುಂಬವಾರು ರಾಜಕೀಯವನ್ನೇ ಉದಾಹರಿಸಬಹುದು. ಅದು ಅಲ್ಲದೆ ಪ್ರಾಚೀನ ಕಾಲದಿಂದ ಅಕ್ಷರ ಸಂಸ್ಕೃತಿಯು ಸಮಾಜದ ಎಲ್ಲಾ ವರ್ಗಕ್ಕೂ ದೊರೆತಿದ್ದರೆ, ಬಹುಶಃ ಭಾರತೀಯ ಸಮಾಜವೂ ಈಗಿನಂತೆ ಇರುತ್ತಿರಲಿಲ್ಲ ಎಂಬುದು ಸತ್ಯ. ಮತ್ತೊಂದು ರೀತಿ ಹೇಳುವುದಾದರೆ, ನಾವು, ನಮ್ಮದು ಎಂಬ ವಿಚಾರದಿಂದಲೆ ಅಲ್ಲವೇ, ಅನೇಕ ಸಂಘರ್ಷಗಳು ನಡೆದಿರುವುದು. ಅದಕ್ಕಾಗಿಯೇ ಟಿ.ಎಸ್ .ಎಲಿಯಟ್ "waste land" ಎಂದು ಕರೆದಿದ್ದು.

ಪುಣೇಕರರಿಗೆ ನಾಣಿಯು ಸಂಗೀತ ಸಂಸ್ಕೃತಿಯಿಂದ ದೂರವಾಗಿ ಹಣಮೋಹ ಸಂಸ್ಕೃತಿಗೆ ಇಳಿದು ಮಾಡಿದ ಕೃತ್ಯಗಳು ಬೇಡವಾಗಿವೆ. ಹಿಂದಿನಿಂದಲೂ ಭಾರತೀಯ ಸಮಾಜ ನೈತಿಕತೆಗೆ ಪ್ರಮಾಣವನ್ನಾಗಿ ಹಣವನ್ನು ಬಳಸಿಕೊಂಡಿಲ್ಲ. ಈಗಲೂ ಸಹ ಬಳಸಿಕೊಳ್ಳಬಾರದೆಂಬುದೇ ಇದರ ಪ್ರಧಾನ ಚಿಂತನೆ. ಇದರಿಂದಲೇ ನಾಣಿಯು ಬದುಕನ್ನು ಕೊನೆಯಲ್ಲಿ ಪ್ರಯತ್ನ ಪೂರ್ವಕವಾಗಿ, ಮತ್ತೆ ಸಂಗೀತ ಸಂಸ್ಕೃತಿಗೆ ತಂದು ಕುಟುಂಬ ಎಂಬ ಬಂಧನದಲ್ಲಿ ಇಡುತ್ತಾರೆ.

ಹೀಗೆ ಗಂಗವ್ವ-ಗಂಗಾಮಾಯಿ ಹಾಗೂ ನಟನಾರಾಯಣಿಯಲ್ಲಿ ಒಳಿತು-ಕೆಡಕಿನ ಸಂಘರ್ಷ ಹಾಗೂ ಅದರ ಪರಿಣಾಮಗಳನ್ನು ಪರಿಚಯಿಸಿದ ಪುಣೇಕರರು ಅವಧೇಶ್ವರಿಯಲ್ಲಿ ಪ್ರಾಚೀನ ಭಾರತದ ಸಂಸ್ಕೃತಿಯನ್ನು ಆಧುನಿಕ ಭಾರತದ ಸಂಸ್ಕೃತಿಯೊಳಗೆ ಸಮನ್ವಯ ಮಾಡಲು ಯತ್ನಿಸುತ್ತಾರೆ. ಅಣ್ಣ-ತಂಗಿಯರ ಲಗ್ನ ಕಾರ್ಯವೂ ಸಂಪೂರ್ಣ ಭಾರತೀಯ ಸಂಸ್ಕೃತಿಯಲ್ಲಿ ಅನಿವಾರ್ಯವಾಗಿ ಈ ಅಣ್ಣ-ತಂಗಿಯ ವಿವಾಹ ನಡೆದಾಗ ವ್ಯಕ್ತಿ ಸಹಜವಾಗಿ ವರ್ತಿಸಲು ಏಕೆ ಸಾಧ್ಯವಾಗುವುದಿಲ್ಲ ಎಂಬುದನ್ನು ಚಿಂತಿಸುತ್ತಾರೆ. ಹೀಗಾಗಿ ಸಂಬಂಧ ಎಂಬುದು ಮರೆಯಾಗಲು ಸಾಧ್ಯವಿಲ್ಲ. ಹಿಂದಿನ ಭಾವನೆಗಳು ದೂರವಾಗಿ ಹೊಸ ಭಾವನೆಗಳು ವಿವಾಹದ ನಂತರವಾದರೂ ಸಹ ಹುಟ್ಟಲಾರವು. ಮೂಲ ಸಂಬಂಧಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ ಎಂಬ ದರ್ಶನ ನೀಡುತ್ತಾರೆ.

ಇದರ ಜೊತೆಯಲ್ಲಿಯೇ ಹಿಂದಿನ ಕಾಲದಿಂದಲೂ ಬೆಳೆದುಬಂದಿರುವ ಗಂಡು-ಹೆಣ್ಣುಗಳ ಮಧ್ಯೆ ಇರುವ ಕಂದರವನ್ನು ಆಧುನಿಕ ವೈಚಾರಿಕತೆಯಿಂದ ದೂರ ಮಾಡಲು ಯತ್ನಿಸಿದ್ದಾರೆ. ಒಬ್ಬ ಪುರುಷನಷ್ಟೆ ಸ್ತ್ರೀಯು ಕೂಡ ಎಲ್ಲ ಕ್ಷೇತ್ರಗಳಲ್ಲೂ ಸಮರ್ಥವಾಗಿ ಕರ್ತವ್ಯ ನಿರ್ವಹಿಸಬಲ್ಲಳು, ಅವರಿಗೆ ಅಗತ್ಯವಾದ ಸಹಾಯ, ಸಹಕಾರ ಮಾತ್ರ ಬೇಕಾಗಿದೆ. ಈ ಸಹಕಾರ ಮತ್ತು ಸಹಾಯ ದೊರೆತರೆ, ಪುರುಷನಿಗಿಂತ ಒಂದು ಹೆಜ್ಜೆ ಮುಂದೆ ಇರಬಲ್ಲಳು ಎನ್ನುತ್ತಾರೆ. ಇದರಿಂದಲೇ ಗಂಗವ್ವನಿಗೆ ದೇಸಾಯಿಯವರ ಸಹಕಾರ ದೊರೆತರೆ, ಪುರುಕುತ್ಸಾನಿಗೆ ಕಾಲಿಯ, ಹಾಗೂ ತಾರ್ಕ್ಷ್ಯರ ಬೆಂಬಲ ಸಿಕ್ಕಿರುವುದು. ಇದರಿಂದ ಪುರುಕುತ್ಸ ಹಾಗೂ ತ್ರಸದಸ್ಯುವಿಗೂ ಸಾಧ್ಯವಾಗದ ರೀತಿಯಲ್ಲಿ ಅಯೋಧ್ಯೆಯನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾಳೆ.

ಆದರೆ ಪುಣೇಕರರು ಕೆಲವೊಮ್ಮೆ ಏಕಮುಖಿ ಚಿಂತನೆಗೆ ಅಂಟಿಕೊಂಡಿರುವಂತೆ ಕಂಡುಬರುತ್ತದೆ. ತಾವು ಹೇಳಿದ್ದೇ ಶ್ರೇಷ್ಠ ಎಂಬ ಭಾವನೆಯು ಒಂದುಕಡೆ ಅವರಿಗಿದೆ. ಹೀಗಾಗಿ ಹಿಂದಿನ ತಲೆಮಾರುಗಳೆಲ್ಲವೂ ಶ್ರೇಷ್ಠ. ಇಂದಿನ ಯುವಕ ತಲೆಮಾರು ತಾತ್ವಿಕವಾಗಿ ದುರ್ಬಲ ಎಂಬ ತೀರ್ಮಾನಕ್ಕೆ ಬಂದು ಇದು ಆಧುನೀಕತೆಯ ಪರಿಣಾಮ ಎನ್ನುವ ಅಭಿಪ್ರಾಯ ಮೂಡುತ್ತದೆ. ಕಿಟ್ಟಿ, ವಸಂತರಾಯ, ನಾಣಿಯ ಪ್ರಾರಂಭಿಕ ಬದುಕು, ತ್ರಸದಸ್ಯು ಈ ಎಲ್ಲಾ ಪಾತ್ರಗಳ ಹಿಂದೆ ಇದು ಕೆಲಸ ಮಾಡಿದೆ. ಈ ತರುಣ ತಲೆಮಾರು ಬಿಂಬಿಸುವ ಆಧುನಿಕತೆಯೂ ವಾಸ್ತವವಾಗಿ ಭಾರತೀಯ ಸಾಮಾಜಿಕ ಪರಿಸರದಿಂದ ಮೂಡಿಬಂದ ಆಧುನಿಕತೆಯಲ್ಲ. ಪಾಶ್ಚಾತ್ಯ ಸಮಾಜದ ಎರವಲು ಎನ್ನುವರು ಹೀಗಾಗಿ ಪುಣೇಕರರು ವೈಚಾರಿಕತೆಯ ನೆಲೆಯಲ್ಲಿ ಆಧುನಿಕತೆಯನ್ನು ತಿರಸ್ಕರಿಸುತ್ತಿಲ್ಲ. ಆ ವೈಚಾರಿಕತೆಯ ಅನುಭವ ನಮ್ಮದಾಗಿರಬೇಕು. ನಮ್ಮ ವಾತಾವರಣಕ್ಕೆ ಅನ್ವಯವಾಗುವಂತಿರಬೇಕು. ಎಂದು ಬಯಸುತ್ತಾರೆ.

ಆದರೆ ಯುವಕ ತಲೆಮಾರು ತಮ್ಮ ಸ್ವಾತಂತ್ರ್ಯಕ್ಕೆ ಅನುಗುಣವಾಗಿ ವರ್ತಿಸುವುದು ಸರಿಯಲ್ಲವೆ ಎಂಬ ಪ್ರಶ್ನೆ ಮೂಡುವುದು ಸಹಜವೆ. ಏಕೆಂದರೆ ನಮ್ಮ ಸಮಾಜದಲ್ಲಿ ವಯಸ್ಸಿಗನುಗುಣವಾಗಿ, ವ್ಯಕ್ತಿಯ ಮನಃಸ್ಥಿತಿಯೂ ಸಹ ಬದಲಾಗುತ್ತದೆ. ಒಂದೇ ಕುಟುಂಬದಲ್ಲಿ ವಿಭಿನ್ನ ವಯೋಮಾನದವರು ಇರುವುದರಿಂದ

ಒಂದೊಂದು ತಲೆಮಾರಿನವರ ಮಾನಸಿಕ ಸ್ಥಿತಿಯೂ ಭಿನ್ನವಾಗಿರುತ್ತದೆ. ಜೊತೆಗೆ ಬೇರೆ ಬೇರೆ ತಲೆಮಾರುಗಳ ಜನರ ಆಸಕ್ತಿ, ಅಭಿರುಚಿಗಳು, ಚಿಂತನೆಗಳು, ಆಲೋಚನೆಯ ಮಟ್ಟವೂ ಬದಲಾಗುತ್ತಿರುತ್ತದೆ. ಜೊತೆಗೆ ತಮ್ಮ ತಮ್ಮ ಅಸ್ಥಿತ್ವಕ್ಕಾಗಿ ಹೋರಾಡುವವರು ಇರುತ್ತಾರೆ. ಹೀಗಾಗಿ ಹಲವು ವಯೋಮಾನದವರು ಒಂದೇ ಕುಟುಂಬದಲ್ಲಿ ಇರುವಾಗ ಹಿರಿಯ ತಲೆಮಾರಿನ ಪ್ರಭಾವವೂ ಇಲ್ಲಿ ಅಧಿಕವಾಗಿರುತ್ತದೆ. ಹಿರಿಯರು ಕಿರಿಯರನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸದಾ ಯತ್ನಿಸುತ್ತಾರೆ. ಮತ್ತು ಅಧಿಕಾರವೂ ಸಹ ಈ ಹಿರಿಯರ ತಲೆಮಾರಿನವರಲ್ಲಿಯೇ ಇರುವುದರಿಂದ, ಕಿರಿಯ ತಲೆಮಾರಿನ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗುತ್ತದೆ. ತಾವು ಇಂದು ಸಾಕಿ ಬೆಳೆಸಿದರೆ, ಮುಂದೆ ಇವರು ನಮ್ಮನ್ನು ಪೋಷಿಸುತ್ತಾರೆ ಎಂಬ ಮಹತ್ವಾಕಾಂಕ್ಷೆಯು ಇರುವುದರಿಂದ ತರುಣರ ಎಲ್ಲಾ ರೀತಿಯ ಚಟುವಟಿಕೆಗಳಿಗೆ ನಿರ್ದಿಷ್ಟ ನಿಯಮಗಳನ್ನು ವಿಧಿಸುವ ಮೂಲಕ ಧಕ್ಕೆ ತರುವುದರಿಂದ ಸಮಸ್ಯೆಯ ತೀವ್ರತೆಯೂ ಅಧಿಕವಾಗುತ್ತದೆ. ಈ ಹಿನ್ನೆಲೆಯಲ್ಲಿ ಪುಣೇಕರರ ಕೃತಿಗಳಲ್ಲಿ ಹಿರಿಯರ ತಲೆಮಾರು ಮಾಡಿದ್ದು ಕಿರಿಯರ ಮೇಲಿನ ನಿಯಂತ್ರಣ ಹೊಂದುವ ಕೆಲಸವನ್ನೇ? ಇದರಿಂದಲೇ ಕಿಟ್ಟಿ ಹಾಗೂ ಗಂಗವ್ವ, ವಂಸತರಾಯ ಹಾಗೂ ದೇಸಾಯಿ, ನಾಣಿ ಮತ್ತು ದೇಸಾಯಿ ತ್ರಸದಸ್ಯು ಹಾಗೂ ಪುರುಕುತ್ಸಾನಿ, ತಾರ್ಕ್ಷ್ಯ ಹಾಗೂ ಪುರುಕುತ್ಸ ಇವರ ಮಧ್ಯೆ ತಲೆಮಾರುಗಳ ಸಂಘರ್ಷ ಉದ್ಭವವಾಗಿದ್ದು. ಇದು ಹಿರಿಯರ ನ್ಯೂನ್ಯತೆಯೂ ಹೌದು. ಏಕೆಂದರೆ ಇವರು ಮೂರು ಕಾದಂಬರಿಗಳಲ್ಲಿಯೂ ಈ ರೀತಿಯ ಸಂಘರ್ಷವನ್ನು ಬೇಕಂತ್ತಲೆ ತರುತ್ತಾರೆ. ಹಾಗೂ ಇದು ಪುಣೇಕರರ ಮಿತಿ ಕಾಣುತ್ತದೆ.

ಮತ್ತೊಂದು ಕಡೆ ನಮ್ಮ ಸಂಸ್ಕೃತಿಯೇ ಶ್ರೇಷ್ಠ ಎಂಬ ಒಂದು ರೀತಿಯ ಸಂಕುಚಿತ ಭಾವನೆ ಪುಣೇಕರರಿಗಿದೆ. ಬೇರೊಂದು ಸಂಸ್ಕೃತಿಯನ್ನು ಸ್ವಲ್ಪ ವಿಶಾಲಾರ್ಥದಲ್ಲಿ ನೋಡಿದ್ದರೆ, ಈ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ. ಇದರಿಂದಲೇ ಹಿರಿಯ ತಲೆಮಾರುಗಳಿಗೆ ಪ್ರಾಮುಖ್ಯತೆ ನೀಡುತ್ತಾರೆ. ಅಷ್ಟೇ ಅಲ್ಲ ಬ್ರಾಹ್ಮಣ ಸಂಸ್ಕೃತಿಗೂ ಸಹ ಮಹತ್ವ ನೀಡುತ್ತಾರೆ. ಈ ಅಂಶವನ್ನು ಗಂಗವ್ವ ಗಂಗಾಮಾಯಿಯಿಂದಲೂ ಸಮರ್ಥಿಸಬಹುದು. ಇಲ್ಲಿ ಜಮೀನ್ದಾರರ ವಿಚಾರಗಳನ್ನು ಸೂಕ್ಷ್ಮವಾಗಿ ತರುತ್ತಾರೆ. ಆದರೆ ಈ ಜಮೀನ್ದಾರಿ ಪದ್ಧತಿಯ ಒಳಿತು ಕೆಡುಕಿನ ಬಗ್ಗೆ ಊಳಿಗಮಾನ್ಯ ವ್ಯವಸ್ಥೆಯ ಬಗೆಗೆ ಚರ್ಚಿಸಲಾರರು. ಜೀತ ಪದ್ಧತಿಯಂತಹ ಸಮಸ್ಯೆಯ ಬಗೆಗೆ ಧ್ವನಿ ಎತ್ತಲಾರರು. ಜಮೀನ್ದಾರರು ಮಾಡಿದ್ದೇ ಉತ್ತಮ ಎಂಬ ಭಾವನೆ ಒಂದು ಮೂಲೆಯಲ್ಲಿ ಮನೆ ಮಾಡಿರುವುದರ ಜೊತೆಗೆ ಕೆಳವರ್ಗದ ಪಾತ್ರ ಪರಿಸ್ಥಿತಿಗಳ ಬಗೆ ಸೂಚ್ಯವಾಗಿಯಾದರೂ ಚರ್ಚಿಸಿಲ್ಲ.

ವಿಪರ್ಯಾಸವೆಂದರೆ, ಅವಧೇಶ್ವರಿಯಲ್ಲಿ ಕ್ಷತ್ರಿಯವರ್ಗದ ಪುರುಕುತ್ಸಾನಿಯನ್ನು ಕೊಂಡಾಡುವ ಇವರು ಬ್ರಾಹ್ಮಣ ವರ್ಗದ ಭೀಮಭಟ್ಟ, ವೃಶಭಟ್ಟ ಮುಂತಾದ ವ್ಯಕ್ತಿಗಳ ವಿರುದ್ಧ ಮಾತನಾಡಿರುವುದು ವಿಶೇಷವಾಗಿದೆ. ಆದರೆ ವೇದಗಳ ಕಾಲದ ಪರಿಸ್ಥಿತಿಯೇ ಆಗಿತ್ತು, ಜೊತೆಗೆ ಕ್ಷತ್ರಿಯರು ಇಡೀ ರಾಜ್ಯವನ್ನು ನಿಯಂತ್ರಿಸಿದರೆ, ಪುರೋಹಿತ ವರ್ಗದವರು ಈ ರಾಜಮನೆತನವನ್ನೇ ಮಂತ್ರ-ತಂತ್ರ, ಯಜ್ಞಯಾಗಾದಿ ಎಂಬ ಹೆಸರಿನಲ್ಲಿ ನಿಯಂತ್ರಿಸುತ್ತಿದ್ದರು. ಇದರಿಂದ ಪುರೋಹಿತ ವರ್ಗದವರೇ ಮೇಲುಗೈ ಸಾಧಿಸುತ್ತಿದ್ದರು. ಇದು

[illegible]

[illegible]

[illegible]

ಅವಧೇಶ್ವರಿಯಲ್ಲಿಯೂ ಸ್ಪಷ್ಟವಾಗುತ್ತದೆ. ಈ ಪುರೋಹಿತಶಾಹಿಯಿಂದಲೇ ತ್ರಸದಸ್ಯು ಮಾನಸಿಕ ದ್ವಂದ್ವದಲ್ಲಿ ತೊಳಲಾಡಿ; ಮಾನಸಿಕ ನೆಮ್ಮದಿಯೇ ಇಲ್ಲದಂತಾಗಿ ಜೀವಿಸಬೇಕಾಗಿ ಬಂತು.

ಅಲ್ಲದೆ ಪುರುಕುತ್ಸಾನಿ ಯಾವ 'ನಿಯೋಗ ಸಂಬಂಧ' ಅಯೋಧ್ಯೆಯ ಸಮಾಜಕ್ಕೆ ತಿಳಿಯಬಾರದೆಂದು, ಮುಚ್ಚಿಡಲು ಪ್ರಯತ್ನಿಸಿದ್ದಳೋ, ಆ ಸಂಬಂಧ ಪುರೋಹಿತಶಾಹಿಯಿಂದಲೇ ಇಡೀ ಅಯೋಧ್ಯೆಯ ಜನರಿಗೆ ತಿಳಿದಿದ್ದು, ಇದರಿಂದ ಪುರುಕುತ್ಸಾನಿಯೇ 'ಸಿಂಹಭಟ್ಟನ ಸೂಳೆ' ಎಂದು ತ್ರಸದಸ್ಯುವಿಗೆ ಹೇಳಿಕೊಳ್ಳಬೇಕಾದ ಸಂದರ್ಭ ನಿರ್ಮಾಣವಾಯಿತ್ತು.

ಪುಣೇಕರರು ತಮ್ಮ ಕಾದಂಬರಿಗಳಲ್ಲಿ ಮಹತ್ವ ನೀಡಿರುವುದು ಒಟ್ಟಾರೆ ಸ್ತ್ರೀ ಪಾತ್ರಗಳಿಗೆ. ಕೃತಿಗಳಿಗೆ ಕೊಟ್ಟ ಶೀರ್ಷಿಕೆಯಿಂದಲೇ ಈ ಅಂಶ ಬೆಳಕಿಗೆ ಬರುತ್ತದೆ. ಗಂಗವ್ವ ಗಂಗಾಮಾಯಿಯಲ್ಲಿ ಗಂಗವ್ವ ಚಂಪಕ್ಕ ಮೆಹಬೂಬಳಿಗೆ ದೊರೆತ ಪ್ರಾಶಸ್ತ್ಯವೂ ನಟ ನಾರಾಯಣಿಯಲ್ಲಿ ರಾಧಕ್ಕ, ಝುಭೇದಬಾನು ಹಾಗೂ ನಾಣಿಯನ್ನು ನಟನಾರಾಯಣಿಯನ್ನಾಗಿ ಮಾಡಿ ಅರೆ ಹೆಣ್ಣಾಗಿ ನೋಡುತ್ತಾರೆ. ಅದೇ ರೀತಿ ಪುರುಕುತ್ಸಾನಿಗೆ ದೊರೆತ ಸ್ಥಾನ ಪುರುಕುತ್ಸ, ತ್ರಸದಸ್ಯುವಿಗೆ ದೊರೆಯಲಾರದೆ ಹೋಯಿತ್ತು. ಯುವಕ ತಲೆಮಾರುಗಳನ್ನು ಒಂದು ಅರೆಬರೆಯ ಪಾತ್ರಗಳಾಗಿ ನೋಡಿ, ಒಂದು ಕೊರತೆಯ ದೃಷ್ಟಿಯಿಂದಲೇ ಚಿತ್ರಿಸುತ್ತಾರೆ.

ಈ ಮಹಿಳೆಯರು ಬಿಂಬಿಸಿದ್ದು ಭಾರತೀಯ ಸಂಸ್ಕೃತಿಯನ್ನು ಹಾಗೂ ತಮ್ಮ ಸಮಾಜದ ಅನುಭವದ ವೈಚಾರಿಕತೆ ಹಾಗೂ ಆಧುನಿಕತೆಯನ್ನು ಪುರುಷ ಪಾತ್ರಗಳು ಬಿಂಬಿಸುತ್ತಿರುವುದು, ಪಾಶ್ಚಾತ್ಯ ಸಮಾಜದ ಆಧುನಿಕತೆಯನ್ನು ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಏಕೆಂದರೆ ಈ ಸ್ತ್ರೀ ಪಾತ್ರಗಳು ರಕ್ತಸಂಬಂಧ ಎಂಬ ಅಡಿಯಲ್ಲಿ ಕೆಲಸಮಾಡಿ, ನೈತಿಕತೆಯನ್ನು ಮೌಲ್ಯವಾಗಿ ಹೊಂದಲು ಸದಾ ಯತ್ನಿಸುತ್ತಾರೆ. ಈ ಹಿನ್ನೆಲೆಯಲ್ಲಿ ಯೌವನಾವಸ್ಥೆ ಹಾಗೂ ಗೃಹಸ್ಥಾಶ್ರಮವನ್ನು ಪರಸ್ಪರ ಮುಖಾಮುಖಿಯಾಗಿ ಸಂಘರ್ಷಿಸುತ್ತಾ ವಿವಿಧ ಭಾವಗಳು ಅನಾವರಣಗೊಂಡು ಗೃಹಸ್ಥಾಶ್ರಮಕ್ಕಿರುವ ಗಾಂಭೀರ್ಯವನ್ನು ಎತ್ತಿಹಿಡಿಯುತ್ತಾರೆ. ಜೊತೆಗೆ ಆಧುನಿಕತೆಯ ಕೆಲವು ಸಮಸ್ಯೆಗಳಿಗೆ ಪರಿಹಾರವೂ ನಮ್ಮ ಸಂಸ್ಕೃತಿಯಲ್ಲಿಯೇ ಇದೆ ಎಂಬ ತೀರ್ಮಾನಕ್ಕೆ ಬರುತ್ತಾರೆ. ಇಲ್ಲಿ ಇನ್ನೊಂದು ರೀತಿಯಾಗಿ ಆಲೋಚಿಸಿದಾಗ ಭಾರತದಲ್ಲಿ ಈಗಾಗಲೇ ಜನಸಂಖ್ಯೆ ಅತ್ಯಾಧಿಕವಾಗಿ ಇದೊಂದು ಸಮಸ್ಯೆಯಾಗಿ ಪರಿಣಮಿಸಿರುವುದರಿಂದ ಪುಣೇಕರರು ಕೇವಲ ಗೃಹಸ್ಥ ಜೀವನಕ್ಕೆ ಏಕೆ ಮಹತ್ವ ನೀಡುತ್ತಾರೋ ತಿಳಿಯದು. ಏಕೆಂದರೆ ಇಲ್ಲಿ ಗೃಹಸ್ಥ ಜೀವನಕ್ಕೆ ಪ್ರವೇಶಿಸಿರುವವರು ಮಕ್ಕಳನ್ನು ಪಡೆದಿರುವುದು ಕಂಡುಬರುತ್ತದೆ.

ಪುಣೇಕರರ ಮಹತ್ವವಿರುವುದು, 'ನಿಯೋಗ' ಸಂಬಂಧದಂತಹ ಸಂದರ್ಭಗಳನ್ನು ಚರ್ಚಿಸುವುದರಲ್ಲಿ. ನವ್ಯ ಅಥವಾ ಸಾಮಾನ್ಯ ವ್ಯಕ್ತಿಗಳಿಗೆ ಈ 'ನಿಯೋಗ ಸಂಬಂಧ'ದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದರೆ, ಅಶ್ಲೀಲವಾಗಿ ಹೋಗಬಹುದಾಗಿತ್ತು. ಆದರೆ ಈ ಸಂದರ್ಭಕ್ಕೆ ಪುಣೇಕರರು ಗಂಭೀರತೆಯ ಮುಖಮುದ್ರೆಯನ್ನು ತಾಳುತ್ತಾರೆ. ಈ ದೃಷ್ಟಿಯಲ್ಲಿ ಹೆಣ್ಣನ್ನು ಒಂದು ಭೋಗದ ವಸ್ತುವಾಗಿ ನೋಡುವುದರ ಮಧ್ಯೆ ಇವರ

ನಿಲುವು ಬದಲಾಗಿದೆ. ಪುಣೇಕರು ಎಂದೂ ಸಹ ಹೆಣ್ಣನ್ನು ಕಾಮದ ಸಂಕೇತವಾಗಿ ನೋಡಲಾರರು. ಇವರಿಗೆ ಸ್ತ್ರೀ 'ತಾಯಿ'ಯ ಸ್ವರೂಪದಲ್ಲಿ ಕಾಣಿಸುತ್ತಾಳೆ. ಇದು ಪುಣೇಕರರಿಗೆ ಸ್ವಭಾವಿಕವಾಗಿ ಬಂದಿರಬಹುದು. ಅಥವಾ ನವೋದಯ ಸಾಹಿತ್ಯದ ಪ್ರೇರಣೆಯೂ ಆಗಿರಬಹುದು. ಪ್ರಾಚೀನ ಕಾಲದಿಂದಲೂ 'ಭೂಮಿಗೆ' ಹೆಣ್ಣಿನ ಸ್ಥಾನಮಾನ ನೀಡಿ ತಾಯಿಯ ಸ್ವರೂಪದಲ್ಲಿ ನೋಡಿರುವುದನ್ನು ನಾವು ಗಮನಿಸಬಹುದು.

ಗಂಗವ್ವ ಗಂಗಾಮಾಯಿ ಹಾಗು ಅವಧೇಶ್ವರಿಯ ನಡುವಿನ ಅಂತರ ಸುಮಾರು ನಲವತ್ತು ವರ್ಷಗಳು. ಈ ನಡುವಿನ ಅವಧಿಯಲ್ಲಿ ನವ್ಯ ಸಾಹಿತ್ಯ ಉದ್ಭವಿಸಿ ಹೆಣ್ಣನ್ನು ಬೋಗದ ವಸ್ತುವಾಗಿ ಗಮನಿಸಿ ಕಾಮವನ್ನೇ ಕೇಂದ್ರವಾಗಿರಿಸಿಕೊಂಡಿದ್ದ ಕಾಲ. ಇದಕ್ಕೆ ನಿದರ್ಶನ ನೀಡುವುದಾದರೆ, ಅನಂತಮೂರ್ತಿಯವರ ಕೆಲವು ಕಾದಂಬರಿಗಳನ್ನೇ ಗಮನಿಸಬಹುದು. ಸಂಸ್ಕಾರ, ಭಾರತೀಪುರ, ಅವಸ್ಥೆ ಮುಂತಾದವುಗಳಲ್ಲಿ ಪುರುಷ ಪಾತ್ರಗಳೇ ಪ್ರತಿಬಿಂಬಿಸುತ್ತವೆಯೇ ಹೊರತು ಸ್ತ್ರೀಯ ಅಂತಃಕರಣವನ್ನು ಪ್ರವೇಶಿಸಲು ಅನಂತಮೂರ್ತಿ ವಿಫಲರಾಗುತ್ತಾರೆ. ಇದು ಬಹುಪಾಲು ನವ್ಯಲೇಖಕರಲ್ಲಿ ಕಂಡುಬರುತ್ತದೆ.

ಇಂತಹ ಪರಿಸ್ಥಿತಿಗಳು ಪುಣೇಕರರಿಗೆ ಮನನೋಯುವ ಸಂಗತಿಗಳಾಗುತ್ತವೆ. ಹೀಗಾಗಿ ಪುಣೇಕರರು ಸ್ತ್ರೀ ಹೆಚ್ಚಿನ ಮಹತ್ವ ನೀಡಿರಬಹುದು. ಆದರೆ ಚಂದ್ರಶೇಖರ ಕಂಬಾರರಂತಹವರ ಸಾಹಿತ್ಯವಿರುವುದು ನವ್ಯಪಂಥದಲ್ಲಿಯೇ ಎಂಬುದು ವಿಶೇಷವಾಗಿ ಗಮನಿಸಬೇಕಾಗುತ್ತದೆ.

ಒಟ್ಟಾರೆ ಧಾರಾವಾಡದಂತಹ ಸಾಹಿತ್ಯ ಸಂಗಮ ಕ್ಷೇತ್ರದಲ್ಲಿದ್ದ ಪುಣೇಕರರಿಗೆ ಬೇಂದ್ರೆಯವರ ದಟ್ಟ ಪ್ರಭಾವವಿದೆ. ಹೀಗಾಗಿ ಬೇಂದ್ರೆ ನೋಡಿದ ದೃಷ್ಟಿಯಲ್ಲಿ ಸ್ತ್ರೀಯನ್ನು ಪುಣೇಕರರು ನೋಡಲು ಬಯಸಿದ್ದಾರೆ. ಈ ದೃಷ್ಟಿಯಲ್ಲಿ ಒಬ್ಬ ಶೋಷಿತನ ಬದುಕನ್ನು ಆ ಶೋಷಿತನೇ ಕಾಣಿಸಬೇಕು. ಮುಸ್ಲಿಂ ಸಂವೇದನೆಯನ್ನು ಮುಸ್ಲಿಂ ಜನಾಂಗದವರೇ ಮಂಡಿಸಬೇಕು. ಜೊತೆಗೆ ಒಬ್ಬ ಸ್ತ್ರೀಯ ಅಂತರಂಗದ ಬದುಕನ್ನು ಸ್ತ್ರೀಯೇ ಮನಗಾಣಿಸಬೇಕೆಂಬ ವಾದವೂ ಪುಣೇಕರರ ಸಾಹಿತ್ಯದಲ್ಲಿ ಚೂರಾಗುತ್ತದೆ. ಏಕೆಂದರೆ ಕನ್ನಡ ಸಾಹಿತ್ಯವಲಯದಲ್ಲಿ ಪುಣೇಕರರ ರೀತಿ ಸ್ತ್ರೀ ಸಂವೇದನೆಯನ್ನು, ಆಕೆಯ ಅಂತಃಕರಣವನ್ನು ಚಿತ್ರಿಸಿರುವವರು ಬಹಳ ಕಡಿಮೆ. ಈ ದೃಷ್ಟಿಯಲ್ಲಿ ಪುಣೇಕರರಿಗೆ ಕನ್ನಡ ಸಾಹಿತ್ಯವಲಯದಲ್ಲಿ ವಿಶಿಷ್ಟ ಸ್ಥಾನ ಪಡೆಯುತ್ತಾರೆ. ಆ ಮೂಲಕವೇ ಒಬ್ಬ ಸಂಸ್ಕೃತಿಯ ಚಿಂತಕರಾಗಿ ಗೋಚರಿಸುತ್ತಾರೆ.

ಭಾಷೆಯ ದೃಷ್ಟಿಯಿಂದ ಪುಣೇಕರರ ಸ್ಥಾನವೂ ಬೇರೆಯಾಗುತ್ತದೆ. ಬಹುಭಾಷಾ ಪಂಡಿತರಾದ ಇವರು ತಮ್ಮ ಕೃತಿಯ ಒಳಗೆ ಎರಡು ಮೂರು ಭಾಷೆಗಳನ್ನು ಬಳಸುತ್ತಾರೆ. ಅನಿವಾರ್ಯ ಸಂದರ್ಭಗಳಲ್ಲಿ ಸಂಸ್ಕೃತ ಭಾಷೆಗೆ ಮಾರುಹೋಗುತ್ತಾರೆ. ಹದವರಿತ ಭಾಷೆಯ ಜೊತೆಯಲ್ಲಿಯೇ ನುಡಿಗಟ್ಟು, ಗಾದೆಗಳ ಬಳಕೆಯೂ ಆಗಿದೆ. ನಿರೂಪಿಸುತ್ತಾ ಹೋಗುವಾಗ, ಓದುಗರನ್ನು ಮುಖ್ಯವಾಗಿ ಗಮನಿಸಿ, ಓದುಗ ಹಾಗೂ ನಿರೂಪಣೆಯ ಮಧ್ಯೆ ಬಿರುಕು ಉಂಟಾಯಿತ್ತು ಎನ್ನುವಾಗ ನೇರವಾಗಿ "ಪ್ರಿಯಾವಾಚಕರೆ" ಎಂದು, ಓದುಗರನ್ನು ತಮ್ಮತ್ತ ಸೆಳೆದುಕೊಳ್ಳುವುದು ವಿಶೇಷವಾಗಿದೆ. ಪ್ರಿಯಾವಾಚಕರೆ ಎಂಬ ಶಬ್ದವೇ ಓದುಗರ ಮನಸ್ಸನ್ನು ಸೂರೆಗೊಳ್ಳುತ್ತದೆ.

ಶಿಷ್ಟಭಾಷೆ, ಆಡುನುಡಿ, ನುಡಿಗಟ್ಟುಗಳ ಬಳಕೆಯಿಂದ ಸಹಜ ಸಂಭಾಷಣೆಯ ಶಿಷ್ಟವಾದ ಕಥನಕ್ರಮವೂ ಕಾದಂಬರಿಗೆ ವಿಶಿಷ್ಟತೆಯನ್ನು ನೀಡಿದೆ ನಿರೂಪಣೆಯೂ ನೀರಸವಾಗಿಲ್ಲ. ಅಲ್ಲಲ್ಲಿ ಪತ್ರಗಳ(ರಾಘಪ್ಪ, ಅಚ್ಯುತ ಬರೆದ ಪತ್ರಗಳು) ಬಳಕೆಯು ಕೃತಿಯ ನಿರೂಪಣೆ ಸಹಾಯಕವಾಗಿದೆ. ಈ ರೀತಿಯ ಪತ್ರಗಳ ಸಮಂಜಸ ಬಳಕೆಯೂ ಬೇರಾವ ಕೃತಿಕಾರನಿಗೂ ಬರಲಾರದೆಂದೆ ಹೇಳಬಹುದು.

ಒಟ್ಟಾರೆ ಸಮಾಜವು ನೈತಿಕತೆಗೆ ಹಣವನ್ನೇ ಪ್ರಮಾಣವಾಗಿ ಸ್ವೀಕರಿಸುತ್ತಿರುವುದು ಮಾತ್ರದುರಂತ. ಈ ಮಿತಿಯನ್ನು ಸಂಪ್ರದಾಯದ ಮುದ್ರೆಯಲ್ಲಿ ಕಣ್ತೆರದು ತೋರಿಸುತ್ತಿದೆ. ಅಲ್ಲದೆ ವಿಮರ್ಶಕ ಅಭಿಪ್ರಾಯ ಪಡುವಂತೆ ಹಠದಿಂದ ಸಂಪ್ರದಾಯವನ್ನು ಇವರು ಅನುಸರಿಸುತ್ತಿರುವಂತೆ ಮೇಲು ನೋಟಕ್ಕೆ ಗೋಚರಿಸಿದರೂ, ಸಂಸ್ಕೃತಿಯ ಒಳಗೆ ಇರುವ ಮೌಲ್ಯಗಳನ್ನು ಹೇಳುತ್ತಾ ಅಮೌಲ್ಯ ಸಂಸ್ಕೃತಿಯು ಅಳಿದು, ಬೆಲೆಯುಳ್ಳ ಸಮಾನ ಸಂಸ್ಕೃತಿಗಾಗಿ ಶೋಧಮಾಡಿರುವುದರಿಂದ ಬದಲಾವಣೆ ಸಮಾಜದ ನಿಯಮ. ಈ ಬದಲಾವಣೆಯು ಧನಾತ್ಮಕವಾಗಿರಬೇಕು. ಆಧುನಿಕತೆಯು ಮತ್ತೊಬ್ಬರ ಧಮನ ಮಾಡುವಂತೆ ಇರಬಾರದು. ಅದು ಎಲ್ಲಾ ವರ್ಗದ ಜನರನ್ನು ಮನುಷ್ಯತ್ವದ ನೆಲೆಯಲ್ಲಿ ಒಗ್ಗೂಡಿಸುವಂತಿರಬೇಕು. ಈ ದೃಷ್ಠಿಯಿಂದ ಪುಣೇಕರರ ಕೃತಿಗಳು ಮಹತ್ವವಾಗುತ್ತದೆ.

ಪ್ರಾಚೀನ-ಆಧುನಿಕ ಎನ್ನುವ ಪರಿಕಲ್ಪನೆಯನ್ನು ಗಂಭೀರವಾಗಿ ತೆಗೆದುಕೊಂಡು ಪುಣೇಕರರು ಹಳೆಯದೆಲ್ಲಾ ಶ್ರೇಷ್ಠ, ಹೊಸದೆಲ್ಲಾ ರೋಗಗ್ರಸ್ತವಾದದ್ದು ಎನ್ನುವ ರೀತಿಯಲ್ಲಿ ಅಲ್ಲ. ಇವೆರಡು ಸಾಮಾಜಿಕ ರಚನೆಯಲ್ಲಿ ಹೇಗೆ ಅನಿವಾರ್ಯವಾಗಿವೆ. ಎಂಬುದು ಇವರ ಕೃತಿಗಳಿಂದ ತಿಳಿದುಬರುತ್ತದೆ. ಪ್ರಾಚೀನ ಮತ್ತು ಆಧುನಿಕ ಎಂಬ ಎರಡು ಚಿಂತನೆಯ ಮಾರ್ಗಗಳು ಒಗ್ಗೂಡಿದಾಗ ಮಾತ್ರ ಮತ್ತೊಂದು ಸೃಜನಶೀಲ ವ್ಯಕ್ತಿತ್ವ ರೂಪುಗೊಳ್ಳುತ್ತದೆ ಎಂಬುದಕ್ಕೆ ಪುಣೇಕರರೇ ನಮಗೆ ಸ್ಪಷ್ಟ ನಿದರ್ಶನವಾಗುತ್ತಾರೆ.

ಸಂಸ್ಕೃತಿಯ ಚಿಂತನೆಗಳನ್ನು ಇಂದಿನ ವೈಜ್ಞಾನಿಕ ವೈಚಾರಿಕ ವಿಶ್ಲೇಷಣೆಗಳಿಂದಲೇ ಎಲ್ಲವನ್ನು ವಿವರಿಸಿ ಬಿಡುವವರ ಮಧ್ಯೆ ಪುಣೇಕರರು ಈ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ವೈಚಾರಿಕ ಮಾನದಂಡಗಳಿಂದಷ್ಟೇ ಮಾತ್ರ ಸಾಧ್ಯವಿಲ್ಲ ಎಂಬ ನಿಲುವು ಹೊಂದಿರುವುದು ಸ್ಪಷ್ಟವಾಗುತ್ತದೆ. ಹೀಗಾಗಿ ಒಬ್ಬ ಸಂಸ್ಕೃತಿ ಚಿಂತಕರಾಗಿ ಕಂಡುಬರುತ್ತಾರೆ. ಈ ಸಂಸ್ಕೃತಿ ಚಿಂತನೆಯ ಒಳಗಿದ್ದು, ನಮ್ಮ ಹಾಗೂ ಪಾಶ್ಚಾತ್ಯ ಸಾಹಿತ್ಯದಿಂದ ನಾವು ಕಲಿಯುವುದು ಬಹಳಷ್ಟಿಲ್ಲ ಎಂದು ಹೇಳುವುದು ಸಮಂಜಸವಲ್ಲ.

ಪುಣೇಕರರ ಮೂರು ಕಾದಂಬರಿಗಳನ್ನು ಸಂಪ್ರದಾಯ ಮತ್ತು ಆಧುನಿಕತೆ ನಡುವಿನ ಸಂಘರ್ಷವಾಗಿ ನೋಡಲಾಗಿದ್ದು, ಮುಂದೆ ಇವರ ಕೃತಿಗಳನ್ನು ಸ್ತ್ರೀವಾದಿ ದೃಷ್ಟಿಯಿಂದಲೂ ಅಧ್ಯಯನ ಮಾಡಲು ಯೋಗ್ಯವಾಗಿದೆ. ಅಷ್ಟೇ ಅಲ್ಲ ಪುಣೇಕರರು ನಿರ್ಮಿಸಿದ 'ಗಂಗವ್ವ'ನಂತಹ ಪಾತ್ರಗಳನ್ನು ಕನ್ನಡ ಸಾಹಿತ್ಯ ವಲಯದಲ್ಲಿರುವ, ಉದಾಹರಣೆಗೆ ಎಂ.ಕೆ.ಇಂದಿರಾರವರ 'ಫಣಿಯಮ್ಮ', ಒಡಲಾಳದ 'ಸಾಕವ್ವ', ಮುಸ್ಸಂಜೆಯ ಕಥಾ ಪ್ರಸಂಗದ 'ರಂಗವ್ವ' -ಇಂತಹ ಕೆಲವು ಪಾತ್ರಗಳನ್ನು ಇಟ್ಟುಕೊಂಡು ಈ ವಿಧವೆ ಸ್ತ್ರೀಯರು ತಮ್ಮ

[illegible]

[illegible]

[illegible]

[illegible]

[illegible]

ಕುಟುಂಬವನ್ನು ಸಾಕಿಸಲಹುದರಲ್ಲಿ ತಮ್ಮನ್ನು ನಂಬಿ ಬದುಕುತ್ತಿರುವವರನ್ನು ರಕ್ಷಿಸುವಲ್ಲಿ ತೋರುವ ಛಲವೂ, "ದೃಢವಾಗಿ ಬದುಕುವ ಛಲ"ವಾಗಿ ಪರಿಣಮಿಸಿದೆ. ಹೀಗಾಗಿ ತೌಲನಿಕ ಅಧ್ಯಯನ ಮಾಡಲು ಯೋಗ್ಯವಾಗಿವೆ. ಇವುಗಳಲ್ಲಿ ಪುಣೇಕರರು ಗಂಗವ್ವ 'ರಂಗವ್ವ'ನ ವಿಶಿಷ್ಟತೆ ಏನು ಎಂಬುದನ್ನು ಅರಿಯಬಹುದಾಗಿದೆ. ಅಷ್ಟೇ ಅಲ್ಲದೆ ಇತರ ಕಾದಂಬರಿಗಳನ್ನು ತಲೆಮಾರು ಸಂಘರ್ಷದ ನೆಲೆಯಲ್ಲೂ ಅಧ್ಯಯನವನ್ನು ಮಾಡಬಹುದು. ಹೀಗಾಗಿ ಇನ್ನು ಹಲವಾರು ಅಧ್ಯಯನದ ಸಾಧ್ಯತೆಗಳಿವೆ ಎಂಬುದನ್ನು ಸ್ಪಷ್ಟವಾಗಿ ಹೇಳುಬಹುದು.

ಹೀಗಾಗಿ ಮೂರು ಕೃತಿಗಳಲ್ಲೂ ದೇವರನ್ನು ವಿಡಂಬನೆ ಮಾಡಲು ಬಳಸಿಕೊಂಡಿದ್ದಾರೆ. ಏಕೆಂದರೆ ಎಷ್ಟೆ ಅಪರಾಧ ಮಾಡಿದ್ದರೂ ಕೊನೆಗೆ ಪರಿಹಾರವೆಂಬಂತೆ ದೇವರ ಮೊರೆ ಹೋಗುವುದು, ಹಾಗೂ ನಂತರದಲ್ಲಿ ಮತ್ತೆ ತಪ್ಪು ಮಾಡುವುದು. ಇವುಗಳಿಗೆಲ್ಲಾ ದೇವರು ಎಂಬ ನಂಬಿಕೆಯನ್ನು ಆಟದ ಚೆಂಡಾಗಿ ಭಾವಿಸಿರುವುದರ ಬಗ್ಗೆ ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾರೆ. ಹೀಗಾಗಿ ಇವರ ಕಾದಂಬರಿಗಳು ಮಹತ್ವದಿಂದ ಕೂಡಿವೆ.

೭.೨. ಪರಾಮರ್ಶನ ಗ್ರಂಥಸೂಚಿ

I ಪ್ರಾಥಮಿಕ ಆಕರಗಳು

ಶಂಕರಮೊಕಾಶಿ ಪುಣೇಕರ ಅವರ

೧. ಅವಧೇಶ್ವರಿ, ೧೯೮೭, ಗೀತಾಬುಕ್ ಹೌಸ್, ಮೈಸೂರು, ೧೯೯೫

೨. ಗಂಗವ್ವ ಗಂಗಾಮಾಯಿ, ೧೯೫೬, ಸುರುಚಿ ಪ್ರಕಾಶ, ಮೈಸೂರು, ೧೯೭೪

೩. ನಟನಾರಾಯಣಿ, ಸಾಹಿತ್ಯ ಭಂಡಾರ, ಬೆಂಗಳೂರು, ೧೯೮೮

II ಮಾಧ್ಯಮಿಕ ಆಕರಗಳು

೪. ಅಮರೇಶನುಗಡೋಣಿ(ಸಂ), 'ವಚನಗಳ ಶಿಲ್ಪವಿಧಾನ' (ಶಂಕರಮೊಕಾಸಿ ಪುಣೇಕರ) ಬಸವಣ್ಣನ ವಚನಗಳು ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೫. ಅರವಿಂದ ಚೊಕ್ಕಾಡಿ, 'ಆಧುನಿಕತೆಯಲ್ಲಿ ಭಾವನೆ' "ಮಧ್ಯಮ ಪಥ", ಅನನ್ಯ ಪ್ರಕಾಶನ, ಧಾರವಾಡ, ೨೦೦೩

೬. ಆಮೂರ.ಜಿ.ಎಸ್., 'ಕನ್ನಡದ ಹತ್ತು ಶ್ರೇಷ್ಠ ಕಾದಂಬರಿಗಳು', 'ಅರ್ಥಲೋಕ', ಸ್ನೇಹ ಪ್ರಕಾಶನ, ಬೆಂಗಳೂರು, ೧೯೯೮

೭. ಕುರ್ತಕೋಟಿ, ಕೀರ್ತಿನಾಥ, ಯುಗಧರ್ಮ ಹಾಗು ಸಾಹಿತ್ಯ ದರ್ಶನ, ಮನೋಹರ ಗ್ರಂಥಮಾಲೆ : ಧಾರವಾಡ, ೨೦೦೩

೮. ಕುರ್ತಕೋಟಿ ಕೀರ್ತಿನಾಥ, ನೂರುಮರ ನೂರು ಸ್ವರ, ಮನೋಹರ ಗ್ರಂಥಮಾಲೆ, ಧಾರಾವಾಡ, ೧೯೯೧

೯. ಕೇಶವಶರ್ಮ.ಕೆ., 'ವಸಾಹತುಶಾಹಿ ಮತ್ತು ದೇಶಿಯ ಸಂಸ್ಕೃತಿಗಳ ಅನುಸಂಧಾನ' ನಮೋದಯ ವಿಮರ್ಶೆ, ಜನವಾದಿ ಪ್ರಕಾಶನ, ಗುಂಡ್ಮಿ, ೧೯೯೦

೧೦. ಗೋಪಾಲಕೃಷ್ಣಯ್ಯ ಕೆ.ಎಲ್., 'ಅವಧೇಶ್ವರಿ ಒಂದು ವಿಶ್ಲೇಷಣೆ', ಸಾಹಿತ್ಯ ಸಂವಾದ, ವಿಶ್ರಾಂತ ಪ್ರಕಾಶನ, ಬೆಂಗಳೂರು, ೧೯೯೩

೧೧. ಗೋವಿಂದರಾಜು ಗಿರಡ್ಡಿ, ೧೯೭೬, 'ಕನ್ನಡ ಕಾದಂಬರಿಯಲ್ಲಿ ನವ್ಯತೆ', ಕಾದಂಬರಿ : ವಸ್ತು ಮತ್ತು ತಂತ್ರ, ಸ್ನೇಹ ಪ್ರಕಾಶನ, ಬೆಂಗಳೂರು, ೧೯೮೭.

೧೨. ಗುಂಡಣ್ಣ ಕಲಬುರ್ಗಿ, 'ಆಧುನಿಕ ಕನ್ನಡ ಕಾವ್ಯ ಪರಂಪರೆ', ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೆ, ಸೌಜನ್ಯ ಪ್ರಕಾಶನ, ೨೦೦೦.

೧೩. ದಾಮೋದರರಾವ್ ಬಿ., 'ಗಂಗವ್ವ ಗಂಗಾಮಾಹಿಯ ಅನನ್ಯತೆ', ಆಯಾಮಗಳು, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, ೧೯೯೩

೧೪. ನಾಗಭೂಷಣಸ್ವಾಮಿ ಓ.ಎಲ್., ವಿಮರ್ಶೆಯ ಪರಿಭಾಷೆ, ಅಂಕಿತ ಪ್ರಕಾಶನ, ಬೆಂಗಳೂರು, ೧೯೯೮.

೧೫. ನಾಯಕ್ ಜಿ.ಹೆಚ್.(ಸಂ), ಶತಮಾನದ ಕನ್ನಡ ಸಾಹಿತ್ಯ ಸಂಪುಟ ೧, ಶ್ರೀರಾಘವೇಂದ್ರ ಪ್ರಕಾಶನ, ಬೆಂಗಳೂರು, ೧೯೯೮.

೧೬. ನಾರಾಯಣ.ಕೆ.ವಿ., 'ಕನ್ನಡ ಸಾಹಿತ್ಯ : ಬೇರು, ಕಾಂಡ, ಚಿಗುರು', ಬೇರು ಕಾಂಡ ಚಿಗುರು, ವಿವೇಕ ಪ್ರಕಾಶನ, ಬೆಂಗಳೂರು, ೧೯೯೭.

೧೭. ತರೀಕೆರೆ, ರಹಮತ್, ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪

೧೮. ತರೀಕೆರೆ, ರಹಮತ್(ಸಂ), ಕನ್ನಡ ಅಧ್ಯಯನ(ಮಳೆಸಂಚಿಕೆ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೧೯. ಹೆಗಡೆ ಜಿ.ಎಂ., 'ಶಂಕರ ಮೊಕಾಶಿಪುಣೇಕರರ ಗಂಗವ್ವ ಗಂಗಾಮಾಯಿ', ಸಾಹಿತ್ಯ ಮತ್ತು ಸಹೃದಯತೆ, ರಂಜನಾ ಪ್ರಕಾಶನ, ಧಾರವಾಡ, ೧೯೯೬.

೨೦. ಹೆಗಡೆ ಜಿ.ಎಂ, ಸಾಹಿತ್ಯವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೯.

೨೧. ಹುಳಿಯಾರ, ನಟರಾಜ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೪.

೨೨. ಸಿದ್ಧಲಿಂಗಯ್ಯ ಜಿ.ಎಸ್. ಮತ್ತು ಕೃಷ್ಣಯ್ಯ ಎಂ.ಎಚ್.(ಸಂ), ಸಾಲುದೀಪಗಳು, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧.

೨೩. ಶಾಂತಿನಾಥದೇಸಾಯಿ, ನವ್ಯ ಸಾಹಿತ್ಯ ದರ್ಶನ, ಪರಿಸರ ಪ್ರಕಾಶನ, ಶಿವಮೊಗ್ಗ, ೧೯೯೦.

೨೪. ಶ್ಯಾಮಸುಂದರ ಬಿದರಕುಂದಿ, ರಮಾಕಾಂತಜೋಶಿ, ಹೆಗಡೆ.ಜಿ.ಎಂ (ಸಂ), ಗಂಧಕೊರಡು, (ಡಾ.ಶಂಕರ ಮಾಕಾಶಿ ಪುಣೇಕರ ಅಭಿನಂದನ ಗ್ರಂಥ), ಡಾ.ಶಂಕರ ಮಾಕಾಶಿ ಪುಣೇಕರ ಅಭಿನಂದನಾ ಸಮಿತಿ, ಮಾಳಯಡ್ಡಿ, ಧಾರವಾಡ, ೧೯೯೮.

೨೫. ಶೇಷಗಿರಿರಾವ್ ಎಲ್.ಎಸ್., ೧೯೯೮, ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೩.